ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 37 | ಸೆಪ್ಟೆಂಬರ್ 06-12, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ದಮನ ತಂತ್ರಕ್ಕೆ ರೈತರು ಮಣಿಯುವುದಿಲ್ಲ - ಕಾಂ. ಹನ್ನನ್ ಮೊಲ್ಲ




ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯ 700 ಕೋಟಿ ರೂ ಖಾಸಗಿ ಆಸ್ಪತ್ರೆಗೆ

ಅಧಿಕಾರಸ್ಥರ ಎದುರು ಸತ್ಯವನ್ನು ಹೇಳುವುದು ನಾಗರಿಕರ ಹಕ್ಕು ಮತ್ತು ಕರ್ತವ್ಯ

- ನ್ಯಾಯಮೂರ್ತಿಗಳ ಮನದ ಮಾತು



ಉಳ್ಳವರಿಗೆ ಮಣೆ ಹಾಕುವ ನೂತನ ಶಿಕ್ಷಣ ನೀತಿ





ಸೆಪ್ಟೆಂಬರ್ 25 ಭಾರತ್ ಬಂದ್

ಸಂಯುಕ್ತ ಕಿಸಾನ್ ಮೋರ್ಚಾ ಕರೆ





ಸ್ವಾತಂತ್ರ್ಯ ಚಳುವಳಿಯಿಂದ ದೂರ ನಿಲ್ಲುವ ವಾಗ್ದಾನದ ಆರೆಸ್ಸೆಸ್ 'ವೀರ'





ಸಂಯುಕ್ತ ಕಿಸಾನ್ ಮೋರ್ಚಾ ಕರೆ: ಸಪ್ಟಂಬರ್ 25 ರಂದು ಭಾರತ್ ಬಂದ್

ಆಗಸ್ಟ್ 26–27ರಂದು ದಿಲ್ಲಿ ಸಮೀಪದ ಸಿಂಘು ಗಡಿಯಲ್ಲಿ ನಡೆದ ಬೃಹತ್ ರಾಷ್ಟ್ರೀಯ ಸಮಾವೇಶ ಸಪ್ಟಂಬರ್ 25 ರಂದು ಭಾರತ್ ಬಂದ್ ಗೆ ಕರೆ ನೀಡಿದೆ.

ಸಪ್ಟಂಬರ್ 5ರಂದು ಉತ್ತರಪ್ರದೇಶದ ಮುಝಪ್ಪರ್‌ನಗರದಲ್ಲಿ ನಡೆಯಲಿರುವ ಕಿಸಾನ್ ಮಹಾಪಂಚಾಯತನ್ನು ಯಶಸ್ವಿಗೊಳಿಸಬೇಕು ಎಂದೂ ಸಂಯುಕ್ತ ಕಿಸಾನ್ ಮೋರ್ಚಾ ಸಂಯೋಜಿಸಿದ್ದ ಈ ರಾಷ್ಟ್ರೀಯ ಸಮಾವೇಶ ಕರೆ ನೀಡಿದೆ. ಈ ಮಹಾಪಂಚಾಯತ್‌ನೊಂದಿಗೆ "ಉತ್ತರಪ್ರದೇಶ ಉತ್ತರಾಖಂಡ ಮಿಷನ್" ಆರಂಭವಾಗಲಿದ್ದು ಅದನ್ನು ಎರಡೂ ರಾಜ್ಯಗಳಲ್ಲಿ ಬುಡಮಟ್ಟದ ವರೆಗೆ ಒಯ್ದು, ಅಲ್ಲಿ ಸದ್ಯದಲ್ಲೇ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಆಳ್ವಿಕೆಗಳ ಸೋಲನ್ನು ಖಾತ್ರಿಪಡಿಸಬೇಕು ಎಂದೂ ರೈತರು ನಿರ್ಧರಿಸಿದ್ದಾರೆ.

ದಿಲ್ಲಿ ಗಡಿಗಳಲ್ಲಿ ರೈತರ ಬೃಹತ್ ಹೋರಾಟ 9 ತಿಂಗಳುಗಳನ್ನು ಪೂರೈಸುದ ಸಂದರ್ಭದಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ಈ ರಾಷ್ಟ್ರೀಯ ಸಮಾವೇಶವನ್ನು ಸಂಘಟಿಸಿತ್ತು. ಈ ಎರಡು ದಿನಗಳ ರಾಷ್ಟ್ರೀಯ ಸಮಾವೇಶ ಎಲ್ಲ ಜಿಲ್ಲೆಗಳು ಮತ್ತು ರಾಜ್ಯಗಳಲ್ಲಿ ಎಸ್.ಕೆ.ಎಂ. ಸಮಿತಿಗಳನ್ನು ರಚಿಸಿ ರೈತರ ಹೋರಾಟವನ್ನು ದೇಶವ್ಯಾಪಿಯಾಗಿ ವಿಸ್ತರಿಸಬೇಕು ಮತ್ತು ತೀವ್ರಗೊಳಿಸಬೇಕು ಎಂದೂ ಕರೆ ನೀಡಿದೆ.

22 ರಾಜ್ಯಗಳ ನೂರಕ್ಕೂ ಹೆಚ್ಚು ರೈತ ಸಂಘಟನೆಗಳಿಂದ 2000ಕ್ಕೂ ಹೆಚ್ಚು ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು. ರೈತರು ಮಾತ್ರವಲ್ಲದೆ ಕಾರ್ಮಿಕರು, ಕೃಷಿಕೂಲಿಕಾರರು, ಮಹಿಳಾ, ಯುವಜನ, ವಿದ್ಯಾರ್ಥಿ, ದಲಿತ, ಬುಡಕಟ್ಟು ಸಂಘಟನೆಗಳ ಪ್ರತಿನಿಧಿಗಳೂ ಇದರಲ್ಲಿ ಭಾಗವಹಿಸಿ ಇದನ್ನು ನಿಜಕ್ಕೂ ರಾಷ್ಟ್ರಿಯ ಸಮಾವೇಶವಾಗಿಸಿದರು ಎಂದು ಎಸ್.ಕೆ.ಎಂ ಹೇಳಿದೆ.

ಈ ರೈತ ಹೋರಾಟದ 600ಕ್ಕೂ ಹೆಚ್ಚು ಹುತಾತ್ಮರಿಗೆ ಶ್ರದ್ಧಾಂಜಲಿಯೊಂದಿಗೆ ಆರಂಭವಾದ ಈ ಸಮಾವೇಶವನ್ನು ರೈತ ಮುಖಂಡ ರಾಕೇಶ್ ಟಿಕಾಯ್ತ್ ಉದ್ಘಾಟಿಸಿದರು.

ರೈತರ ಸಮಸ್ಯೆಗಳನ್ನು ಕುರಿತ ಉದ್ಘಾಟನಾ ಅಧಿವೇಶನವನ್ನು ಉದ್ದೇಶಿಸಿ ಹನ್ನನ್ ಮೊಲ್ಲ, ಅತುಲ್ ಕುಮಾರ್ ಅಂಜಾನ್, ದರ್ಶನ್ ಪಾಲ್, ಜೊಗಿಂದರ್‌ಸಿಂಗ್ ಉಗ್ರಹಾನ್, ಮೇಧಾ ಪಾಟ್ಕರ್, ಯೋಗೇಂದ್ರ ಯಾದವ್ ಮತ್ತಿತರ ಎಸ್‌ಕೆಎಂ ಮತ್ತು ರೈತ ಚಳುವಳಿಯ ಮುಖಂಡರು ಮಾತನಾಡಿದರು.

ಇದರ ನಂತರ ಪ್ರತ್ಯೇಕ ಅಧಿವೇಶನಗಳು ನಡೆದವು. ಇವನ್ನು ಉದ್ದೇಶಿಸಿ ಕಾರ್ಮಿಕ ಮುಖಂಡರು, ಕೃಷಿಕೂಲಿಕಾರ ಸಂಘಟನೆಗಳ ಮುಖಂಡರು, ದಲಿತರು, ಬುಡಕಟ್ಟು ಜನಗಳು, ಮಹಿಳಾ, ಯುವಜನ, ವಿದ್ಯಾರ್ಥಿ ಸಂಘಟನೆಗಳ ಮುಖಂಡರು ಮಾತಾಡಿದರು.

ಕಳೆದ 9 ತಿಂಗಳಿಂದ ರೈತರು ದೇಶದ ರಾಜಧಾನಿಯ ಗಡಿಗಳಲ್ಲಿ ಎತ್ತುತ್ತ ಬಂದಿರುವ ಮೂರು ಪ್ರಮುಖ ಬೇಡಿಕೆಗಳಲ್ಲದೆ, ನಾಲ್ಕು ಕಾರ್ಮಿಕ ಸಂಹಿತೆಗಳ ರದ್ದತಿ, ನಿರುದ್ಯೋಗ, ಹಸಿವು, ಮನರೇಗದ ವಿಸ್ತರಣೆ ಮುಂತಾದ ಬೇಡಿಕೆಗಳನ್ನು ಬೆಂಬಲಿಸಿ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಆರೆಸ್ಸೆಸ್–ಬಿಜೆಪಿಯ ವಿಭಜನಕಾರೀ ಕೋಮುವಾದದ ವಿರುದ್ಧ, ಮತ್ತು ಮೋದಿ ಆಳ್ವಿಕೆ ದೇಶವನ್ನು ಕಾರ್ಪೊರೇಟ್‌ಗಳಿಗೆ ಮಾರುತ್ತಿರುವುದರ ವಿರುದ್ಧ ನಿರ್ಣಯಗಳನ್ನೂ ಅಂಗೀಕರಿಸಲಾಯಿತು.

ಸಂಯುಕ್ತ ಕಿಸಾನ್ ಮೋರ್ಚಾ ಕರೆಗೆ ಬೆಂಬಲ ನೀಡಲು ಜನತೆಗೆ ಎಡಪಕ್ಷಗಳ ಮನವಿ

ಕೃಷಿ ಕಾಯ್ದೆಗಳ ರದ್ಧತಿ ಮತ್ತು ಕನಿಷ್ಟ ಬೆಂಬಲ ಬೆಲೆಗೆ ಒಂದು ಕಾನೂನಾತ್ಮಕ ಖಾತ್ರಿಗಾಗಿ ಚಾರಿತ್ರಿಕ ರೈತ ಹೋರಾಟ 10ನೇ ತಿಂಗಳಲ್ಲಿ ಮುಂದುವರೆಯುತ್ತಿದೆ. ಮೋದಿ ಸರಕಾರ ಈಗಲೂ ತನ್ನ ಮೊಂಡುತನವನ್ನು ಮುಂದುವರೆಸುತ್ತಿದೆ, ಹೋರಾಟ ನಡೆಸುತ್ತಿರುವ ರೈತರೊಂದಿಗೆ ಮಾತುಕತೆ ನಡೆಸಲು ನಿರಾಕರಿಸುತ್ತಿದೆ ಎಂದು ಐದು ಎಡಪಕ್ಷಗಳು ಖೇದ ಪಡಿಸಿವೆ. ಮೋದಿ ಸರಕಾರದ ಈ ಮೊಂಡುತನವನ್ನು ಖಂಡಿಸುತ್ತ ಕೃಷಿ ಕಾಯ್ದೆಗಳನ್ನು ತಕ್ಷಣವೇ ರದ್ದು ಮಾಡಬೇಕು, ಕನಿಷ್ಟ ಬೆಂಬಲ ಬೆಲೆ ಖಾತ್ರಿಯನ್ನು ಜಾರಿಗೊಳಿಸಬೇಕು, ರಾಷ್ಟ್ರೀಯ ಆಸ್ತಿ ನಗದೀಕರಣ ಕ್ರಮಸರಣಿಯನ್ನು ರದ್ದು ಮಾಡಬೇಕು ಹಾಗೂ ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿವೆ.

ಈ ಭಾರತ್ ಬಂದ್‌ನ ಕರೆಯ ಯಶಸ್ಸಿಗೆ ಶ್ರಮಿಸಬೇಕು ಎಂದು ತಮ್ಮ ಎಲ್ಲ ಘಟಕಗಳಿಗೆ ಕರೆ ನೀಡಿರುವ ಈ ಐದು ಎಡಪಕ್ಷಗಳು, ಸಿಪಿಐ(ಎಂ), ಸಿಪಿಐ, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ ಮತ್ತು ಸಿಪಿಐ(ಎಂಎಲ್)–ಲಿಬರೇಷನ್, ಭಾರತ್ ಬಂದ್ ನ್ನು ಬೆಂಬಲಿಸುವಂತೆ ಜನತೆಗೆ ಮನವಿ ಮಾಡಿವೆ.

ಸಿಐಟಿಯು ಬೆಂಬಲ

ಸಿಐಟಿಯು ಸಂಯುಕ್ತ ಕಿಸಾನ್ ಮೋರ್ಚಾದ ಭಾರತ್ ಬಂದ್ ಕರೆಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತ ಸಮಸ್ತ ಕಾರ್ಮಿಕ ವರ್ಗ ಇದನ್ನು ಬೆಂಬಲಸಿಬೇಕು ಎಂದು ಕರೆ ನಿಡಿದೆ.

ಸಂಯುಕ್ತ ಕಿಸಾನ್ ಮೋರ್ಚಾ ಕಾರ್ಮಿಕ ಸಂಘಟನೆಗಳು, ಮಹಿಳಾ, ವಿದ್ಯಾರ್ಥಿ, ಯುವಜನ ಮತ್ತಿತರ ಸಂಘಟನೆಗಳನ್ನೂ ಈ ಕಾರ್ಯಾಚರಣೆಗಳಲ್ಲಿ ಒಳಗೊಂಡು ಅವರ ಬೇಡಿಕೆಗಳನ್ನೂ ಬೇಂಬಲಿಸಲು ಮುತುವರ್ಜಿ ವಹಿಸಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಸಿಐಟಿಯು ಹರ್‍ಯಾಣದ ಬಿಜೆಪಿ ಸರಕಾರದ ರೈತರ ಪ್ರತಿಭಟನೆಯನ್ನು ದಮನ ಮಾಡಲು ನಡೆಸಿಸ ಭೀಕರ ಲಾಥೀ ಪ್ರಹಾರವನ್ನು ಖಂಡಿಸಿದೆ, ಮತ್ತು ಇಂತಹ ಕ್ರಮಗಳಿಂದ ಈ ಹೋರಾಟವನ್ನು ದಮನ ಮಾಡಬಹುದೆಂದು ಮೋದಿ ಸರಕಾರ ಯೋಚಿಸಿದ್ದರೆ ಅದು ಬಹಳ ತಪ್ಪಾಗುತ್ತದೆ ಎಂದು ಎಚ್ಚರಿಸಿದೆ.

ಹರ್‍ಯಾಣ ಪೋಲೀಸ್ ದಮನಕ್ಕೆ ಬಲಿಯಾದ ಸುಶೀಲ್ ಕಾಜಲ್

–ಎಐಕೆಎಸ್ ತೀವ್ರ ಶೋಕ, ಎಸ್‌ಡಿಎಂ ವಜಾಕ್ಕೆ, ನ್ಯಾಯಾಂಗ ತನಿಖೆಗೆ ಒತ್ತಾಯ

ಆಗಸ್ಟ್ 28ರಂದು ಹರ್ಯಾಣದ ಕರ್ನಾಲ್‌ನಲ್ಲಿ ಸೀನಿಯರ್ ಡಿವಿಜನಲ್ ಮ್ಯಾಜಿಸ್ಟ್ರೇಟ್(ಎಸ್‌ಡಿಎಂ) ಆಯುಷ್ ಸಿನ್ಹರವರ 'ಲಾಠಿಗಳಿಂದ ಹಿಂದೆ–ಮುಂದೆ ನೋಡದೆ ತಲೆ ಒಡೆಯಿರಿ' ಎಂಬ ಆದೇಶಕ್ಕೆ 55 ವರ್ಷದ ರೈತ ಸುಶೀಲ್ ಕಾಜಲ್ ಬಲಿಯಾಗಿದ್ದಾರೆ. ತಲೆಗೆ ತೀವ್ರ ಲಾಠಿಯೇಟುಗಳಿಂದ ಗಾಯಗೊಂಡಿದ್ದ ಅವರು ರಾತ್ರಿ ವೇಳೆಗೆ ಕೊನೆಯುಸಿರೆಳೆದಿದ್ದಾರೆ ಎಂದು ವರದಿಯಾಗಿದೆ. ಅವರ ಸಾವಿಗೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ತೀವ್ರ ಶೋಕವನ್ನು ವ್ಯಕ್ತಪಡಿಸುತ್ತ ಎಸ್‌ಡಿಎಂ ಆಯುಷ್ ಸಿನ್ಹರನ್ನು ವಜಾ ಮಾಡಬೇಕು, ಅವರ ರಾಜಕೀಯ ಯಜಮಾನರನ್ನು ಬಯಲಿಗೆಳೆಯಲು ನ್ಯಾಯಾಂಗ ತನಖೆ ನಡೆಸಬೇಕು ಎಂದು ಆಗ್ರಹಿಸಿದೆ. ಕೂಡಲೇ ದೇಶಾದ್ಯಂತ ಈ ದಮನವನ್ನು ಪ್ರತಿಭಟಿಸಲು ಕೂಡ ಎಐಕೆಎಸ್ ಕರೆ ನೀಡಿದೆ.





ಒಂಭತ್ತು ತಿಂಗಳ ಹಿಂದೆ ಈ ಹೋರಾಟ ಆರಂಭವಾದಾಗಿನಿಂದಲೂ ಸುಶೀಲ್ ಕುಮಾರ್ ಎಲ್ಲ ಹೋರಾಟಗಳಲ್ಲಿ ಭಾಗವಹಿಸಿದ್ದು ಈಗ ಬಿಜೆಪಿ–ಜೆಜೆಪಿ ಸರಕಾರದ ರಕ್ತಪಿಪಾಸೆಗೆ ಬಲಿಯಾಗಿದ್ದಾರೆ ಎಂದಿರುವ ಎಐಕೆಎಸ್ ಈ ಸರಕಾರ ಸುಮಾರು 40ಸಾವಿರ ರೈತರ ಮೇಲೆ ಸುಳ್ಳು ಕೇಸುಗಳನ್ನು ಹಾಕಿದೆ, ರಾಜದ್ರೋಹದ ಕರಾಳ ಕೇಸನ್ನೂ ಹಾಕಿದೆ ಎಂದು ನೆನಪಿಸಿದೆ.

ಆಯುಷ್ ಸಿನ್ಹ ಮೇಲೆ ಐಪಿಸಿ ಸೆಕ್ಷನ್ 302(ಕೊಲೆ) ಅಡಿಯಲ್ಲಿ ಕೇಸ್ ಹಾಕಬೇಕು, ದುಷ್ಟ ಜನರಲ್ ಡಾಯರನನ್ನು ಮತ್ತು ಜಾಲಿಯಾನ್‌ವಾಲಾಬಾಗ್ ಹತ್ಯಾಕಾಂಡವನ್ನು ನೆನಪಿಸುವ ಇಂತಹ ನಾಚಿಕೆಗೆಟ್ಟ ಆದೇಶವನ್ನು ನೀಡಿರುವವರು ಯಾರು ಎಂಬುದನ್ನು ಬಯಲಿಗೆ ತರಲು ನ್ಯಾಯಾಂಗ ತನಿಖೆ ಅಗತ್ಯ. ಎಸ್‌ಡಿಎಂ ಪೋಲೀಸರಿಗೆ ಆದೇಶ ನೀಡುತ್ತಿರುವ ಆಘಾತಕಾರಿ ವೀಡಿಯೋ ಜನಜನಿತವಾಗಿರುವ ಸಂದರ್ಭದಲ್ಲಿ ಸುಪ್ರಿಂ ಕೋರ್ಟ್ ತಾನಾಗಿಯೇ ಈ ಪ್ರಕರಣವನ್ನು ವಿಚಾರಣೆಗೆ ಎತ್ತಿಕೊಳ್ಳಬೇಕು ಎಂದು ಎಐಕೆಎಸ್ ಕೋರಿದೆ. (ಪುಟ 12 ನ್ನು ನೋಡಿ)

ಸಂಪಾದಕೀಯ

ಸಂಕಷ್ಟದಲ್ಲಿರುವ ಜನರ ಮೇಲೆ ತೆರಿಗೆ ಹೇರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಲ್ಲದ ನಡೆ

ಜನ ಇನ್ನೂ ಕೋವಿಡ್ ಪರಿಸ್ಥಿತಿಯಿಂದ ಹೊರಬಂದಿಲ್ಲ ಅವರ ಆದಾಯವು ಕೋವಿಡ್ ಪೂರ್ವದ ಸ್ಥಿತಿಗೆ ಇನ್ನೂ ಬಂದಿಲ್ಲ. ಉದ್ಯೋಗ ಕಳೆದುಕೊಂಡ ಅಸಂಖ್ಯಾತ ಜನಗಳಿಗೆ ಮರಳಿ ಕೆಲಸ ಸಿಕ್ಕಿಲ್ಲ. ಸರ್ಕಾರ ಘೋಷಿತ ಪರಿಹಾರದ ಕ್ರಮಗಳು ಜನರಿಗೆ ತಲುಪಿಲ್ಲ. ಇಂತಹ ಸಂದರ್ಭದಲ್ಲಿ ಸಂಕಷ್ಟದಲ್ಲಿರುವ ಜನರಿಗೆ ಆರ್ಥಿಕ ನೆರವು ಒದಗಿಸುವ ಬದಲಾಗಿ ಈ ಸರ್ಕಾರಗಳು ತಮ್ಮ ಬೊಕ್ಕಸಗಳನ್ನು ತುಂಬಿಸಿಕೊಳ್ಳಲು ಬಡ ಮತ್ತು ಮಧ್ಯಮ ವರ್ಗದ ಜನಗಳ ಮೇಲೆ ತೆರಿಗೆ ಏರಿಕೆಯ ಬರೆ ಹಾಕಲು ಕ್ರಮವಹಿಸಿರುವುದು ಸಲ್ಲದ ನಡೆ.

ನಾಗರಿಕರು ಪಾವತಿಸುವ ತೆರಿಗೆಯ ಹಣವೇ ಸರ್ಕಾರಗಳಿಗೆ ಆದಾಯದ ಪ್ರಮುಖ ಮೂಲ. ಸರ್ಕಾರಗಳ ಆದಾಯ ಹೆಚ್ಚಾಗಬೇಕಾದರೆ ಜನರು ತೆರಿಗೆ ಹಣವನ್ನು ಪಾವತಿಸಬೇಕು. ಜನರು ತೆರಿಗೆ ಹಣವನ್ನು ಸರಿಯಾಗಿ, ನಿರೀಕ್ಷೆಯಂತೆ ಪಾವತಿಸಬೇಕಾದರೆ ಅವರ ಕೈಯಲ್ಲಿ ಹಣ ಇರಬೇಕು ಮತ್ತು ಅದನ್ನು ಅವರು ಖರ್ಚು ಮಾಡುತ್ತಿರಬೇಕು. ಜನರು ಖರ್ಚು ಮಾಡುವ ಹಣದಲ್ಲಿ ಒಂದು ಭಾಗವು ತೆರಿಗೆಯ ರೂಪದಲ್ಲಿ ಸರ್ಕಾರಗಳ ಬೊಕ್ಕಸಕ್ಕೆ ಸಂದಾಯವಾಗುತ್ತದೆ. ಈ ಹಣವನ್ನು ಸರ್ಕಾರಗಳು ಅಭಿವೃದ್ಧಿ ಯೋಜನೆಗಳಿಗಾಗಿ ಹೂಡಿಕೆ ಮಾಡಿ ಜನರಿಗೆ ಇನ್ನಷ್ಟು ಸವಲತ್ತುಗಳನ್ನು ಒದಗಿಸಬೇಕು. ಇದು ನಾವು ಒಪ್ಪಿಕೊಂಡಿರುವ ಆರ್ಥಿಕ ವ್ಯವಸ್ಥೆ. ಆದರೆ ಸರ್ಕಾರಗಳು ಬಹುತೇಕವಾಗಿ ಮಾಡುತ್ತಿರುವುದೇ ಬೇರೆ.

ಕೋವಿಡ್–19 ಹಠಾತ್ತನೆ ದಾಳಿಮಾಡಿದಾಗ ಅದು ಹರಡುವುದನ್ನು ತಡೆಯುವ ಉದ್ದೇಶದಿಂದ ಲಾಕ್‌ಡೌನ್ ಜಾರಿಗೆ ತರಲಾಯಿತು. ಜನ ಮಾರುಕಟ್ಟೆಗೆ ಬಂದು ವಸ್ತುಗಳನ್ನು ಕೊಂಡುಕೊಳ್ಳವುದು ಗಣನೀಯವಾಗಿ ಕಡಿಮೆಯಾಯಿತು. ಮನೆಯಿಂದ ಹೊರಬರಲಾಗದೆ, ಆದಾಯ ಬರುವಂತಹ ಉದ್ಯೋಗವೂ ಸಿಗದಂತಾಗಿ ಉಪವಾಸ ವನವಾಸ ಅನುಭವಿಸುವಂತಾಯಿತು. ಈ ಸಂದರ್ಭದಲ್ಲಿ ಸತ್ತವರಲ್ಲಿ ಆಹಾರದ ಕೊರತೆಯಿಂದ ಸತ್ತವರ ಸಂಖ್ಯೆ ಬಹು ದೊಡ್ಡದಾಗಿದೆ. ಲಾಕ್‌ಡೌನ್ ಪರಿಣಾಮಗಳಿಂದ ಜನಸಾಮಾನ್ಯರು ಇನ್ನೂ ಪೂರ್ತಿಯಾಗಿ ಹೊರಬಂದಿಲ್ಲ. ಇಂತಹ ಅನಿರೀಕ್ಷಿತ ಸಂಕಷ್ಟದ ಸಮಯದಲ್ಲಿ ಸರ್ಕಾರಗಳು ಜನಪರವಾಗಿದ್ದರೆ ಜನರಿಗೆ ಅಗತ್ಯ ನೆರವನ್ನು ಒದಗಿಸಲು ಮುನ್ನುಗ್ಗುತ್ತವೆ. ಒಂದು ಬಡ ಕುಟುಂಬಕ್ಕೆ ಉಚಿತವಾಗಿ ಅಗತ್ಯ ಆಹಾರ ದಾನ್ಯಗಳನ್ನು, ಔಷಧಿಗಳನ್ನು ಒದಗಿಸುವುದಲ್ಲದೆ ಈ ಮಾರಣಾಂತಿಕ ಸಾಂಕ್ರಾಮಿಕದ ಅಪಾಯದಿಂದ ಹೊರಬರುವ ವರೆಗೆ ದೇಶವ್ಯಾಪಿಯಾಗಿ ಕೇಳಿಕೊಳ್ಳಲಾಗುವಂತೆ ತಿಂಗಳಿಗೆ ಕನಿಷ್ಟ 10,000 ರೂ. ಗಳನ್ನು ಒದಗಿಸಲು ಕ್ರಮಕೈಕೊಳ್ಳಬೇಕಾಗಿತ್ತು. ಈ ಪ್ರಕ್ರಿಯೆಗೆ ಬೇಕಾಗುವ ಹಣವನ್ನು ದಾನಿಗಳಿಂದ ದಾನವಾಗಿ, ಶ್ರೀಮಂತರಿಂದ ವಿಶೇಷ ತೆರಿಗೆ ರೂಪದಲ್ಲಿ ಅಗತ್ಯ ಬಿದ್ದರೆ ಸಾಲ ಪಡೆದು ಸಂಗ್ರಹಿಸಿ ಒದಗಿಸಬೇಕು.

ಆದರೆ ನಮ್ಮ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನರ ಪರಿಸ್ಥಿತಿ ಸುಧಾರಿಸುವರೆಗೆ ಕಾಯದೆ ಅವರ ಮೇಲೆ ವಿಪರೀತವಾದ ತೆರಿಗೆ ಹೊರೆಯನ್ನು ಹೇರಿದೆ. ಪರೋಕ್ಷ ತೆರಿಗೆಗಳ ಹೆಚ್ಚಳದ ಜೊತೆಯಲ್ಲಿ ಶಾಲಾ ಶುಲ್ಕ, ಆಸ್ಪತ್ರೆ ಮತ್ತು ಔಷಧದ ಖರ್ಚುಗಳು, ಪ್ರಯಾಣದ ವೆಚ್ಚಗಳನ್ನು ದುಬಾರಿಗೊಳಿಸಲಾಗಿದೆ. ಜನರ ಆದಾಯದ ಪರಿಸ್ಥಿತಿ ಎಲ್ಲಿಗೆ ತಲುಪಿದೆ ಎಂಬುದನ್ನು ಪರಿಗಣಿಸದೆಯೇ ತಮ್ಮ ವರಮಾನ ಕೊರತೆಯನ್ನು ಮಾತ್ರ ಭರ್ತಿ ಮಾಡಿಕೊಳ್ಳಲು ಹೊರಟಿರುವ ಬಿಜೆಪಿಯ ಈ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಲ್ಲು ಹೃದಯದ ಸರ್ಕಾರಗಳು!

ಮೋದಿ ಸರ್ಕಾರ ಕೇವಲ ತೆರಿಗೆ ಏರಿಕೆ ಕ್ರಮದಿಂದ ಜನರ ಮೇಲೆ ಹೊರೆ ಹೇರುತ್ತಿದೆ. ಮಾತ್ರವಲ್ಲ ಅಗತ್ಯ ವಸ್ತುಗಳ ಬೆಲೆಗಳನ್ನು ವಿಪರೀತವಾಗಿ ಹೆಚ್ಚಿಸುವ ಮೂಲಕ ಜನಜೀವನವನ್ನು ದುಸ್ತರಗೊಳಿಸುತ್ತಿದೆ. ಪೆಟ್ರೋಲ್, ಡಿಸೇಲ್ ಬೆಲೆ ಹೆಚ್ಚಿಸುವ ಮೂಲಕ ಕೇಂದ್ರ ಸರ್ಕಾರ ಕಳೆದ ಏಳು ವರ್ಷಗಳಲ್ಲಿ 23 ಲಕ್ಷ ಕೋಟಿ ಆದಾಯ ಸಂಗ್ರಹಿಸಿದೆ. ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಕಡಿಮೆ ಇದ್ದರೂ ಗ್ರಾಹಕರಿಗೆ ದರ ಏರಿಕೆಯ ಬರೆ ಹಾಕಲಾಗುತ್ತಿದೆ. ಸಬ್ಸಿಡಿ ಇರುವ ಮತ್ತು ಸಬ್ಸಿಡಿ ಇಲ್ಲದ ಅಡುಗೆ ಅನಿಲ ದರವನ್ನು ಸಿಲಿಂಡರ್ ಒಂದಕ್ಕೆ ರೂ.25 ರಂತೆ ಹೆಚ್ಚಿಸಲಾಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ 14.2 ಕೆ.ಜಿ. ತೂಕದ ಎಲ್.ಪಿ.ಜಿ ಸಿಲಿಂಡರ್ ಬೆಲೆ ರೂ. 887 ಕ್ಕೆ ತಲುಪಿದೆ. ಕಳೆದ ಎರಡು ತಿಂಗಳಲ್ಲಿ ಮೂರು ಬಾರಿ ಎಲ್.ಪಿ.ಜಿ ಬೆಲೆ ಹೆಚ್ಚಳ ಮಾಡಿದಂತಾಗಿದೆ.

ಅಗತ್ಯ ವಸ್ತುಗಳಲ್ಲಿ ಬಹುಮುಖ್ಯವಾಗಿರುವ ವಿದ್ಯುತ್ ದರಗಳನ್ನೂ ಮತ್ತೆ ಹೆಚ್ಚಿಸಲಾಗಿದೆ. 2020 ಮತ್ತು 2021 ರಲ್ಲಿ ವಿದ್ಯುತ್ ದರಗಳನ್ನು ಪ್ರತಿ ಯೂನಿಟ್ ಗೆ 70 ಪೈಸೆಯಂತೆ ಹೆಚ್ಚಿಸಲಾಗಿತ್ತು. ರಾಜ್ಯದ ಬಹುತೇಕ ಕಡೆ ಚೆನ್ನಾಗಿ ಮಳೆಯಾಗುತ್ತಿದೆ. ಎಲ್ಲಾ ಅಣೆಕಟ್ಟುಗಳು ಭರ್ತಿಯಾಗುವ ಹಂತವನ್ನು ತಲುಪಿವೆ. ಜಲ ವಿದ್ಯುತ್ ಘಟಕಗಳಲ್ಲಿ ಸಾಕಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದೆ. ಜೊತೆಗೆ ಸೌರ ಶಕ್ತಿ ಹಾಗೂ ಪವನ ವಿದ್ಯುತ್ ಉತ್ಪಾದನೆಲ್ಲೂ ಸಾಕಷ್ಟು ಹೆಚ್ಚಳವಾಗಿದೆ. ಆದರೆ ಸಾಮಾನ್ಯ ಗ್ರಾಹಕರಿಗೆ, ರೈತರ ಪಂಪ್‌ಸೆಟ್‌ಗಳಿಗೆ ಇದರ ಪ್ರಯೋಜನ ದೊರಕುವುದಿಲ್ಲ.

ತಮ್ಮ ವರಮಾನ ಸಂಗ್ರಹ ಹೆಚ್ಚಿಸಲು ಹೆಣಗುತ್ತಿರುವ ನಮ್ಮ ಈ ಸರ್ಕಾರಗಳು ಜನರ ಆದಾಯ ಹೆಚ್ಚಿಸಲು ಏನು ಕ್ರಮ ಕೈಗೊಂಡಿವೆ? ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಲು ಈ ಸರ್ಕಾರಗಳಿಗೆ ಎಳ್ಳಷ್ಟು ಆಸಕ್ತಿ ಇದೆಯಾ? ಜನರ ಆದಾಯ ಹೆಚ್ಚಾಗದಿರುವಾಗ ಅವರ ಮೇಲೆ ತೆರಿಗೆ ಏರಿಕೆಯ ಹೊರೆ ಹೇರುವುದು ಸರಿಯೇ? ಜನರ ಆದಾಯ ಹೆಚ್ಚಾಗದೆ ತೆರಿಗೆ ಸಂಗ್ರಹ ಹೆಚ್ಚಾಗಲು ಹೇಗೆ ಸಾಧ್ಯ? ಕೋವಿಡ್ ಸೃಷ್ಟಿಸಿರುವ ಕರಾಳ ಪರಿಸ್ಥಿತಿ ನಿವಾರಣೆಯಾಗಿ ಮಾರುಕಟ್ಟೆಯಲ್ಲಿ ಚಟುವಟಿಕೆಗಳು ಪೂರ್ಣ ಪ್ರಮಾಣದಲ್ಲಿ ನಡೆಯಲು ಆರಂಭವಾದ ನಂತರವೇ ಸರ್ಕಾರಗಳ ಆದಾಯ ಹೆಚ್ಚಾಗಲು ಸಾಧ್ಯ. ತೆರಿಗೆ ಸಂಗ್ರಹ ಸಾಧ್ಯ. ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿರುವವರ ಮೇಲೆ ತೆರಿಗೆ ಏರಿಕೆಯನ್ನು ಹೇರುವುದು ಬಲವಂತದ ಲೂಟಿಯಾಗಿದೆ.

ಎಂ.ಎನ್. ರೇಗಾ – 2005 ಮತ್ತು ಗ್ರಾಮೀಣ ಕೆಲಸಗಾರರು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ

ಅಖಿಲ ಭಾರತ ಕೃಷಿಕೂಲಿಕಾರರ ಸಂಘ(AIAWU)ದ ಕೇಂದ್ರ ಕಾರ್ಯಕಾರಿ ಸಮಿತಿ ಸಭೆ 28,29 ಮತ್ತು 30 ಆಗಸ್ಟ್ 2021 ರಂದು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಮಂಡ್ಯ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಮಂಡ್ಯ ನಗರದ ಕರ್ನಾಟಕ ಸಂಘದ ಸಭಾಂಗಣದಲ್ಲಿ ಜರಗಿತು. ಇದರ ಅಂಗವಾಗಿ 28 ಆಗಸ್ಟ್ 2021 ರಂದು "ಎಂ.ಎನ್.ರೇಗಾ–2005 ಮತ್ತು ಗ್ರಾಮೀಣ ಕೆಲಸಗಾರರು" ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಆಯೋಜಿಸಿತ್ತು.

ಕೇರಳ ರಾಜ್ಯ ಸರಕಾರದ ಗ್ರಾಮೀಣಾಭಿವೃದ್ಧಿ ಮತ್ತು ಅಬಕಾರಿ ಇಲಾಖೆ ಸಚಿವ ಎಂ.ವಿ. ಗೋವಿಂದನ್ ಮಾಸ್ಟರ್ ರವರು ಹಾರೆ, ಗುದ್ದಲಿ, ಪಿಕ್ಕಾಸ್ ಎತ್ತಿ ಹಿಡಿದು ವೇದಿಕೆಯಲ್ಲಿ ಪ್ರದರ್ಶನ ನಡೆಸಿದ ನರೇಗಾ ಕೂಲಿಕಾರರ ಮೇಲೆ ಹೂಮಳೆ ಗೈದು ಸ್ವಾಗತಿಸಿ ಸಂಭ್ರಮಿಸಿದ ಕ್ಷಣದ ಸಂದರ್ಭದಲ್ಲಿ ವಿದ್ಯುಕ್ತವಾಗಿ ಉದ್ಘಾಟಿಸಿದರು. ಅವರು ಮಾತನಾಡುತ್ತಾ, ಕೇರಳ ರಾಜ್ಯ ಸರಕಾರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕೂಲಿಕಾರರಿಗೆ ಎಲ್ಲಾ ರೀತಿಯ ಸಹಾಯ ನೀಡುತ್ತಿದ್ದು, ಕೂಲಿಕಾರರ ಪರವಾಗಿದೆ. 2004 ರಲ್ಲಿ ಕೇಂದ್ರದ ಯು.ಪಿ.ಎ–1 ಸರಕಾರಕ್ಕೆ ಎಡ ಪಕ್ಷಗಳ ಬೆಂಬಲದಿಂದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಡಿಯಲ್ಲಿ ಕೂಲಿಕಾರರ ಪರ ನರೇಗಾ ಕಾನೂನು ಜ್ಯಾರಿಗೆ ತರಲು ಸಾಧ್ಯವಾಗಿದೆ. ಇದು ಕೇವಲ ಯೋಜನೆಯಾಗಿರದೆ ಕಾನೂನಾತ್ಮಕವಾಗಿ ಕೂಲಿಕಾರರಿಗೆ ಕೆಲಸದ ಖಾತ್ರಿಯ ಭರವಸೆಯನ್ನು ಕೊಡಲ್ಪಟ್ಟಿದೆ. ನರೇಗಾ ಯೋಜನೆಯಲ್ಲಿ ದೈಹಿಕ ಶ್ರಮದ ಕೆಲಸ ಬಯಸುವ ದೇಶದ ಪ್ರತಿಯೊಬ್ಬ ಪ್ರಾಯಸ್ಥ ವ್ಯಕ್ತಿಗೆ 100 ದಿನಗಳ ಕೆಲಸ ಕೊಡುವುದಕ್ಕೆ ಕಾನೂನು ತರಲಾಗಿದೆ. ಕೆಲಸ ಬಯಸುವ ಪ್ರತಿಯೊಂದು ಕುಟುಂಬಕ್ಕೂ ವಾರ್ಷಿಕ ಕನಿಷ್ಟ 100 ದಿನಗಳ ಕೆಲಸವನ್ನು ಜಾತಿ, ಮತ, ಧರ್ಮ, ಲಿಂಗ ಬೇದವಿಲ್ಲದೆ ಪಡೆಯಬಹುದು ಎಂದು ಅಭಿಪ್ರಾಯಪಟ್ಟರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಬಿ. ವೆಂಕಟ್ ರವರು ಅತಿಥಿ ಭಾಷಣ ಮಾಡಿದರು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ದೇಶಾದ್ಯಂತ 714 ಜಿಲ್ಲೆಗಳಲ್ಲಿ, 7145 ಬ್ಲಾಕ್ ಮತ್ತು 269434 ಗ್ರಾಮ ಪಂಚಾಯತ್ ಗಳಲ್ಲಿ ಜ್ಯಾರಿ ಗೊಳಿಸಲಾಗಿದೆ. ದೇಶದಲ್ಲಿ ಸುಮಾರು 15.22 ಕೋಟಿ ಉದ್ಯೋಗ ಚೀಟಿ ಹೊಂದಿದ 29.42 ಕೋಟಿ ಕೂಲಿಕಾರರು ನರೇಗಾ ಕೆಲಸಗಳಲ್ಲಿ ನಿರತರಾಗಿದ್ದಾರೆ. ನರೇಗಾ ಕೂಲಿ ಕೆಲಸ ಕೊಡಲು ವಿಫಲವಾದಲ್ಲಿ ಪ್ರತೀ ಮಾನವ ದಿನವೊಂದರ ನಿರುದ್ಯೋಗ ಭತ್ಯೆ ಪರಿಹಾರ ಪಡೆಯಲು ಕೂಲಿಕಾರ ಹಕ್ಕು ಹೊಂದಿದ್ದಾನೆ. ನಿಯಮಾನುಸಾರ ಕೂಲಿಕಾರ ನಿರುದ್ಯೋಗ ಭತ್ಯೆ ಪಡೆಯುವುದರಿಂದ ದೇಶದ ಇತಿಹಾಸದಲ್ಲೆ ಹೆಚ್ಚು ಹೆಚ್ಚು ಕೆಲಸ ಪಡೆಯಲು ಅಧಿಕೃತ ಹಕ್ಕು ಪಡೆಯುವಂತಾಯಿತು ಎಂದು ಅವರು ವಿವರಿಸಿದರು. ಅವರು ಮುಂದುವರಿದು ಮಾತನಾಡುತ್ತಾ, ನರೇಗಾ ಯೋಜನೆ ಜ್ಯಾರಿಗೆ ಬಂದು 15 ವರ್ಷ ಆಗಿದೆ. ಬಿಜೆಪಿ ಸರಕಾರ ಇದನ್ನು ಬಲಹೀನ ಮಾಡಲು ಪ್ರಯತ್ನಿಸುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಕೂಲಿಕಾರರಿಗೆ, ರೈತರಿಗೆ ಉದ್ಯೋಗ ಕೊಡಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸರಕಾರ ನರೇಗಾ ಅನುದಾನವನ್ನು ಶೇಕಡಾ 4 ಇದ್ದ ಹಣ ಶೇಕಡಾ 2 ಕ್ಕೆ ಇಳಿಸಿದ್ದಾರೆ. ರೂಪಾಯಿ 1,44,000 ಕೋಟಿ ಇದ್ದ ಅನುದಾನವನ್ನು ಮೋದಿ ಸರಕಾರ ಕೇವಲ ರೂಪಾಯಿ 71,000 ಕೋಟಿಗೆ ಕಡಿತ ಮಾಡಿ ಕೂಲಿಕಾರರ ವಿರೋಧಿ ಆಗಿದೆ. 2014 ರಿಂದ ಬಿಜೆಪಿ ಸರಕಾರ ನಿರಂತರವಾಗಿ ಅನುದಾನ ಕಡಿಮೆ ಮಾಡುತ್ತಾ ಬಂದಿದೆ. ಆದ್ದರಿಂದ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಯಾಗಬೇಕು ಎಂದು ಆಗ್ರಹಿಸಿದರು.

ಅಖಿಲ ಭಾರತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲಾ, ಕೃಷಿ ಕೂಲಿಕಾರರ ಸಂಘದ ಹಿರಿಯ ಮುಖಂಡರಾದ ಸುನಿತ್ ಚೋಫ್ರಾ, ಕರ್ನಾಟಕ ಸಂಘದ ಮುಖ್ಯಸ್ಥರಾದ ಪ್ರೊ.ಬಿ. ಜಯಪ್ರಕಾಶಗೌಡ ಸಭೆಯಲ್ಲಿ ಮಾತನಾಡಿದರು. ಇಂದಿನ ಬಿಜೆಪಿ ಸರ್ಕಾರ ರೈತ, ಕೂಲಿಕಾರ ಮತ್ತು ಕಾರ್ಮಿಕರ ವಿರೋಧಿಯಾಗಿದೆ. ಮೋದಿ ಸರ್ಕಾರ ಬಂದಾಗಿನಿಂದ ದೇಶದಲ್ಲಿ ದಲಿತರ, ಮಹಿಳೆಯರ ಮತ್ತು ಅಲ್ಪ ಸಂಖ್ಯಾತರ ಮೇಲೆ ದೌರ್ಜನ್ಯಗಳು ಹೆಚ್ಚಾಗಿವೆ. ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ಸಮಾವೇಶದ ತೀರ್ಮಾನದಂತೆ ರೈತ, ಕೂಲಿ ಕಾರ್ಮಿಕರ ಪ್ರಮುಖ 11 ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ 25 ಆಗಸ್ಟ್ 2021ರ ಅಖಿಲ ಭಾರತ ಬಂದ್ ಗೆ ಕರೆ ನೀಡಿದ್ದು ಅದನ್ನು ಯಶಸ್ವಿಗೊಳಿಸಲು ನಿರ್ಧರಿಸಲಾಯಿತು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿ, ರಾಜ್ಯ ಮುಖಂಡರಾದ ಜಿ.ಎನ್. ನಾಗರಾಜ್, ಚಂದ್ರಪ್ಪ ಹೊಸ್ಕೇರಾ, ಪುಟ್ಟಮಾದು, ಸಂಸದ ವಿ. ಶಿವದಾಸನ್, ಜಯಪ್ರಕಾಶ ಗೌಡ, ಡಾ। ಅನಿಲ್ ಕುಮಾರ್, ಹನುಮೆಗೌಡ, ಹನುಮೇಶ, ಸುರೇಂದ್ರ, ಸರೋಜಮ್ಮ ಮೊದಲಾದವರು ವೇದಿಕೆಯಲ್ಲಿ ಇದ್ದರು.

ವರದಿ: ವೆಂಕಟೇಶ್ ಕೋಣಿ

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಜಾರಿಗೊಳಿಸುತ್ತಿರುವುದನ್ನು ತಕ್ಷಣವೇ ತಡೆ ಹಿಡಿಯಲು ಸಿಪಿಐಎಂ ಒತ್ತಾಯ

ಕನ್ನಡ ಭಾಷೆ ಹಾಗೂ ಕನ್ನಡಿಗರ ಅಭಿವೃದ್ಧಿಗೆ ಮಾರಕವಾದ, ಅದರಲ್ಲೂ ಎಲ್ಲ ಮಹಿಳೆಯರು, ದಲಿತರು ಹಾಗೂ ಹಿಂದುಳಿದ ವರ್ಗಗಳ ಬಡವರಿಗೆ ಅಂದರೇ ರಾಜ್ಯದ ಶೇ 95 ರಷ್ಟು ಜನರಿಗೆ ಶಿಕ್ಷಣವನ್ನು ಮರೀಚಿಕೆಯಾಗಿಸುವ ಅತ್ಯಂತ ಅಪಾಯಕಾರಿಯಾದ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಜಾರಿಗೊಳಿಸುತ್ತಿರುವ ಕೆಲಸವನ್ನು ಈ ಕೂಡಲೇ ಸ್ಥಗಿತಗೊಳಿಸುವಂತೆ ರಾಜ್ಯ ಸರಕಾರವನ್ನು, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸಿದೆ.

ಈ ನೀತಿಯು ರಾಜ್ಯದ ಕನ್ನಡ ಹಾಗೂ ಕನ್ನಡಿಗರ ಇತರೇ ಮಾತೃ ಭಾಷೆಗಳಾದ ತುಳು, ಕೊಡವಾ, ತೆಲುಗು, ಉರ್ದು,ಮರಾಠಿ, ಕೊಂಕಣಿ, ಲಂಬಾಣಿ ಮುಂತಾದ ಭಾಷೆಗಳ ಮೇಲೆ ಇಂಗ್ಲೀಷ್ ಹಾಗೂ ಸಂಸ್ಕೃತ, ಹಿಂದಿ ಭಾಷೆಗಳನ್ನು ಹೇರುವ ಹುನ್ನಾರವನ್ನು ಅದು ಹೊಂದಿದೆ. ಇದರಿಂದ ಈ ಭಾಷೆಗಳು ಮತ್ತಷ್ಟು ಅಪಾಯವನ್ನು ಎದುರಿಸಲಿವೆ.

ಮಾತ್ರವಲ್ಲಾ, ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ವನ್ನು ಕಾರ್ಪೊರೇಟ್ ಕಂಪನಿಗಳ ಹಾಗೂ ಖಾಸಗೀ ಶಿಕ್ಷಣ ಸಂಸ್ಥೆಗಳ ಬೃಹತ್ ಲೂಟಿಗೆ ರಾಜ್ಯವನ್ನು ತೆರೆಯುವ ಮುಂದುವರಿದ ಸಂಚಿನ ಭಾಗವಿದಾಗಿದೆ. ಇದರಿಂದ ಲಕ್ಷಾಂತರ ಅಂಗನವಾಡಿ ಕೇಂದ್ರಗಳು, ಏಕೋಪಾಧ್ಯಾಯ ಹಾಗೂ ವಿದ್ಯಾರ್ಥಿಗಳ ಕೊರತೆ ಎದುರಿಸುವ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳು ಮುಚ್ಚಿ ಹೋಗಲಿವೆ.

ಬಾಣಂತಿಯರು, ಗರ್ಭಿಣಿ ಮಹಿಳೆಯರು,ಅಪೌಷ್ಟಿಕತೆಯಿಂದ ಬಳಲುವ ಮಕ್ಕಳಿಗೆ ನೀಡಲಾಗುತ್ತಿರುವ ಪೌಷ್ಟಿಕ ಆಹಾರದ ಯೋಜನೆಯು ಕಣ್ಮರೆಯಾಗಲಿದೆ.

ಅಗ್ಗದರದ ಆಧುನಿಕ ನೈಪುಣ್ಯತೆ ಪಡೆದ ಗುಲಾಮರನ್ನು ಕಾರ್ಪೊರೇಟ್ ಕಂಪನಿಗಳಿಗೆ ಒದಗಿಸುವ ಮತ್ತು ಮತೀಯ ಭಾವನೆಗಳನ್ನು ಹರಡುವ, ರಾಜ್ಯದ ಸಮಗ್ರತೆ, ಏಕತೆಗೆ ಭಂಗ ಉಂಟುಮಾಡುವ ದುರುದ್ದೇಶವನ್ನು ಅದು ಹೊಂದಿದೆ.

ಇದು ಸ್ವಾತಂತ್ರ್ಯ ನಂತರ ದೇಶದಲ್ಲಿ ಶೈಕ್ಷಣಿಕ ಹಾಗೂ ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರದಲ್ಲಿನ ಸಾಧನೆಗಳ ಮುನ್ನಡೆಗೆ ಮತ್ತು ರಾಜ್ಯದಲ್ಲಿ ಬೆಳೆಯುತ್ತಿರುವ ಜನತೆಯ ವೈಜ್ಞಾನಿಕ ಮನೋಭಾವದ ಮೇಲೆ ಬಲವಾದ ತಡೆಯಾಗಲಿದೆ.

ಇದು ರಾಜ್ಯದಲ್ಲಿ ಶೈಕ್ಷಣಿಕ ಮತ್ತು ಆ ಸಂಬಂಧಿ ಇತರೆ ವಲಯಗಳ ಉದ್ಯೋಗಿಗಳನ್ನು ವ್ಯಾಪಕವಾದ ನಿರುದ್ಯೋಗಕ್ಕೆ ಮತ್ತು ಸಾರ್ವಜನಿಕ ಕ್ಷೇತ್ರದ ಉದ್ಯೋಗಗಳನ್ನು ಕಡಿತಗೊಳಿಸುವಿಕೆಗೆ ಕಾರಣವಾಗಲಿದೆ. ಅದೇ ರೀತಿ, ದುರ್ಬಲರ ಸಾಮಾಜಿಕ ನ್ಯಾಯದ ಮೀಸಲಾತಿಯ ಹಕ್ಕನ್ನು ಹೊಸಕಿ ಹಾಕಲಿದೆ.

ಇಷ್ಟೊಂದು ಗಂಭೀರ ಅಪಾಯಗಳನ್ನು ರಾಜ್ಯದ ಜನತೆಯ ಮೇಲೆ ಹೇರಲಿರುವ ಇದು ಮತ್ತಷ್ಟು ವ್ಯಾಪಕ ಚರ್ಚೆಗೊಳಪಡಿಸದೇ ಜಾರಿಗೊಳಿಸಬಾರದು.

ಕಳೆದ ಎರಡು ವರ್ಷಗಳ ಕಾಲ ರಾಜ್ಯದ ಜನತೆ ಕೋವಿಡ್ ಸಂಕಷ್ಟದಲ್ಲಿದ್ದುದ ರಿಂದ ಜನತೆಗೆ ವ್ಯಾಪಕವಾಗಿ ಭಾಗಿಯಾಗಿ, ಈ ವಿಚಾರದಲ್ಲಿ ಅಭಿಪ್ರಾಯ ನೀಡಲು ಸಾಧ್ಯವಾಗಿಲ್ಲ ವೆಂಬುದನ್ನು ತಾವು ಗಮನಿಸಬೇಕು.

ಆದ್ದರಿಂದ, ರಾಜ್ಯದ ವಿಧಾನ ಸಭೆ ಹಾಗೂ ಪರಿಷತ್ತಿನಲ್ಲಿ , ಎಲ್ಲ ರಾಜಕೀಯ ಪಕ್ಷಗಳ ಜೊತೆ ಮತ್ತು ಶೈಕ್ಷಣಿಕ ವಲಯದ ತಜ್ಞರು, ಭಾಷಾ ತಜ್ಞರು, ಅಕಾಡೆಮಿಕ್ ವಲಯ ಗಳು, ಶಿಕ್ಷಕರ, ಅಧ್ಯಾಪಕ, ಪ್ರಾಧ್ಯಾಪಕರು, ವಿದ್ಯಾರ್ಥಿ ಸಂಘಟನೆಗಳು ಹಾಗೂ ವಿಶ್ವ ವಿದ್ಯಾನಿಲಯಗಳು ಮುಂತಾದ ಗಣ್ಯ ಸಂಸ್ಥೆಗಳು ಹಾಗೂ ನಾಗರೀಕರ ಜೊತೆ ವ್ಯಾಪಕವಾಗಿ ಚರ್ಚಿಸಲು ಅಗತ್ಯ ಕ್ರಮಗಳನ್ನು ವಹಿಸಬೇಕು ಮತ್ತು ಅದುವರೆಗೆ ಅದನ್ನು ಯಾವುದೇ ಕಾರಣಕ್ಕೆ ಜಾರಿಗೊಳಿಸಬಾರದೆಂದು ಸಿಪಿಐಎಂ ಬಲವಾಗಿ ಒತ್ತಾಯಿಸಿದೆ.

ತಕ್ಷಣವೇ ಅದರ ಜಾರಿಯನ್ನು ತಡೆಯಲು ತಾವು ಮಧ್ಯ ಪ್ರವೇಶಿಸಬೇಕೆಂದು ಒತ್ತಾಯಿಸಿದೆ.



ಬಸ್ ಮಾಲಕರ ಲಾಬಿಗೆ ಶರಣಾದ ಜಿಲ್ಲಾಡಳಿತ

ಖಾಸಗಿ ಬಸ್ ಪ್ರಯಾಣ ದರವನ್ನು ವಿಪರೀತವಾಗಿ ಏರಿಸುವ ಮೂಲಕ ದ.ಕ. ಜಿಲ್ಲಾಡಳಿತ ಸಂಪೂರ್ಣವಾಗಿ ಬಸ್ ಮಾಲಕರ ಲಾಬಿಗೆ ಶರಣಾಗಿದೆ. ಬೆರಳೆಣಿಕೆಯಷ್ಟು ಇರುವ ಬಸ್ ಮಾಲಕರ ಸಂಕಷ್ಟದ ಬಗ್ಗೆ ಭಾರೀ ಕಾಳಜಿ ವ್ಯಕ್ತಪಡಿಸುವ ಜಿಲ್ಲಾಧಿಕಾರಿಗಳು, ಜಿಲ್ಲೆಯ ಲಕ್ಷಾಂತರ ಜನತೆಯ ಸಂಕಷ್ಟವನ್ನು ಅರಿಯಲು ವಿಫಲರಾಗಿದ್ದಾರೆ" ಎಂದು ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್ ರವರು ಆಕ್ರೋಶ ವ್ಯಕ್ತಪಡಿಸಿದರು.

ಖಾಸಗೀ ಬಸ್ ಪ್ರಯಾಣ ದರಯೇರಿಕೆಯ ವಿರುದ್ಧ ಹಾಗೂ ಜಿಲ್ಲಾಡಳಿತದ ಏಕಪಕ್ಷೀಯ ನಿರ್ಧಾರವನ್ನು ಖಂಡಿಸಿ ಸಿಪಿಐ(ಎಂ) ನೇತ್ರತ್ವದಲ್ಲಿ ಯೆಯ್ಯಾಡಿ ಜಂಕ್ಷನ್ ನಲ್ಲಿ ಜರುಗಿದ ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡುತ್ತಾ ಅವರು, ಈ ಮಾತುಗಳನ್ನು ಹೇಳಿದರು.

ಮುಂದುವರಿಸುತ್ತಾ ಅವರು, ಕೊರೋನಾ ಸಂಕಷ್ಟದ ಕಾಲಘಟ್ಟದಲ್ಲಿ ಜನರ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು, ಸಾರಿಗೆ ಪ್ರಾಧಿಕಾರದ ಸಭೆ ಕರೆದು ನ್ಯಾಯಯುತವಾಗಿ ಪ್ರಯಾಣ ದರವನ್ನು ಪರಿಷ್ಕರಿಸಬೇಕಾಗಿದ್ದ ಜಿಲ್ಲಾಧಿಕಾರಿಗಳು ಏಕಪಕ್ಷೀಯ ನಿರ್ಧಾರ ಕೈಗೊಂಡು ಜಿಲ್ಲೆಯ ಜನತೆಗೆ ಮಹಾಮೋಸಗೈದಿದ್ದಾರೆ ಎಂದುರು.

ಸಿಐಟಿಯು ಜಿಲ್ಲಾ ನಾಯಕರಾದ ರವಿಚಂದ್ರ ಕೊಂಚಾಡಿಯವರು ಮಾತನಾಡುತ್ತಾ, ಬಸ್ ಪ್ರಯಾಣ ದರಯೇರಿಕೆಯಿಂದ ಕಂಗೆಟ್ಟ ಜಿಲ್ಲೆಯ ಜನತೆಯ ನೋವಿಗೆ ಸ್ಪಂದಿಸಬೇಕಾಗಿದ್ದ ಸಂಸದರು ಶಾಸಕರು ಯಾವ ಗುಹೆಯಲ್ಲಿ ಅಡಗಿಕೊಂಡಿದ್ದಾರೆ. ಧರ್ಮ ದೇವರ ಹೆಸರಿನಲ್ಲಿ ರಾಜಕೀಯ ಮಾಡುವವರಿಗೆ ಜನತೆಯ ಸಂಕಷ್ಟ ಹಾಗೂ ಜಿಲ್ಲೆಯ ಅಬಿವ್ರದ್ದಿ ಬೇಕಾಗಿಲ್ಲ. ಅಂತಹವರನ್ನು ಆಯ್ಕೆ ಮಾಡುವ ಮೂಲಕ ಜನರ ಬದುಕು ನರಕಯಾತನೆಯಾಗಿದೆ ಎಂದು ಹೇಳಿದರು.

ಡಿವೈಎಫ್ಐ ಮಂಗಳೂರು ನಗರಾಧ್ಯಕ್ಷರಾದ ನವೀನ್ ಕೊಂಚಾಡಿಯವರು ಪ್ರಾಸ್ತಾವಿಕ ವಾಗಿ ಮಾತನಾಡುತ್ತಾ, ಬಸ್ ಪ್ರಯಾಣ ದರಯೇರಿಕೆಯ ವಿರುದ್ದ ಜಿಲ್ಲೆಯಲ್ಲಿ ನಡೆದ ಐತಿಹಾಸಿಕ ಯಶಸ್ವಿ ಹೋರಾಟವನ್ನು ಮೆಲುಕು ಹಾಕುತ್ತಾ, ಏರಿಸಿದ ದರವನ್ನು ಕೂಡಲೇ ತಡೆಹಿಡಿದು, ಸಾರಿಗೆ ಪ್ರಾಧಿಕಾರದ ಸಭೆಯನ್ನು ಕರೆಯಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪ್ರಗತಿಪರ ಚಿಂತಕರಾದ ಡಾ. ಕ್ರಷ್ಣಪ್ಪ ಕೊಂಚಾಡಿ, ದಲಿತ ಹಕ್ಕುಗಳ ಸಮಿತಿಯ ನಾಯಕರಾದ ತಿಮ್ಮಯ್ಯ ಕೊಂಚಾಡಿ, ಸ್ಥಳೀಯ ಸಿಪಿಐ(ಎಂ) ಮುಖಂಡರಾದ ದಯಾನಂದ ಕೊಪ್ಪಳಕಾಡು, ದಯಾನಂದ ಶೆಟ್ಟಿಗಾರ್, ಪದ್ಮನಾಭ ಕೊಂಚಾಡಿ, ನಾರಾಯಣ, ಪ್ರವೀಣ್, ಪಾಂಡುರಂಗ ಮುಂತಾದವರು ಭಾಗವಹಿಸಿದ್ದರು.

ಕೇಂದ್ರ ಸರಕಾರ ಉಚಿತವಾಗಿ ನೀಡುವಾಗ ರಾಜ್ಯ ಸರಕಾರದ ಲಸಿಕೆ ಖರೀದಿ ಯಾಕೆ ?–ಸಿಪಿಐಎಂ

ಭಾರತ ಸರಕಾರ ಮತ್ತು ಅದರ ಪ್ರಧಾನ ಮಂತ್ರಿಗಳು ದೇಶದಾದ್ಯಂತ ಜನತೆಗೆ ಉಚಿತವಾಗಿ ಲಸಿಕೆ ಹಾಕಿಸಲಾಗುವುದು ಎಂದು ಪ್ರಕಟಿಸಿರುವಾಗ, ಕರ್ನಾಟಕ ಸರಕಾರ ಖಾಸಗೀ ಆಸ್ಪತ್ರೆಗಳ ಮೂಲಕ ಕೋವಿಡ್ ಲಸಿಕೆಯನ್ನು ಪ್ರತಿ ಡೋಸ್ ಗೆ 780 ರೂಗಳಂತೆ ಖರೀದಿಸುತ್ತಿರುವುದು ಆಶ್ಚರ್ಯಕರವಾಗಿದೆಯೆಂದು ಸಿಪಿಐಎಂ ಪ್ರಶ್ನಿಸಿದೆ.
ಪ್ರಧಾನ ಮಂತ್ರಿಗಳು ದೇಶದ ಜನತೆಗೆ ಉಚಿತವಾಗಿ ಲಸಿಕೆ ಹಾಕಲಾಗುವುದೆಂದು ಬಹಿರಂಗವಾಗಿ ಪ್ರಕಟಿಸಿ, ಒಳಗೊಳಗೆ ರಾಜ್ಯದ ಮೇಲೆ ಒತ್ತಡ ಹೇರಿ ಖಾಸಗಿಯಾಗಿ ಖರೀದಿಸಲು ಹೇಳಿದ್ದಾರೆಯೇ? ಅಥವಾ ರಾಜ್ಯ ಸರಕಾರದ ಈ ರೀತಿಯ ಖರೀದಿ ಯಾತಕ್ಕೆಂದು ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರು ರಾಜ್ಯದ ಜನತೆಗೆ ವಿವರಿಸಬೇಕೆಂದು
ಸಿಪಿಐಎಂ ಒತ್ತಾಯಿಸುತ್ತದೆ.

ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿ 700 ಕೋಟಿ ರೂ ದುರ್ಬಳಕೆ–CPIM ಖಂಡನೆ.

ಕೋವಿಡ್ ಲಸಿಕೆಯ ಖರೀದಿಗಾಗಿ ರಾಜ್ಯ ಸರಕಾರವು, ಬಡ ಕಟ್ಟಡ ಕಾರ್ಮಿಕರ ದುಡಿಮೆಯಿಂದ ರೂಪಿಸಲಾಗಿರುವ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ಸುಮಾರು 700 ಕೋಟಿ ರೂಗಳ ದುರ್ಬಳಕೆ ಮಾಡುತ್ತಿರುವ ಹಗರಣ ಬಯಲಾಗಿದೆ. ಸಿಪಿಐಎಂ ಈ ಅಕ್ರಮವನ್ನು ಬಲವಾಗಿ ಖಂಡಿಸುತ್ತದೆ.
ಇದೆಲ್ಲವೂ ಕೋವಿಡ್ ಲಸಿಕೆ ನೀಡುವ ವಿಚಾರವೂ ಮತ್ತು ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯ ದುರ್ಬಳಕೆಯು ಎಲ್ಲವೂ ಸರಕಾರಗಳ ನಡೆಗಳು ಪಾರದರ್ಶಕ ವಾಗಿರದೇ, ಅನುಮಾನಾಸ್ಪದವಾಗಿರುವುದನ್ನು ತೋರುತ್ತಿವೆ.
ರಾಜ್ಯ ಸರಕಾರ ಬಡವರ ಕಲ್ಯಾಣ ನಿಧಿಯನ್ನು ಅವರ ಕಲ್ಯಾಣ ಕಾರ್ಯಕ್ರಮಗಳಿಗಾಗಿಯಲ್ಲದೇ ಅನ್ಯ ಕಾರ್ಯಕ್ರಮಗಳ ಹೆಸರಿನಲ್ಲಿ ದುರ್ಬಳಕೆ ಮಾಡುವುದನ್ನು ತಕ್ಷಣವೇ ನಿಲ್ಲಿಸುವಂತೆ ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಮುಖ್ಯಮಂತ್ರಿಗಳನ್ನು ಬಲವಾಗಿ ಒತ್ತಾಯಿಸುತ್ತದೆ.

ಕೇಂದ್ರ ಸರ್ಕಾರ ಗ್ಯಾಸ್ ದರ ಏರಿಕೆಗೆ ತೀವ್ರ ಖಂಡನೆ

ಕೇಂದ್ರ ಬಿಜೆಪಿಗೆ ಸರ್ಕಾರ ಅಡುಗೆ ಅನಿಲ ದರವನ್ನು 25 ರೂ ಏರಿಕೆ ಮಾಡಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ತೀವ್ರವಾಗಿ ಖಂಡಿಸುತ್ತದೆ.

ಕೋವಿಡ್ 19 ಸೋಂಕಿನಿಂದ ದೇಶದಲ್ಲಿ ಜನರ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಅವರ ಜೀವನ ನಿರ್ವಹಣೆಯೇ ಕಷ್ಟಕರವಾಗಿದ್ದು, ಇದರ ಜೊತೆಯಲ್ಲಿ ಮೇಲಿಂದ ಮೇಲೆ ಅಡುಗೆ ಅನಿಲದ ದರ 25 ರೂ ಏರಿಕೆ ಮಾಡಿರುವುದು ಸಾಮಾನ್ಯ ಜನರಿಗೆ ಇನ್ನಷ್ಟು ಹೊರೆಯಾಗುವುದಲ್ಲದೆ, ಗಾಯದ ಮೇಲೆ ಬರೆ ಎಳೆದಂತಾಗಿದೆ.

ಜನರ ಆರ್ಥಿಕ ಪರಿಸ್ಥಿತಿ ಹದಗೆಟ್ಟಾಗ ಅವರ ಸಮಸ್ಯೆಗೆ ಸ್ಪಂದನೆ ಮಾಡಬೇಕಾದ ಸರ್ಕಾರಗಳು ಅಗತ್ಯ ವಸ್ತುಗಳ ಬೆಲೆ ಏರಿಕೆಯೊಂದು ಕಡೆಯಾದರೆ , ಇನ್ನೊಂದು ಕಡೆ ಅಡುಗೆ ಅನಿಲ ಏರಿಸುತ್ತಾ ಇನ್ನಷ್ಟು ಹೊರೆ ಮಾಡುತ್ತದೆ. ಕಳೆದ ಎರಡು ತಿಂಗಳಿನಲ್ಲಿ ಮೂರು ಬಾರಿ ಎಲ್ ಪಿ ಜಿ ಬೆಲೆ ಹೆಚ್ಚಳವಾಗಿದೆ. ಜನವರಿಯಿಂದ ಸೆಪ್ಟೆಂಬರ್ ವರೆಗೆ 190 ರೂ ಏರಿಕೆ ಮಾಡಿರುವುದು ಜನರ ಮೇಲೆ ಹೊರೆಯಾಗಿದೆ.

ಕೇಂದ್ರ ಸರ್ಕಾರ ಗ್ರಾಮೀಣ ಜನರಿಗೆ ಉಚಿತ ಗ್ಯಾಸ್ ನೀಡುವುದಾಗಿ ಹೇಳಿಉಜ್ವಲಾ ಪಲಾನುಭವಿಗಳನ್ನು ಒಳಗೊಂಡು ಎಲ್ಲ ಅಡುಗೆ ಅನಿಲ ಬಳಕೆದಾರರ ಸಬ್ಸಿಡಿಗಳನ್ನು ಹಿಂಪಡೆದಿದೆ. ಈಗ ಪದೇ ಪದೇ ಅನಿಲ ದರ ಏರಿಕೆ ಮಾಡುವ ಮೂಲಕ ಜನರನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡುತ್ತದೆ. ಮುಂದೊಂದು ದಿನ ಕಟ್ಟಿಗೆ ಒಲೆಗೆ ದೂಡಲ್ಪಡುತ್ತದೆ. ಬೆಲೆ ಏರಿಕೆಯು ನೇರ ಬಡವರು ಮತ್ತು ಮಹಿಳೆಯರ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಹಾಗಾಗಿ ಏರಿಸಿರುವ ಗ್ಯಾಸ್ ದರವನ್ನು ಹಿಂಪಡೆಯಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮಿತಿ ಒತ್ತಾಯಿಸಿದೆ.



ಸರಕಾರವೇ ಲಸಿಕೆ ವಿತರಿಸಲಿ–ಮಂಡಳಿ ನಿಧಿ ಖಾಸಗಿ ಆಸ್ಪತ್ರೆಗಳಿಗೆ ನೀಡಬಾರದೆಂದು ಕಟ್ಟಡ ಕಾರ್ಮಿಕರ ಪ್ರತಿಭಟನೆ

ಕಾರ್ಮಿಕರ ಹಿತದೃಷ್ಟಿಯಿಂದ ಸರಕಾರಿ ಆಸ್ಪತ್ರೆಗಳ ಮೂಲಕ ಲಸಿಕೆ ವಿತರಿಸಬೇಕು ಮತ್ತು ಖಾಸಗಿ ಆಸ್ಪತ್ರೆಗಳ ಮೂಲಕ ನೀಡಲು ಉದ್ದೇಶಿಸಿರುವ ನಿರ್ಧಾರವನ್ನು ಕೂಡಲೇ ಕೈಬಿಡಬೇಕೆಂದು ಒತ್ತಾಯಿಸಿ ಮತ್ತು ವಿವಿಧ ಪ್ರಮುಖ ಬೇಡಿಕೆಗಳು ಒಳಗೊಂಡಂತೆ ಕಟ್ಟಡ ನಿರ್ಮಾಣ ಕಾರ್ಮಿಕರು ಸಿಐಟಿಯು ನೇತೃತ್ವದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಸಂಘಟನೆಯ ಸದಸ್ಯರು ರಾಜ್ಯವ್ಯಾಪಿ ಹೋರಾಟವನ್ನು ನಡೆಸಿದರು.

ರಾಜ್ಯ ಸರಕಾರವು ರಾಜ್ಯದಲ್ಲಿ 40 ಲಕ್ಷ ಕಟ್ಟಡ ಮತ್ತು ವಲಸೆ ಕಾರ್ಮಿಕರಿಗೆ ಕೋವಿಡ್ ಲಸಿಕೆಗಳನ್ನು ನೀಡಲು ನಿರ್ಧರಿಸಿದ್ದು ಸರ್ಕಾರಿ ಆಸ್ಪತ್ರೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಕ ನೀಡಬೇಕು. ಅದನ್ನು ಬಿಟ್ಟು ಖಾಸಗಿ ಆಸ್ಪತ್ರೆಗಳ ಮೂಲಕ ನೀಡಬಾರದೆಂದು ಪ್ರತಿಭಟನಾಕಾರರ ಆಗ್ರಹವಾಗಿದೆ.

ಉಚಿತವಾಗಿ ಕೋವಿಡ್ ಲಸಿಕೆಯನ್ನು ಕಾರ್ಮಿಕರು ಮತ್ತು ಅವರ ಕುಟುಂಬದ ಸದಸ್ಯರಿಗೆ ಮೊದಲನೆ ಹಾಗೂ ಎರಡನೇ ಡೋಸ್‌ಗಳನ್ನು ತಮ್ಮ ತಮ್ಮ ಊರುಗಳಲ್ಲಿರುವ ಸರ್ಕಾರಿ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಕಾರ್ಮಿಕ ಆಯುಕ್ತರು ಖಾಸಗಿ ಆಸ್ಪತ್ರೆಗಳ ಮಾಲೀಕರೊಂದಿಗೆ ಸಭೆ ನಡೆಸಿ ಪ್ರತಿ ಲಸಿಕೆಗೆ 780 ರೂಪಾಯಿ ದರದಲ್ಲಿ ರಾಜ್ಯದ 30 ಲಕ್ಷ ನೋಂದಾಯಿತ ಕಾರ್ಮಿಕರಿಗೆ ಹಾಗೂ 10 ಲಕ್ಷ ವಲಸೆ ಕಾರ್ಮಿಕರಿಗೆ ಲಸಿಕೆ ನೀಡುವ ತೀರ್ಮಾನ ಕೈಗೊಂಡಿರುವುದಾಗಿ ತಿಳಿದು ಬಂದಿದೆ. ಇದರಿಂದ ಕಲ್ಯಾಣ ಮಂಡಳಿಯ ಸುಮಾರು 624 ಕೋಟಿ ಹಣವು ನಿರಾಯಸವಾಗಿ 400 ಖಾಸಗಿ ಆಸ್ಪತ್ರೆಗಳ ಪಾಲಾಗಲಿದೆ ಮಂಡಳಿಯ ನಿಧಿಯನ್ನು ಖಾಲಿ ಮಾಡುವ ಹುನ್ನಾರವಾಗಿದೆ. ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಾಗಿರುವ ನಿಧಿಯನ್ನು ಈ ರೀತಿ ದುರ್ಬಳಕೆ ಮಾಡುವ ಪ್ರಯತ್ನವು ಸರ್ವೋಚ್ಚ ನ್ಯಾಯಾಲಯದ ಆದೇಶ ಮತ್ತು 2020 ಮಾರ್ಚಿನ ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ನಿರ್ದೇಶನದ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡಿದ ಎಲ್ಲ ಕೋವಿಡ್ ನಿಯಮಾವಳಿಗಳನ್ನು ಧಿಕ್ಕರಿಸಿ ರಾಜ್ಯದ ಜನತೆಯನ್ನು ವಿಶೇಷವಾಗಿ ಕೋವಿಡ್ ಪೀಡಿತ ಕುಟುಂಬಗಳನ್ನು ಸುಲಿಗೆ ಮಾಡಿದ್ದಾರೆ. ಇಂತಹ ಸುಲಿಗೆಕೋರರಿಗೆ ಬಡವರ ಕಲ್ಯಾಣಕ್ಕಾಗಿ ಸಂಗ್ರಹಿಸಲಾದ ಕಾರ್ಮಿಕ ಮಂಡಳಿಯಲ್ಲಿ ಇರುವ ಸೆಸ್ ಹಣವನ್ನು ಧಾರೆ ಎರೆಯಲು ಹೊರಟಿದ್ದಾರೆ.

ಈಗಾಗಲೇ ರೇಷನ್ ಕಿಟ್, ಟೂಲ್ ಕಿಟ್, ಸುರಕ್ಷಾ ಕಿಟ್ ಹಾಗೂ ಆರೋಗ್ಯ ಸುರಕ್ಷಾ ಕಿಟ್, ಸಾಫ್ಟವೇರ್ ಅಳವಡಿಕೆ ಹಾಗೂ ಕಂಪ್ಯೂಟರ್ ಮತ್ತು ಟಿವಿಗಳ ಖರೀದಿಗಳಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆಸಲಾಗಿದೆ ಎಂದು ಆರೋಪಿಸಿದರು.

ಕೊರೊನಾ ಕಾಲದಲ್ಲಿ ಸಂಕಷ್ಟದಲ್ಲಿರುವ ಜನರಿಗೆ ಅನ್ನ, ಆಹಾರ, ಆರೋಗ್ಯ, ಶಿಕ್ಷಣ ಮತ್ತು ಬದುಕಿನ ಭದ್ರತೆ ಒದಗಿಸುವುದು ಕೇಂದ್ರ ಮತ್ತು ರಾಜ್ಯಗಳ ಕೆಲಸವೆಂದು ಸುಪ್ರೀಂ ಕೋರ್ಟ್ ಹೇಳಿದೆ. ಅದಕ್ಕಾಗಿ ಕೆಲವು ರಾಜ್ಯ ಸರ್ಕಾರಗಳು ಸಾವಿರಾರು ಕೋಟಿ ರೂ. ಗಳ ಬಜೆಟ್ ಅನುದಾನವನ್ನು ಖರ್ಚು ಮಾಡುತ್ತಿವೆ. ಆದರೆ ನಮ್ಮ ರಾಜ್ಯ ಸರ್ಕಾರ ಮಾತ್ರ ಈ ಎಲ್ಲ ಕೆಲಸಗಳಿಗೆ ತನ್ನ ಹಣವನ್ನು ಖರ್ಚು ಮಾಡುವ ಬದಲು ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಗಾಳಿಗೆ ತೂರಿ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಮೂಲಕ ಜಾರಿ ಮಾಡಿಸುತ್ತಾ ಸಾವಿರಾರು ಕೋಟಿ ಹಣವನ್ನು ಖರ್ಚು ಮಾಡಿಸುತ್ತಿದೆ. ಇಂತಹ ಕಾರ್ಮಿಕ ವಿರೋಧಿ ಕ್ರಮವನ್ನು ಕೂಡಲೇ ನಿಲ್ಲಿಸಬೇಕು ಎಂದು ಪ್ರತಿಭಟನೆಯ ಮೂಲಕ ಸರಕಾರವನ್ನು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಖಾಸಗಿ ಆಸ್ಪತ್ರೆಗಳ ಮೂಲಕ ನಿರ್ಮಾಣ ವಲಯದ ಕಾರ್ಮಿಕರು ಹಾಗೂ ವಲಸೆ ಕಾರ್ಮಿಕರಿಗೆ ಸೆಪ್ಟೆಂಬರ್ 2 ರಿಂದ ನೀಡಲು ಉದ್ದೇಶಿಸಿರುವ ಲಸಿಕೆ ಕಾರ್ಯಕ್ರಮವನ್ನು ರದ್ದುಪಡಿಸಬೇಕು ತಾವು ಈ ಬಗ್ಗೆ ಅಗತ್ಯ ಕ್ರಮವಹಿಸದಿದ್ದಲ್ಲಿ ನಾವು ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ ಮತ್ತು ತೀವ್ರ ತೆರವಾದ ಹೋರಾಟಗಳಿಗೆ ಮುಂದಾಗಬೇಕಾಗುತ್ತದೆ ಎಚ್ಚರಿಕೆ ನೀಡಿದರು.

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್(ಸಿಐಟಿಯು) ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ, ಸಂಘಟನೆಯ ಪರವಾಗಿ ಲಿಂಗರಾಜು, ಕೆ.ಎಸ್. ಲಕ್ಷ್ಮಿ, ಐಎನ್‌ಟಿಯುಸಿ ಪರವಾಗಿ ಶಾಮಣ್ಣರೆಡ್ಡಿ, ಎನ್‌ಸಿಎಲ್ ಪರವಾಗಿ ಧನಶೇಖರ್, ಎಐಟಿಯುಸಿ ಪರವಾಗಿ ಗುರುವಯ್ಯ, ಎಐಸಿಸಿಟಿಯು ಪರವಾಗಿ ಅಪ್ಪಣ್ಣ, ಎಐಯುಟಿಯುಸಿ ಪರವಾಗಿ ಷಣ್ಮುಗಂ ಮತ್ತು ನೂರಾರು ಕಾರ್ಮಿಕರು ಭಾಗವಹಿಸಿದ್ದರು.

ಕೋಲಾರದಲ್ಲಿ ನಡೆದ ಪ್ರತಿಭಟನೆಯ ಭಾಗವಾಗಿ ಅಂಚೆ ಕಚೇರಿಯಿಂದ ಮುಖ್ಯಮಂತ್ರಿಗೆ ಪತ್ರ ಚಳುವಳಿ ಮೂಲಕ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಫೆಡರೇಶನ್ ನ ಮುಖಂಡರಾದ ಎಂ ಭೀಮರಾಜ್, ವಿಜಯಕೃಷ್ಣ, ಆರೋಗ್ಯನಾಥನ್, ಹೊನ್ನೇನಹಳ್ಳಿ ಅಂಬರೀಶ್, ರಾಮಚಂದ್ರಪ್ಪ, ಗೋಪಾಲಪ್ಪ ವೆಂಕಟೇಶ್, ಆನಂದ್ ಮುಂತಾದವರು ಭಾಗವಹಿಸಿದ್ದರು.

ಬೆಂಗಳೂರು, ಕೋಲಾರ ಸೇರಿದಂತೆ ಆನೇಕಲ್, ಉಡುಪಿ, ಮಂಗಳೂರು, ತುಮಕೂರು, ಸೇರಿದಂತೆ ವಿವಿಡೆಡೆ ಪ್ರತಿಭಟನೆಗಳು ನಡೆದಿವೆ.






ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯ 700 ಕೋಟಿ ರೂ ಖಾಸಗಿ ಆಸ್ಪತ್ರೆಗೆ

ಕಟ್ಟಡ ಮತ್ತು ವಲಸೆ ಕಾರ್ಮಿಕರಿಗೆ 40 ಲಕ್ಷ ಕೋವಿಡ್ ಲಸಿಕೆಗಳನ್ನು ನೀಡುವ ನೆಪದಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಖಾಸಗಿ ಆಸ್ಪತ್ರೆಗಳಿಗೆ 700 ಕೋಟಿ ರೂಪಾಯಿಗಳನ್ನು ಧಾರೆ ಎರೆಯಲು ಹೊರಟಿದ್ದಾರೆ. ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಕೈಗೊಂಡಿರುವ ಈ ಕ್ರಮವನ್ನು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್(ರಿ) ಸಿಐಟಿಯು ತೀವ್ರವಾಗಿ ಖಂಡಿಸಿದೆ. ಕೂಡಲೇ ಈ ತೀರ್ಮಾನವನ್ನು ಹಿಪಡೆಯಬೇಕೆಂದು ಆಗ್ರಹಿಸಿದೆ.

ಕಾರ್ಮಿಕ ಸಚಿವರು ಖಾಸಗಿ ಆಸ್ಪತ್ರೆಗಳ ಮಾಲಿಕರೊಂದಿಗೆ ಸಭೆ ನಡೆಸಿ ಪ್ರತಿ ಲಸಿಕೆಗೆ 780 ರೂಪಾಯಿ ದರದಲ್ಲಿ ರಾಜ್ಯದ 30 ಲಕ್ಷ ನೋಂದಾಯಿತ ಕಾರ್ಮಿಕರಿಗೆ ಹಾಗೂ 10 ಲಕ್ಷ ವಲಸೆ ಕಾರ್ಮಿಕರಿಗೆ ಲಸಿಕೆ ನೀಡುವ ತೀರ್ಮಾನ ಕೈಗೊಂಡಿರುವುದು ಮಂಡಳಿಯ ನಿಧಿಯನ್ನು ಖಾಲಿ ಮಾಡುವ ಹುನ್ನಾರವಾಗಿದೆ. ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಾಗಿರುವ ನಿಧಿಯನ್ನು ಕಾರ್ಮಿಕ ಸಚಿವರು ಹಾಗೂ ಮಂಡಳಿ ಅಧಿಕಾರಿಗಳ ಕೂಟವು ದುರ್ಬಳಕೆ ಮಾಡಿಕೊಳ್ಳಲು ಇಂತಹ ಪ್ರಯತ್ನ ನಡೆಸಿದೆ ಸಂಘದ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ಆರೋಪಿಸಿದ್ದಾರೆ.

ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯು ದೇಶಾದ್ಯಾಂತ ಎಲ್ಲ ನಾಗರಿಕರಿಗೂ ಉಚಿತವಾಗಿ ಕೋವಿಡ್ ಲಸಿಕೆಗಳನ್ನು ವಿತರಿಸುತ್ತಿದೆ. ಕರ್ನಾಟಕದಲ್ಲೂ ನಿರ್ಮಾಣ ವಲಯದ ಕಾರ್ಮಿಕರು ಮತ್ತು ಅವರ ಕುಟುಂಬದ ಸದಸ್ಯರು ಹಾಗೂ ವಲಸೆ ಕಾರ್ಮಿಕರು ಮೊದಲನೆ ಹಾಗೂ ಎರಡನೇ ಡೋಸ್‌ಗಳನ್ನು ಉಚಿತವಾಗಿ ಪಡೆಯುತ್ತಿದ್ದಾರೆ. ಹೀಗಿದ್ದೂ ಖಾಸಗಿ ಆಸ್ಪತ್ರೆಗಳಿಂದ ಲಸಿಕೆ ಖರೀದಿಸುವ ಅಗತ್ಯವಾದರೂ ಏನಿದೆ ಎಂದು ಕೆ. ಮಹಾಂತೇಶ್ ಪ್ರಶ್ನಿಸಿದ್ದಾರೆ.



ಈಗಾಗಲೇ ರೇಷನ್ ಕಿಟ್, ಟೂಲ್ ಕಿಟ್, ಬೂಸ್ಟರ್ ಕಿಟ್ ಹಾಗೂ ಸುರಕ್ಷಾ ಕಿಟ್, ಹೊಸ ತಂತ್ರಾಂಶ ಅಳವಡಿಕೆ ಹಾಗೂ ಕಂಪ್ಯೂಟರ್ ಮತ್ತು ಟಿವಿಗಳ ಖರೀದಿಗಳಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆಸಲಾಗಿದೆ. ಅಲ್ಲದೆ 2021– 22 ಸಾಲಿನಲ್ಲಿ 2688.90 ಕೋಟಿ ಮಂಡಳಿ ಹಣವನ್ನು ವಿವಿಧ ಬಾಬ್ತುಗಳಿಗೆ ಖರ್ಚು ಮಾಡಲು ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರದ ಕೆಟಿಪಿಪಿ ಕಾಯ್ದೆ 1999 ನ್ನು ಕಾರ್ಮಿಕ ಸಚಿವರು ಮತ್ತು ಮಂಡಳಿ ಹಿರಿಯ ಅಧಿಕಾರಿಗಳು ದುರ್ಬಳಕೆ ಮಾಡಿಕೊಂಡು ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಾಗಿರುವ ನಿಧಿಯನ್ನು ಮನಬಂದಂತೆ ದುರುಪಯೋಗ ಮಾಡುತ್ತಿದ್ದಾರೆ ಕಟ್ಟಡ ಕಾರ್ಮಿಕರ ಸಂಘ (ಸಿಐಟಿಯು) ಆರೋಪಿಸಿದೆ.

ಕೊರೊನಾ ಕಾಲದಲ್ಲಿ ಸಂಕಷ್ಟದಲ್ಲಿರುವ ಜನರಿಗೆ ಅನ್ನ, ಆಹಾರ, ಆರೋಗ್ಯ, ಶಿಕ್ಷಣ ಮತ್ತು ಬದುಕಿನ ಭದ್ರತೆ ಒದಗಿಸುವುದು ಕೇಂದ್ರ ಮತ್ತು ರಾಜ್ಯಗಳ ಕೆಲಸವೆಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ ರಾಜ್ಯ ಸರ್ಕಾರ ಇದಕ್ಕಾಗಿ ಖಜಾನೆಯಿಂದ ಖರ್ಚು ಮಾಡುವ ಬದಲು, ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಮೂಲಕ ಸಾವಿರಾರು ಕೋಟಿ ಹಣವನ್ನು ಖರ್ಚು ಮಾಡಿಸುತ್ತಿದೆ.

ಇದೇ ಅವಕಾಶವನ್ನು ಬಳಸಿಕೊಂಡು ಕಾರ್ಮಿಕ ಸಚಿವರು ಹಾಗೂ ಕಲ್ಯಾಣ ಮಂಡಳಿಯ ಕಾರ್ಯದರ್ಶಿ ಹಾಗೂ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಕೋಟ್ಯಾಂತರ ಹಣ ಲೂಟಿ ಹೊಡೆಯುತ್ತಿದ್ದಾರೆ.

ಇದು ಬಡ ಕಾರ್ಮಿಕರ ಹೆಸರಲ್ಲಿ ನಡೆಸುತ್ತಿರುವ ಹಗಲು ದರೋಡೆಯಾಗಿದೆ. ಇದಕ್ಕೆ ಕೂಡಲೇ ಕಡಿವಾಣ ಹಾಕಬೇಕೆಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್(ರಿ) ಸಿಐಟಿಯು ಆಗ್ರಹಿಸಿದೆ.

ಬಿಜೆಪಿಗೆ ರಾಷ್ಟ್ರಧ್ವಜದ ಕುರಿತು ಗೌರವ ಸುಲಭವಲ್ಲ



ಕೊಲೆ, ಬೆಂಕಿ ಹಚ್ಚುವುದು ಮತ್ತು ಹಿಂಸೆಯಂತಹ ಪ್ರಮುಖ ಅಪರಾಧಗಳೊಂದಿಗೆ ನಾವು ಏಗುತ್ತಿರುವಾಗ, ಧ್ವಜವನ್ನು ಅಪವಿತ್ರಗೊಳಿಸುವುದಕ್ಕೆ ಸಂಬಂಧಿಸಿದ ಅಪರಾಧದ ಬಗ್ಗೆ ನಾವು ಏಕೆ ಕಾಳಜಿ ವಹಿಸಬೇಕು ಎಂದು ಹಲವರು ಕೇಳಬಹುದು. ಅಲ್ಪಸಂಖ್ಯಾತರನ್ನು ಗುರಿಯಾಗಿಸುವ ಕಾಯ್ದೆಗಳಲ್ಲಿ ಧ್ವಜದಂತಹ ರಾಷ್ಟ್ರೀಯ ಚಿಹ್ನೆಗಳ ಬಳಕೆಯನ್ನು ನಿಲ್ಲಿಸಬೇಕು; ಅಲ್ಪಸಂಖ್ಯಾತರ ವಿರುದ್ಧ ದ್ವೇಷ ತುಂಬಿದ ಅಭಿಯಾನಗಳಲ್ಲಿ ರಾಷ್ಟ್ರಧ್ವಜವನ್ನು ಬಳಸುವುದು, ಅವರ ರಾಷ್ಟ್ರೀಯತೆಯ ನಿರೂಪಣೆಯ ವಿಕೃತ ಪ್ರಚಾರಕ್ಕೆ ಸಹಾಯ ಮಾಡುತ್ತದೆ ಮತ್ತು ಒಂದರ್ಥದಲ್ಲಿ ಹಿಂಸೆಯನ್ನು ಸಾಮಾನ್ಯಗೊಳಿಸುತ್ತದೆ. ಇಂತಹ ಪ್ರತಿ ಅಪರಾಧದ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಈ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಜಾತ್ಯತೀತ ಪ್ರತೀಕಗಳಿಗೆ ಬಿಜೆಪಿಯ ಅವಮಾನದ ಪ್ರತಿಯೊಂದು ಪ್ರಕರಣವನ್ನೂ ವಿರೋಧಿಸಬೇಕು.

ಬೃಂದಾ ಕಾರಟ್, (ಅನುವಾದ: **ಲವಿತ್ರ ವಸ್ತ್ರದ**)

ಯು.ಎಸ್, ಯು.ಕೆ ಮತ್ತು ಕೆನಡಾ ಸೇರಿದಂತೆ ಪಶ್ಚಿಮದಲ್ಲಿ ಅನೇಕ ರಾಷ್ಟ್ರಗಳು ರಾಷ್ಟ್ರಧ್ವಜದ ಬಳಕೆಗೆ ಸಂಬಂಧಿಸಿದ ಯಾವುದೇ ನಿರ್ದಿಷ್ಟವಾದ ಸಂಹಿತೆಯನ್ನು ಹೊಂದಿಲ್ಲ. ವಿಯೆಟ್ನಾಂ ಯುದ್ಧದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಯು.ಎಸ್ ಧ್ವಜವನ್ನು ಆ ದೇಶದ ಅನೇಕ ವಿ.ವಿ ಕ್ಯಾಂಪಸುಗಳಲ್ಲಿ ಸುಟ್ಟುಹಾಕಿದ ಚಿತ್ರಗಳು ಆ ಕಾಲದ ಐತಿಹಾಸಿಕ ಅಲ್ಲೋಲಕಲ್ಲೋಲದ ಭಾಗವಾಗಿದೆ. ಇದನ್ನು ಕಾನೂನುಬಾಹಿರ ಕೃತ್ಯವೆಂದು ಪರಿಗಣಿಸಲಾಗಲಿಲ್ಲ. ಭಾರತದಲ್ಲಿ 1950 ರಿಂದ ಒಂದು ರಾಷ್ಟ್ರಧ್ವಜದ ಬಳಕೆಗೆ ಸಂಬಂಧಿಸಿದ ಸಂಹಿತೆ (ಫ್ಲಾಗ್ ಕೋಡ್) ಜಾರಿಯಲ್ಲಿದೆ. ಇದನ್ನು 2002ರಲ್ಲಿ ತಿದ್ದುಪಡಿ ಮಾಡಲಾಯಿತು. ಯಾವುದೇ ವಿರೋಧವಿಲ್ಲದೆ ಅತ್ಯಂತ ಕಠಿಣವಾದ ಈ ಸಂಹಿತೆಯನ್ನು ಅಳವಡಿಸಿಕೊಳ್ಳಲಾಗಿದೆ.

ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮತ್ತು ರಾಜಸ್ಥಾನದ ಮಾಜಿ ರಾಜ್ಯಪಾಲರಾಗಿದ್ದ ಕಲ್ಯಾಣ್ ಸಿಂಗ್ ಅವರ ನಿಧನದ ಸಂದರ್ಭದಲ್ಲಿ ಲಕ್ನೋದಲ್ಲಿ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಮಾರಂಭದಲ್ಲಿ ಇದನ್ನು ಕಣ್ಣಿಗೆ ರಾಚುವಂತೆ ಉಲ್ಲಂಘಿಸಿದ ಕಾರಣ ಈ ಧ್ವಜ ಸಂಹಿತೆಯು ಈಗ ಸುದ್ದಿಯಲ್ಲಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಯುಪಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಸಂವಿಧಾನಾತ್ಮಕ ಹುದ್ದೆಗಳನ್ನು ಹೊಂದಿರುವ ಇತರ ಪ್ರಮುಖ ನಾಯಕರು ಈ ಶ್ರದ್ಧಾಂಜಲಿ ಸಮಾರಂಭದಲ್ಲಿ ಭಾಗವಹಿಸಿದ್ದರು.

ಶವಪೆಟ್ಟಿಗೆಯ ಮೇಲೆ ಇರಿಸಲಾದ ಬಿಜೆಪಿ ಧ್ವಜವು ರಾಷ್ಟ್ರಧ್ವಜದ ಅರ್ಧದಷ್ಟು ಭಾಗವನ್ನು ಮುಚ್ಚಿಹಾಕಿತ್ತು. ಬಿಜೆಪಿ ಅಧ್ಯಕ್ಷರಾದ ಜೆಪಿ ನಡ್ಡಾ ಅವರು ರಾಷ್ಟ್ರ ಧ್ವಜದ ಮೇಲೆ ಪಕ್ಷದ ಧ್ವಜವನ್ನು ಹಾಕಿದ್ದಾರೆ ಎಂದು ವರದಿ ಮಾಡಲಾಗಿದೆ. ಛಾಯಾಚಿತ್ರಗಳಲ್ಲಿ ತೋರಿಸಿದಂತೆ ನಡ್ಡಾ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿಯವರು ಬಿಜೆಪಿ ಧ್ವಜದ ಕೆಳಗೆ ರಾಷ್ಟ್ರಧ್ವಜವನ್ನು ಇಟ್ಟು ಗೌರವ ಸೂಚಿಸುತ್ತಿದ್ದಾರೆ. ಇದು ಧ್ವಜ ಸಂಹಿತೆ 2002 ರ ಕಲಮು 2.2 (i)ರ ಸ್ಪಷ್ಟ ಉಲ್ಲಂಘನೆಯಾಗಿದೆ, "ರಾಷ್ಟ್ರಧ್ವಜವನ್ನು ಪ್ರದರ್ಶಿಸಿದಾಗಲೆಲ್ಲ ಅದು ಗೌರವದ ಸ್ಥಾನವನ್ನು ಪಡೆದುಕೊಳ್ಳಬೇಕು ಮತ್ತು ಅದನ್ನು ಸ್ಪಷ್ಟವಾಗಿ ಕಾಣುವಂತೆ ಇಡಬೇಕು." ಎಂದು ಈ ಕಲಮು ಹೇಳುತ್ತದೆ.

ಅವರ ವಿರುದ್ಧ ಯಾವುದೇ ಪ್ರಕರಣಗಳನ್ನು ದಾಖಲಿಸಲಾಗಿದೆಯೇ? ಅಂತಹ ಯಾವುದೇ ಕ್ರಮ ತೆಗೆದುಕೊಂಡಿರುವುದು ಕಂಡುಬಂದಿಲ್ಲ. ಕೆಂಪು ಧ್ವಜ ಅಥವಾ ಬೇರೆ ಯಾವುದೇ ಪಕ್ಷದ ಧ್ವಜವನ್ನು ರಾಷ್ಟ್ರಧ್ವಜದ ಮೇಲೆ ಅರಿವಿಲ್ಲದೆಯೇ ಯಾವುದೇ ಪಕ್ಷ ಹಾಕಿದ್ದರೆ ಊಹಿಸಿ ಏನಾಗುತ್ತಿತ್ತೆಂದು. ಪಕ್ಷದ ನಾಯಕನ ದೇಹದ ಮೇಲೆ ಪಕ್ಷದ ಧ್ವಜವನ್ನು ಹಾಕುವುದು ಗೌರವ ನೀಡುವ ಸಾಮಾನ್ಯ ವಿಧಾನವಾಗಿದೆ. ಆದರೆ ಅದು ರಾಷ್ಟ್ರಧ್ವಜದ ಕೆಳಗೆ ಇರಬೇಕೆ ವಿನಃ ಅದರ ಮೇಲೆ ಅಲ್ಲ. ಒಂದು ಪಕ್ಷವು ತನ್ನ ಪಕ್ಷದ ಕಚೇರಿಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸುತ್ತದೆಯೋ ಇಲ್ಲವೋ ಅದು ಅವರ ಆಯ್ಕೆಯಾಗಿದೆ, ಆದರೆ ಆಡಳಿತ ಪಕ್ಷವೊಂದು ತನ್ನ ಧ್ವಜವನ್ನು ರಾಷ್ಟ್ರಧ್ವಜದ ಮೇಲೆ ಇಡುವುದು ಕಾನೂನಿಗೆ ವಿರುದ್ಧವಾಗಿದೆ. ಆದರೆ ಬಿಜೆಪಿ ಮತ್ತು ಅದರ ನಾಯಕರು ಕಾನೂನಿಗಿಂತ ತಾವೇ ಮೇಲು ಎಂಬುದನ್ನು ಸ್ಪಷ್ಟವಾಗಿ ಹೇಳಲು ಹೊರಟಂತಿದೆ.

ಅವರಿಗೆ ಸಾರ್ವಜನಿಕ ಕ್ಷಮೆಯಾಚಿಸಲು ಕನಿಷ್ಠ ಸೌಜನ್ಯ ಇಲ್ಲ, ಏಕೆಂದರೆ ಅವರಿಗೆ ರಾಷ್ಟ್ರಧ್ವಜದ ಬಗ್ಗೆ ಸುಲಭವಾಗಿ ಗೌರವ ಬರುವುದಿಲ್ಲ.

ವಾಸ್ತವವಾಗಿ ನೋಡುವುದಾದರೆ ಆರ್.ಎಸ್.ಎಸ್ ಎಂದಿಗೂ ತ್ರಿವರ್ಣವನ್ನು ರಾಷ್ಟ್ರಧ್ವಜವಾಗಿ ಸ್ವೀಕರಿಸಿಲ್ಲ. ಆರ್.ಎಸ್.ಎಸ್ ಮುಖವಾಣಿ ಆರ್ಗನೈಸರ್ ಪತ್ರಿಕೆಯ 17 ಜುಲೈ 1947 ರ ಸಂಚಿಕೆಯಲ್ಲಿ, ಕೇಸರಿ ಧ್ವಜವನ್ನು ರಾಷ್ಟ್ರಧ್ವಜವಾಗಿ ಅಳವಡಿಸಿಕೊಳ್ಳಬೇಕೆಂದು ಒತ್ತಾಯಿಸಿತ್ತು.

ಆಗಸ್ಟ್ 14, ಸ್ವಾತಂತ್ರ್ಯದ ಹಿಂದಿನ ದಿನದಂದು, "ಅದೃಷ್ಟವಶಾತ್ ಅಧಿಕಾರಕ್ಕೆ ಬಂದ ಜನರು ನಮ್ಮ ಕೈಯಲ್ಲಿ ತ್ರಿವರ್ಣವನ್ನು ನೀಡಬಹುದು. ಆದರೆ ಅದನ್ನು ಎಂದಿಗೂ ಹಿಂದೂಗಳ ಗೌರವಿಸುವುದಿಲ್ಲ ಮತ್ತು ಅದನ್ನು ಅಳವಡಿಸಿಕೊಳ್ಳುವುದಿಲ್ಲ. ಮೂರು ಎಂಬ ಪದವೇ ಅಪಶಕುನ ಮತ್ತು ಮೂರು ಬಣ್ಣಗಳನ್ನು ಹೊಂದಿರುವ ಧ್ವಜವು ಖಂಡಿತವಾಗಿಯೂ ಮಾನಸಿಕ ಪರಿಣಾಮವನ್ನು ಉಂಟುಮಾಡುತ್ತದೆ ಮತ್ತು ದೇಶಕ್ಕೆ ಹಾನಿಕಾರಕವಾಗಿದೆ" ಎಂದು ಆರ್.ಎಸ್.ಎಸ್ ತನ್ನ ಪ್ರಕಟಣೆಯಲ್ಲಿ ಹೇಳಿದೆ.

ಮಹಾತ್ಮಾ ಗಾಂಧಿಯವರ ಹತ್ಯೆಯ ನಂತರ ಆರ್.ಎಸ್.ಎಸ್ ಮೇಲೆ ಹೇರಲಾದ ನಿಷೇಧವನ್ನು ತೆಗೆದುಹಾಕುವ ಷರತ್ತಿನಂತೆ, ಸರ್ಕಾರವು ರಾಷ್ಟ್ರ ಧ್ವಜವನ್ನು ಸ್ವೀಕರಿಸಲು ಆ ಸಂಘಟನೆಯನ್ನು ಕೇಳಿತ್ತು. ಗೃಹ ಕಾರ್ಯದರ್ಶಿ ಎಚ್.ವಿ.ಆರ್ ಅಯ್ಯಂಗಾರ್ ಅವರು ಮೇ 1949 ರಲ್ಲಿ "ಪ್ರಭುತ್ವಕ್ಕೆ ನಿಷ್ಠೆಗೆ ಸಂಬಂಧಿಸಿದಂತೆ ಯಾವುದೇ ಹಿಂಜರಿಕೆಯಿಲ್ಲ ಎಂದು ದೇಶವನ್ನು ತೃಪ್ತಿಪಡಿಸಲು ರಾಷ್ಟ್ರಧ್ವಜವನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳುವುದು ಅಗತ್ಯವಾಗಿರುತ್ತದೆ." ಎಂದು ಎಂ.ಎಸ್ ಗೋಲ್ವಾಲ್ಕರ್ ಗೆ ಪತ್ರ ಬರೆದಿದ್ದರು.

ಇಂತಹ ಇತಿಹಾಸದೊಂದಿಗೆ, ಬಿಜೆಪಿ ನಾಯಕರು, ಆರ್.ಎಸ್.ಎಸ್ ನ ದ್ವೇಷ ಬಿತ್ತುವ ಶಾಖೆಗಳಲ್ಲಿ ತರಬೇತಿ ಪಡೆದವರಾದ್ದರಿಂದ ರಾಷ್ಟ್ರಧ್ವಜವನ್ನು ತಮ್ಮ ಪಕ್ಷದ ಧ್ವಜದಿಂದ ಮುಚ್ಚುವುದು ಆಶ್ಚರ್ಯವೇನಲ್ಲ.

ರಾಷ್ಟ್ರ ಧ್ವಜಕ್ಕೆ ಆಗಾಗ ಆಗುತ್ತಿರುವ ಅವಮಾನಕ್ಕೆ ಇನ್ನೊಂದು ಆಯಾಮವಿದೆ.

ಮುಸ್ಲಿಮರ ವಿರುದ್ಧದ ಗುಂಪು–ಹತ್ಯೆ ಮಾಡುವವರು, ಅಲ್ಪಸಂಖ್ಯಾತರ ಮನೆಗಳಿಗೆ ಬೆಂಕಿ ಹಚ್ಚುವ ದರೋಡೆಕೋರರು, ಅಲ್ಪಸಂಖ್ಯಾತರ ವಿರುದ್ಧ ದ್ವೇಷದ ಕೃತ್ಯಗಳನ್ನು ಎಸಗುವಾಗ ಅವು ರಾಷ್ಟ್ರೀಯತಾವಾದಿ ಕೃತ್ಯಗಳೆಂದು ಸಾರುತ್ತಾ ಸಾಮಾನ್ಯವಾಗಿ ರಾಷ್ಟ್ರಧ್ವಜವನ್ನು ಕೇಸರಿ ಧ್ವಜಗಳೊಂದಿಗೆ ಹಾರಿಸುತ್ತಾ ಓಡಾಡುತ್ತಾರೆ. ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ ಕಾಯ್ದೆ 1971, ಕಲಮು 2, ಹೀಗೆ ಹೇಳುತ್ತದೆ: "ಭಾರತೀಯ ರಾಷ್ಟ್ರೀಯ ಧ್ವಜ ಮತ್ತು ಭಾರತದ ಸಂವಿಧಾನಕ್ಕೆ ಅವಮಾನ.– ಯಾರಾದರೂ ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕ ದೃಷ್ಟಿಯಲ್ಲಿನ ಯಾವುದೇ ಸ್ಥಳದಲ್ಲಿ ರಾಷ್ಟ್ರೀಯ ಧ್ವಜಕ್ಕೆ ಅಥವಾ ಭಾರತದ ಸಂವಿಧಾನಕ್ಕೆ ಅಗೌರವ ತೋರಿಸಿದರೆ ಅಥವಾ ತಿರಸ್ಕಾರಕ್ಕೆ ಒಳಪಡಿಸಿದರೆ (ಮಾತನಾಡಿದ ಅಥವಾ ಲಿಖಿತ ಪದಗಳ ಮೂಲಕ,ಅಥವಾ ಕ್ರಿಯೆಗಳಿಂದ) ಅಂಥವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ." ಕಾನೂನು ಮುಂದುವರೆದು ಹೀಗೆ ವಿವರಿಸುತ್ತದೆ "ಸಂವಿಧಾನದ ತಿದ್ದುಪಡಿ ಅಥವಾ ರಾಷ್ಟ್ರಧ್ವಜದಲ್ಲಿ ಬದಲಾವಣೆಯನ್ನು ಕಾನೂನುಬದ್ಧ ರೀತಿಯಲ್ಲಿ ತರುವ ಉದ್ದೇಶ ಹೊಂದಿರುವ, ಸಂವಿಧಾನದ ಅಥವಾ ರಾಷ್ಟ್ರಧ್ವಜದ ಅಥವಾ ಸರಕಾರದ ಯಾವುದೇ ಕ್ರಮಗಳ ಕುರಿತು ಬಲವಾದ ಅಸಮ್ಮತಿ ಅಥವಾ ಟೀಕೆ, ಈ ಕಲಮಿನ ಅಡಿಯಲ್ಲಿ ಅಪರಾಧವಾಗುವುದಿಲ್ಲ."

ಆದರೆ ಭಾರತದ ಸಂವಿಧಾನದ ಜಾತ್ಯತೀತ ಸ್ವರೂಪವನ್ನು ಬುಡಮೇಲು ಮಾಡಲು ರಾಷ್ಟ್ರಧ್ವಜವನ್ನು ಹಿಡಿದು ಹೊರಟಿರುವ ಕೋಮುವಾದಿ ಶಕ್ತಿಗಳ ಕ್ರಮಗಳು ಕಾನೂನುಬದ್ಧವಲ್ಲ.


2020 ರ ದೆಹಲಿ ಹಿಂಸಾಚಾರದ ನಂತರದಲ್ಲಿ, ದ್ವೇಷದ ಭಾಷಣಗಳಿಂದ ಗಲಭೆಯನ್ನು ಪ್ರಚೋದಿಸಿದ ಬಿಜೆಪಿ ನಾಯಕರಲ್ಲಿ ಒಬ್ಬರಾದ ಕಪಿಲ್ ಮಿಶ್ರಾ ಅವರು ರಾಜಧಾನಿಯ ಹೃದಯಭಾಗದಲ್ಲಿ ಶಾಂತಿ ಸಭೆಯ ನಾಯಕತ್ವ ವಹಿಸಿದ್ದರು. ಅವರ ಬೆಂಬಲಿಗರು ರಾಷ್ಟ್ರ ಧ್ವಜವನ್ನು ಬೀಸುತ್ತ, "ಗೋಲಿ ಮಾರೋ ಸಾಲೋನ್ ಕೋ" ನಂತಹ ಪ್ರಚೋದನಕಾರಿ ಘೋಷಣೆಗಳನ್ನು ಕೂಗಿದ್ದರು. ಅವರ ಮೇಲೆ ಯಾವುದೇ ಪ್ರಕರಣಗಳನ್ನು ದಾಖಲಿಸಲಿಲ್ಲ.

ಸೆಪ್ಟೆಂಬರ್ 2015 ರಲ್ಲಿ, ಮೊಹಮ್ಮದ್ ಅಖ್ಲಾಕ್ ನ ಕ್ರೂರ ಹತ್ಯೆಯೊಂದಿಗೆ, ಗೋಹತ್ಯೆಯನ್ನು ಮಾಡಿದ ಆರೋಪಗಳ ಮೇಲೆ ಗುಂಪು–ಹತ್ಯೆಗಳು ಆರಂಭವಾದವು. ಪ್ರಕರಣದ ಪ್ರಮುಖ ಆರೋಪಿಯೊಬ್ಬ ಸಹಜ ಕಾರಣದಿಂದ ಸಾವನ್ನಪ್ಪಿದಾಗ, ಆತನ ಅಂತ್ಯಕ್ರಿಯೆಗೆ ಸಂಘ ಪರಿವಾರದ ಸದಸ್ಯರು ರಾಷ್ಟ್ರಧ್ವಜವನ್ನು ಆತನ ದೇಹದ ಮೇಲೆ ಹೊದಿಸಿ ಆತ ಹುತಾತ್ಮನಾದನೆಂದು ಘೋಷಿಸಿದರು. ಸಂಘ ಪರಿವಾರದ ನಾಯಕರು ಅಲ್ಲಿ ಹಾಜರಿದ್ದರು. ಇವು ಕೇವಲ ಕೆಲವೊಂದು ಉದಾಹರಣೆಗಳು ಮಾತ್ರ.

ಕೊಲೆ, ಬೆಂಕಿ ಹಚ್ಚುವುದು ಮತ್ತು ಹಿಂಸೆಯಂತಹ ಪ್ರಮುಖ ಅಪರಾಧಗಳೊಂದಿಗೆ ನಾವು ಏಗುತ್ತಿರುವಾಗ ಧ್ವಜವನ್ನು ಅಪವಿತ್ರಗೊಳಿಸುವುದಕ್ಕೆ ಸಂಬಂಧಿಸಿದ ಅಪರಾಧದ ಬಗ್ಗೆ ನಾವು ಏಕೆ ಕಾಳಜಿ ವಹಿಸಬೇಕು ಎಂದು ಹಲವರು ಕೇಳಬಹುದು. ಸಂಘ ಪರಿವಾರ ಮತ್ತು ಹಿಂದುತ್ವ ಶಕ್ತಿಗಳ ಅಲ್ಪಸಂಖ್ಯಾತರ ವಿರೋಧಿ ಹತ್ಯಾಕಾಂಡಗಳು ನಕಲಿ ರಾಷ್ಟ್ರೀಯತೆಯ ಹೆಸರಿನಲ್ಲಿ ತಮ್ಮ ಹಿಂಸೆಯನ್ನು ಮರೆಮಾಚುತ್ತವೆ. "ನಕಲಿ" ಏಕೆಂದರೆ ಅವರ ದೃಷ್ಟಿಕೋನದಲ್ಲಿ ರಾಷ್ಟ್ರೀಯತೆಯನ್ನು ಹಿಂದೂ ಎಂದು ಸಮೀಕರಿಸಲಾಗಿದೆ. ಅಲ್ಪಸಂಖ್ಯಾತರ ವಿರುದ್ಧ ದ್ವೇಷ ತುಂಬಿದ ಅಭಿಯಾನಗಳಲ್ಲಿ ರಾಷ್ಟ್ರಧ್ವಜವನ್ನು ಬಳಸುವುದು, ಅವರ ರಾಷ್ಟ್ರೀಯತೆಯ ನಿರೂಪಣೆಯ ವಿಕೃತ ಪ್ರಚಾರಕ್ಕೆ ಸಹಾಯ ಮಾಡುತ್ತದೆ ಮತ್ತು ಒಂದರ್ಥದಲ್ಲಿ ಹಿಂಸೆಯನ್ನು ಸಾಮಾನ್ಯಗೊಳಿಸುತ್ತದೆ.

ಅಲ್ಪಸಂಖ್ಯಾತರನ್ನು ಗುರಿಯಾಗಿಸುವ ಕಾಯ್ದೆಗಳಲ್ಲಿ ಧ್ವಜದಂತಹ ರಾಷ್ಟ್ರೀಯ ಚಿಹ್ನೆಗಳ ಬಳಕೆಯನ್ನು ನಿಲ್ಲಿಸಬೇಕು; ಇಂತಹ ಪ್ರತಿ ಅಪರಾಧದ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಜಾತ್ಯತೀತ ಪ್ರತೀಕಗಳಿಗೆ ಬಿಜೆಪಿಯ ಅವಮಾನದ ಪ್ರತಿಯೊಂದು ಪ್ರಕರಣವನ್ನೂ ವಿರೋಧಿಸಬೇಕು.



ದೇಶವು ಕ್ರಮೇಣ ಸರ್ವಾಧಿಕಾರಶಾಹಿಯತ್ತ ಹೊರಳುತ್ತಿರುವ ಕಾಲಘಟ್ಟದಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಪ್ರಬೋಧಕ ಅಭಿಪ್ರಾಯಗಳು ಸಂತಸ ತರುತ್ತವೆ. ಆದರೆ ನಮ್ಮ ಸುತ್ತಮುತ್ತ ಕಣ್ಣು ಹಾಯಿಸುವಾಗ, ಸತ್ಯ ಮತ್ತು ಪ್ರಜಾಪ್ರಭುತ್ವದ ಬಗ್ಗೆ ನ್ಯಾ. ಚಂದ್ರಚೂಡ್ ವ್ಯಕ್ತಪಡಿಸಿರುವ ಚಿಂತನೆಗಳಿಗಿಂತ ಸಂಪೂರ್ಣವಾಗಿ ಭಿನ್ನವಾದ ಚಿತ್ರವನ್ನು ಕಾಣುತ್ತಿದ್ದೇವೆ.
ಜನರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಇತ್ತೀಚಿನ ದಿನಗಳಲ್ಲಿ ಹೆಚ್ಚು ಸಂವೇದನಾಶೀಲವಾಗಿರುವ ಕೆಲವು ಲಕ್ಷಣಗಳು ಕಂಡುಬಂದಿವೆಯಾದರೂ ನ್ಯಾಯಾಂಗದ ಸ್ವತಂತ್ರ ಪಾತ್ರ ಹಾಗೂ ಕಾರ್ಯಾಂಗಕ್ಕೆ ಅದರ ಮೌನಸಮ್ಮತಿಯ ಬಗ್ಗೆ ಇನ್ನೂ ಕಳವಳ ಉಳಿದಿರುವಾಗ 'ಸತ್ಯ'ವನ್ನು ಆಧರಿಸಿರುವ ಗಾಢವಾದ ಪ್ರಜಾಸತ್ತಾತ್ಮಕ ಕಣ್ಣೋಟವು ತದ್ವಿರುದ್ಧವಾದ ಪ್ರವೃತ್ತಿಗಳಿಗೆ ಎದುರಾಗಿ ನಿಲ್ಲುತ್ತದೆ ಮತ್ತು ಮುಂಬರುವ ದಿನಗಳಲ್ಲಿ ಅದು ಇಡೀ ಉನ್ನತ ನ್ಯಾಯಾಂಗವನ್ನು ವ್ಯಾಪಿಸುತ್ತದೆ ಎಂದು ಆಶಿಸಬೇಕಾಗಿದೆ.

* ಪ್ರಕಾಶ್ ಕಾರಟ್


ಅಧಿಕಾರದ ಎದುರು ಸತ್ಯದ ಮಾತು

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಇತ್ತೀಚೆಗೆ ಜಸ್ಟಿಸ್ ಎಂ.ಸಿ. ಛಾಗ್ಲಾ ಸ್ಮಾರಕ ಉಪನ್ಯಾಸದ ಸಂದರ್ಭದಲ್ಲಿ "ಅಧಿಕಾರಕ್ಕೆ ಎದುರಾಗಿ ಸತ್ಯದ ಮಾತು: ನಾಗರಿಕರು ಮತ್ತು ಕಾನೂನು" ಎಂಬ ವಿಷಯದ ಮೇಲೆ ಚಿಂತನೆಗೆ ಹಚ್ಚುವ ಉದ್ಬೋಧಕ ಉಪನ್ಯಾಸ ನೀಡಿದರು.

ಸತ್ಯ ಮತ್ತು ಪ್ರಜಾಪ್ರಭುತ್ವದ ನಡುವಿನ ಸಂಬಂಧ ಮತ್ತು ಪ್ರಭುತ್ವಕ್ಕೆ ಸತ್ಯವನ್ನು ಹೇಳುವಲ್ಲಿ ಪ್ರಜೆಗಳ ಪಾತ್ರವನ್ನು ವಿದ್ವತ್‌ಪೂರ್ಣವಾಗಿ ವಿಶ್ಲೇಷಿಸುತ್ತ ಜಸ್ಟಿಸ್ ಚಂದ್ರಚೂಡ್ "ಪ್ರಜಾಪ್ರಭುತ್ವ ಉಳಿಯಬೇಕಾದರೆ ಸತ್ಯದ ಶಕ್ತಿ ಬೇಕು. 'ಅಧಿಕಾರಸ್ಥರಿಗೆ ಸತ್ಯವನ್ನು ಹೇಳುವುದು' ಪ್ರಜಾಪ್ರಭುತ್ವದಲ್ಲಿ ಪ್ರತಿ ಪ್ರಜೆಯು ಹೊಂದಿರಲೇ ಬೇಕಾದ ಹಕ್ಕು ಎಂದು ಪರಿಗಣಿಸುವುದಾದರೆ ಅದು ಪ್ರತಿ ಪ್ರಜೆಯ ಕರ್ತವ್ಯವೂ ಆಗಬೇಕು" ಎನ್ನುತ್ತಾರೆ.

ಮುಂದುವರೆದು ಅವರು "'ಸತ್ಯ' ಹೇಳುವ ಕ್ರಿಯೆ ಅಧಿಕಾರಕ್ಕೆ ಎದುರಾಗಿ ನಡೆಯುತ್ತದೆ, ಹಾಗೂ ಅದು ನಿರಂಕುಶತ್ವದತ್ತ ಒಲವನ್ನು ನಿವಾರಿಸುತ್ತದೆ ಎಂಬ ಭಾವನೆ ಇದೆ ಎಂಬುದು ಮಹತ್ವದ ವಿಷಯ" ಎಂದು ಹೇಳುತ್ತಾರೆ.

ಕೆಲವು ದಿನಗಳ ಹಿಂದೆ 'ಆಳ್ವಿಕೆಯಲ್ಲಿ ನ್ಯಾಯಾಂಗದ ಪಾತ್ರ' ಕುರಿತ ಒಂದು ಆನ್‌ಲೈನ್ ಕಾರ್ಯಕ್ರಮದಲ್ಲಿ ಮಾತನಾಡಿದ ಇನ್ನೊಬ್ಬ ಸುಪ್ರಿಂ ಕೋರ್ಟ್ ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಹೀಗೆ ಹೇಳಿದ್ದರು: "ಭಾರಿ ಬೆಲೆ ತೆತ್ತು ನಾವು ನಮ್ಮ ಸ್ವಾತಂತ್ರ್ಯವನ್ನು ಗಳಿಸಿದ್ದೇವೆ. ಆದ್ದರಿಂದ ಪ್ರತಿ ಭಾರತೀಯರ್ರು ಅಧಿಕಾರದಲ್ಲಿರುವವರನ್ನು ಪ್ರಶ್ನಿಸುವ ಸ್ವಾತಂತ್ರ್ಯವನ್ನು ಸತತವಾಗಿ ಬಳಸಿಕೊಳ್ಳಬೇಕು. ಯಾಕೆಂದರೆ ಪ್ರಜಾಪ್ರಭುತ್ವದಲ್ಲಿ ಯಾವುದೂ ಉಚಿತವಾಗಿ ಸಿಗುವುದಿಲ್ಲ. ಆದ್ದರಿಂದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು ನಮ್ಮ ಕೆಲಸವಾಗಬೇಕು, ಯಾವುದೇ ಅತಿಕ್ರಮಣವನ್ನು ಸಹಿಸಿಕೊಂಡು ಸುಮ್ಮನಿರಬಾರದು". ಪ್ರಜಾಪ್ರಭುತ್ವವನ್ನು ರಕ್ಷಿಸಿಕೊಳ್ಳಬೇಕಾದರೆ ಪ್ರಜೆಗಳು ಅಧಿಕಾರದಲ್ಲಿರುವವರನ್ನು ಪ್ರಶ್ನಿಸಬೇಕೆಂಬ ಭಾವ ಇಲ್ಲಿಯೂ ಧ್ವನಿಸುತ್ತದೆ.



ಮಾತು ಪ್ರತಿ ನಾಗರಿಕರ ನಾಲಗೆ ತುದಿಯಲ್ಲಿದೆ, ಅದು ಕೋರ್ಟಿನ ಆದೇಶಕ್ಕೆ ಕಾಯುತ್ತಿದೆ

ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

ದೇಶವು ಕ್ರಮೇಣ ಸರ್ವಾಧಿಕಾರಶಾಹಿಯತ್ತ ಹೊರಳುತ್ತಿರುವ ಕಾಲಘಟ್ಟದಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಇಂತಹ ಪ್ರಬೋಧಕ ಅಭಿಪ್ರಾಯಗಳನ್ನು ಹೊಂದಿದ್ದಾರೆ ಎಂಬುದು ಸಂತಸದ ಸಂಗತಿ. ಆದರೆ, ತದ್ವಿರುದ್ಧವಾಗಿ, ನಮ್ಮ ಸುತ್ತಮುತ್ತ ಕಣ್ಣು ಹಾಯಿಸುವಾಗ, ಸತ್ಯ ಮತ್ತು ಪ್ರಜಾಪ್ರಭುತ್ವದ ಬಗ್ಗೆ ನ್ಯಾ. ಚಂದ್ರಚೂಡ್ ವ್ಯಕ್ತಪಡಿಸಿರುವ ಮಾದರಿ ಚಿಂತನೆಗಳಿಗೆ ಸಂಪೂರ್ಣವಾಗಿ ಭಿನ್ನವಾದ ಚಿತ್ರವನ್ನು ಕಾಣುತ್ತಿದ್ದೇವೆ.

ತದ್ವಿರುದ್ಧವಾದ ಚಿತ್ರ

ಅಧಿಕಾರಸ್ಥರ ಎದುರು ಸತ್ಯವನ್ನು ಹೇಳುವ ಮತ್ತು ದಮನಿತರ ಪರವಾಗಿ ದನಿಯೆತ್ತುತ್ತಿರುವ ನಾಗರಿಕರಿಗೆ ಏನಾಗುತ್ತಿದೆ? ಎಲ್ಗಾರ್ ಪರಿಷತ್–ಭೀಮಾ ಕೋರೆಗಾಂವ್ ಕಾರ್ಯಕ್ರಮದಲ್ಲಿ ಪಾಲ್ಗೊಂಡವರ ವಿರುದ್ಧ ಯುಎಪಿಎ ಅಡಿ ಕೇಸ್‌ಗಳನ್ನು ಹಾಕಲಾಗಿದೆ. ಈ ತಥಾಕಥಿತ ಪಿತೂರಿಯಲ್ಲಿ ಬಂಧಿತರಾದ ಕೆಲವರು ಈಗಾಗಲೇ ವಿಚಾರಣೆಯಿಲ್ಲದೆ ಮೂರು ವರ್ಷ ಜೈಲಿನಲ್ಲಿ ಕಳೆದಿದ್ದಾರೆ.

ಸತ್ಯದ ನಿರ್ಣಯಕ್ಕೆ ಬರಲು ಪ್ರಜೆಗಳಿಗೆ ನೆರವಾಗುವಂಥ ಸಾರ್ವಜನಿಕ ಸಂಸ್ಥೆಗಳನ್ನು ಬಲಪಡಿಸಬೇಕೆಂದು ನ್ಯಾ. ಚಂದ್ರಚೂಡ್ ಹೇಳಿದ್ದಾರೆ. ಆ ಪೈಕಿ ಒಂದು ಮುಕ್ತ ಮಾಧ್ಯಮದ ಅಸ್ತಿತ್ವ ಮೊದಲನೆಯದಾಗುತ್ತದೆ. ಆದರೆ ವಾಸ್ತವವಾಗಿ ಮಾಧ್ಯಮವು ಈಗ ಅಪಾರ ಒತ್ತಡದಲ್ಲಿದೆ. ಸ್ವತಂತ್ರವಾಗಿರಬೇಕಾದ ಹಾಗೂ ಸತ್ಯವನ್ನು ನುಡಿಯಬೇಕಾದ ಮಾಧ್ಯಮ ಸಂಸ್ಥೆಗಳು ಮತ್ತು ಪತ್ರಕರ್ತರಿಗೆ ಕಿರುಕುಳ ನೀಡಲಾಗುತ್ತಿದೆ, ಅವರನ್ನು ಬೆದರಿಸಲಾಗುತ್ತಿದೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ರಾಜದ್ರೋಹದ ಕಲಮನ್ನು ಅವರ ವಿರುದ್ಧ ಎಗ್ಗಿಲ್ಲದೆ ಬಳಸಲಾಗುತ್ತಿದೆ.

ಮೂಲಭೂತ ಹಕ್ಕುಗಳು ಮಾತ್ರವಲ್ಲದೆ ಸ್ವತಃ ಸಂವಿಧಾನದ ಮೇಲೆಯೇ ನೇರವಾಗಿ ದಾಳಿ ನಡೆಯುತ್ತಿದೆ. ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಿ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಿರುವುದರಿಂದ ಹಿಡಿದು ನಾಗರಿಕತ್ವಕ್ಕೆ ಧರ್ಮದ ಮಾನದಂಡವನ್ನು ಅಳವಡಿಸುವ ಪೌರತ್ವ ತಿದ್ದುಪಡಿ ಕಾನೂನಿನ (ಸಿಎಎ) ಅಂಗೀಕಾರದ ವರೆಗೆ, ಪ್ರತಿ ದಿನ ಕಾರ್ಯಾಂಗದ ಕ್ರಮಗಳ ಮೂಲಕ ಪ್ರಜೆಗಳ ಮೂಲಭೂತ ಹಕ್ಕುಗಳ ಮೇಲೆ ಅತಿಕ್ರಮಣವಾಗುತ್ತಿರುವ ಅನೇಕ ಪ್ರಕರಣಗಳು ನಮ್ಮ ಕಣ್ಣ ಮುಂದಿವೆ.

ಸಂಪನ್ಮೂಲ ಹಾಗೂ ಹಣಕಾಸು ಲಭ್ಯತೆಯ ವಿಚಾರದಲ್ಲಿ ಆಳುವ ಪಕ್ಷ ಏಕಸ್ವಾಮ್ಯ ಸಾಧಿಸಿರುವುದರಿಂದ ಚುನಾವಣಾ ವ್ಯವಸ್ಥೆಯಲ್ಲಿ ಸಮಾನ ಅವಕಾಶ ಇಲ್ಲದಿರುವುದರಿಂದ ಕೂಡ ಪ್ರಜಾಪ್ರಭುತ್ವಕ್ಕೆ ಅಪಾಯ ಎದುರಾಗಿದೆ. 2018ರಲ್ಲಿ ಪರಿಚಯಿಸಲಾದ ಚುನಾವಣಾ ಬಾಂಡ್ ವ್ಯವಸ್ಥೆಯು ಇಂಥ ಎಲ್ಲ ಸಂಪನ್ಮೂಲ ಆಳುವ ಪಕ್ಷದ ಪಾಲಾಗುವಂತೆ ಮಾಡುವ ದೊಡ್ಡ ಹುನ್ನಾರವಾಗಿದೆ. ಬೇಹುಗಾರಿಕೆಗೆ ಪೆಗಾಸಸ್ ಗೂಢಚರ್ಯೆ ತಂತ್ರಾಂಶ ಬಳಕೆ ಕೂಡ ಆಳುವ ಪಕ್ಷಕ್ಕೆ ಯಾವುದೇ ರೀತಿಯ ವಿರೋಧ ಅಥವಾ ಭಿನ್ನಮತ ಬೆಳೆಯುವುದನ್ನು ತಡೆಯುವ ಉದ್ದೇಶ ಹೊಂದಿದೆ.

ಸತ್ಯದ ಸ್ಥಾಪನೆ ಹಾಗೂ ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ಮಹತ್ವದ ಕಾಳಜಿಯ ಅಂಶವಾಗಿರುವ ಈ ಎಲ್ಲವುಗಳು ಈಗ ಸುಪ್ರೀಂ ಕೋರ್ಟ್ ಮೆಟ್ಟಿಲೇರಿವೆ. ಭೀಮಾ–ಕೋರೆಗಾಂವ್ ಆರೋಪಿಗಳ ಸ್ವೇಚ್ಛಾಚಾರಿ ಬಂಧನ, 370ನೇ ವಿಧಿ ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಿದ್ದು, ಚುನಾವಣಾ ಬಾಂಡ್‌ಗಳು, ರಾಜದ್ರೋಹದ ಕಲಮುಗಳ ಬಳಕೆ ಹಾಗೂ ಪೆಗಾಸಸ್ ಸ್ಪೈವೇರ್ ಬಳಕೆ ಪ್ರಕರಣಗಳು ಸರ್ವೋಚ್ಚ ನ್ಯಯಾಲಯದ ಮುಂದಿವೆ.

ಭೀಮಾ–ಕೋರೆಗಾಂವ್ ಪ್ರಕರಣದಲ್ಲಿ ಖ್ಯಾತ ಇತಿಹಾಸಕಾರರಾದ ಪ್ರೊ. ರೋಮಿಲಾ ಥಾಪರ್ ಹಾಗೂ ನಾಲ್ವರು ಪ್ರಮುಖ ನಾಗರಿಕರು 2018ರಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಮಹಾರಾಷ್ಟ್ರ ಪೊಲೀಸರು ಮನಬಂದಂತೆ ತನಿಖೆ ನಡೆಸುವುದನ್ನು ಹಾಗೂ ಬಂಧಿಸುವುದನ್ನು ನಿಲ್ಲಿಸಬೇಕು ಹಾಗೂ ಕೋರ್ಟ್ ಉಸ್ತುವಾರಿಯಲ್ಲಿ ಒಂದು ವಿಶೇಷ ತನಿಖಾ ತಂಡ (ಎಸ್‌ಐಟಿ)ವನ್ನು ರಚಿಸಬೇಕೆಂದು ಅದರಲ್ಲಿ ಕೋರಲಾಗಿತ್ತು. ಆಗಿನ ಭಾರತದ ಮುಖ್ಯ ನ್ಯಾಯಾಧೀಶರು (ಸಿಜೆಐ) ಒಳಗೊಂಡಿದ್ದ ತ್ರಿಸದಸ್ಯ ಪೀಠ ಆ ಅರ್ಜಿಯನ್ನು ತಳ್ಳಿ ಹಾಕಿತ್ತು (ಆ ನ್ಯಾಯಪೀಠದಲ್ಲಿದ್ದ ನ್ಯಾ. ಚಂದ್ರಚೂಡ್ ಭಿನ್ನಮತದ ತೀರ್ಪು ಕೊಟ್ಟಿದ್ದರು ಎನ್ನುವುದು ಗಮನಾರ್ಹ). ಅಂದಿನಿಂದಲೂ ಈ ಮೊಕದ್ದಮೆಯ 16 ಆರೋಪಿಗಳಿಗೆ ವಿವಿಧ ಹಂತದ ನ್ಯಾಯಾಲಯಗಳು ಜಾಮೀನು ನಿರಾಕರಿಸಿವೆ. ವರವರ ರಾವ್ ಅವರಿಗೆ ಮಾತ್ರ ಅನಾರೋಗ್ಯದ ನೆಲೆಯಲ್ಲಿ ಅಲ್ಪಾವಧಿಯ ಜಾಮೀನು ಸಿಕ್ಕಿತ್ತು. ಈಗಾಗಲೇ ಉಲ್ಲೇಖಿಸಿದ ಇತರ ಹಲವು ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿ ಎರಡು–ಮುರು ವರ್ಷಗಳಿಂದ ಬಾಕಿಯಿವೆ. ಈ ಪ್ರಮುಖ ವಿಷಯಗಳನ್ನು ವಿಚಾರಣೆ ನಡೆಸುವ ಯಾವುದೇ ತುರ್ತನ್ನು ನ್ಯಾಯಾಲಯ ತೋರುತ್ತಿಲ್ಲ. ಹಿಂದಿನ ಇಬ್ಬರು ಮುಖ್ಯ ನ್ಯಾಯಾಧೀಶರುಗಳ ಅಡಿಯಲ್ಲಿ ನ್ಯಾಯಾಂಗದ ಹೊಣೆಯಿಂದ ನುಣುಚಿ ಕೊಳ್ಳುವ ಪ್ರವೃತ್ತಿ ಎದ್ದು ಕಾಣುವಂತೆ ದಾಖಲಾಗಿದೆ.

ಸಂವಿಧಾನದ ಸಂರಕ್ಷಕರಾಗಿ

ಪ್ರಜಾಪ್ರಭುತ್ವ ಮತ್ತು ಮೂಲಭೂತ ಹಕ್ಕುಗಳ ರಕ್ಷಣೆಯ ಹೊಣೆ ಕೇವಲ ಉನ್ನತ ನ್ಯಾಯಾಂಗ ಸಂಸ್ಥೆಗೆ ಸೇರಿದ್ದು ಎಂದೇನೂ ಅಲ್ಲ. ಅಂತಿಮವಾಗಿ ಅದು ಜನರನ್ನು ರಾಜಕೀಯವಾಗಿ ಅಣಿಗೊಳಿಸುವುದರ ಮೇಲೆ ಅವಲಂಬಿಸಿದೆ. ಆದರೆ ಶಾಸಕಾಂಗವನ್ನೇ ಕಾರ್ಯಾಂಗಕ್ಕೆ ಶರಣಾಗುವಂತೆ ತಳ್ಳುತ್ತಿರುವ ಹಾಗೂ ಅರ್ಥಪೂರ್ಣ ಸಂವಾದವನ್ನು ಹೊಸಕಿ ಹಾಕುವಂಥ ಸನ್ನಿವೇಶದಲ್ಲಿ ಸಂವಿಧಾನದ ಸಂರಕ್ಷಕನಾಗಿ ಹಾಗೂ ಪ್ರಜೆಗಳ ಮೂಲಭೂತ ಹಕ್ಕುಗಳ ರಕ್ಷಕನಾಗಿ ಸರ್ವೋಚ್ಚ ನ್ಯಾಯಾಲಯದ ಪಾತ್ರ ಅತ್ಯಂತ ಮಹತ್ವದ್ದಾಗುತ್ತದೆ.

ಜನರ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಇತ್ತೀಚಿನ ದಿನಗಳಲ್ಲಿ ಹೆಚ್ಚು ಸಂವೇದನಾಶೀಲವಾಗಿರುವ ಕೆಲವು ಲಕ್ಷಣಗಳು ಕಂಡುಬಂದಿವೆ. ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ, ವಲಸೆ ಕಾರ್ಮಿಕರ ವಿಚಾರದಲ್ಲಿ, ಪತ್ರಕರ್ತರು ಮತ್ತು ಮಾಧ್ಯಮದ ವಿರುದ್ಧ ದೇಶದ್ರೋಹದ ಕೇಸ್ ವಜಾ ಮಾಡುವಲ್ಲಿ ಹಾಗೂ ದಮನಕಾರೀ ಕ್ರಮ ಕೈಗೊಳ್ಳುವುದನ್ನು ತಡೆಯುವಲ್ಲಿ ಇದನ್ನು ಕಾಣುತ್ತಿದ್ದೇವೆ. ಆದರೂ ನ್ಯಾಯಾಂಗದ ಸ್ವತಂತ್ರ ಪಾತ್ರ ಹಾಗೂ ಕಾರ್ಯಾಂಗಕ್ಕೆ ಅದರ ಮೌನಸಮ್ಮತಿಯ ಬಗ್ಗೆ ಇನ್ನೂ ಕಳವಳ ಉಳಿದಿದೆ.

ಹೈ ಕೋರ್ಟ್‌ಗಳು ಮತ್ತು ನ್ಯಾಯವಾದಿ ವರ್ಗದಿಂದ ಒಂಬತ್ತು ಹೆಸರುಗಳನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡುವುದಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಕೊಲೆಜಿಯಂ ಈಚೆಗೆ ಶಿಫಾರಸು ಮಾಡಿತ್ತು. ಈಗ ಈ ಒಂಬತ್ತು ವ್ಯಕ್ತಿಗಳನ್ನು ನ್ಯಾಯಾಧೀಶರುಗಳಾಗಿ ನೇಮಿಸಲಾಗಿದೆ. ಆದರೆ, ಕೊಲೆಜಿಯಂ ಶಿಫಾರಸು ಮಾಡಿದ್ದ ಒಂಬತ್ತು ಹೆಸರುಗಳಲ್ಲಿ ತ್ರಿಪುರಾ ಹೈ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅಖಿಲ್ ಖುರೇಷಿ ಅವರ ಹೆಸರನ್ನು ಕೈ ಬಿಟ್ಟಿದ್ದು ಎದ್ದು ಕಾಣುವ ಅಂಶವಾಗಿದೆ. ಹೈಕೋರ್ಟ್ ಜಡ್ಜ್‌ಗಳ ಪೈಕಿ ಖುರೇಷಿಯವರು ಸೇವಾಹಿರಿತನದಲ್ಲಿ ಎರಡನೇ ಸ್ಥಾನದಲ್ಲಿದ್ದರು. ಈ ಹಿಂದೆಯೂ ಖುರೇಷಿಯವರನ್ನು ಮಧ್ಯ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿ ಮಾಡಬೇಕೆಂಬ ಸರ್ವೋನ್ನತ ನ್ಯಾಯಾಲಯದ ಶಿಫಾರಸನ್ನು ಸರ್ಕಾರ ಒಪ್ಪಿರಲಿಲ್ಲ. ಅದರ ಬದಲು ಅತಿ ಸಣ್ಣ ಹೈಕೋರ್ಟ್‌ಗಳಲ್ಲಿ ಒಂದಾದ ತ್ರಿಪುರಾ ಹೈಕೋರ್ಟ್‌ಗೆ ಮುಖ್ಯ ನ್ಯಾಯಾಧೀಶರಾಗಿ ನೇಮಿಸಿತ್ತು. ಅವರನ್ನು ಸುಪ್ರೀಂ ಕೋರ್ಟ್‌ಗೆ ಪದೋನ್ನತಿಗೊಳಿಸಬೇಕೆಂಬ ವಿಚಾರದಲ್ಲಿ ಕೊಲೆಜಿಯಂ ಶರಣಾಗಿದೆ. ಅವರ ಹೆಸರನ್ನು ಶಿಫಾರಸು ಮಾಡದಿರುವುದೇ ಸೂಕ್ತ ಎಂದು ಅದು ಯೋಚಿಸಿದಂತಿದೆ.

ಅಧಿಕಾರಸ್ಥರ ಎದುರು ಸತ್ಯವನ್ನು ನುಡಿಯುವ ಪ್ರಜೆಗಳ ಹಕ್ಕು ಮತ್ತು ಕರ್ತವ್ಯವನ್ನು ಪ್ರತಿಪಾದಿಸುವ ನ್ಯಾಯಮೂರ್ತಿ ಚಂದ್ರಚೂಡ್ ಅವರ ಸಂರಚನೆಯಲ್ಲಿ ಪ್ರಬಲವಾದ ಸಾರ್ವಜನಿಕ ಸಂಸ್ಥೆಗಳು, ಅಧಿಕಾರದಲ್ಲಿರುವವರ ಪ್ರಜಾತಾಂತ್ರಿಕ ಜವಾಬುದಾರಿಕೆ, ಅಧಿಕಾರಸ್ಥರ ಒತ್ತಡಗಳಿಗೆ ಸಿಲುಕದ ಸ್ವತಂತ್ರ ನ್ಯಾಯಾಂಗ ಇದ್ದೇ ಇದೆ.

'ಸತ್ಯ'ವನ್ನು ಆಧರಿಸಿರುವ ಈ ಗಾಢವಾದ ಪ್ರಜಾಸತ್ತಾತ್ಮಕ ಕಣ್ಣೋಟವು ತದ್ವಿರುದ್ಧವಾದ ಪ್ರವೃತ್ತಿಗಳಿಗೆ ಎದುರಾಗಿ ನಿಲ್ಲುತ್ತದೆ ಮತ್ತು ಮುಂಬರುವ ದಿನಗಳಲ್ಲಿ ಇಡೀ ಉನ್ನತ ನ್ಯಾಯಾಂಗವನ್ನು ವ್ಯಾಪಿಸುತ್ತದೆ ಎಂದು ಆಶಿಸೋಣ.

ಅನು: ವಿಶ್ವ







ಸೆ: 25ರ ಭಾರತ್ ಬಂದ್ ಕರೆಗೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಬೆಂಬಲ

ದೇಶದ ಅನ್ನದಾತ ರೈತರಿಗೆ ಮಾರಕವಾಗಿರುವ ಕೃಷಿ ಕಾಯ್ದೆಗಳನ್ನು ಮತ್ತು ಕಾರ್ಪೋರೇಟ್ ಕಂಪೆನಿಗಳಿಂದ ನಿರ್ದೇಶಿತ ಶ್ರಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡಬೇಕು. ಇಲ್ಲದಿದ್ದರೆ ಪ್ರಧಾನಿ ನರೇಂದ್ರ ಮೋದಿ ಅಧಿಕಾರ ತ್ಯಜಿಸಬೇಕು ಎಂದು ಒತ್ತಾಯಿಸಿ ಸೆ. 25 ರಂದು ನಡೆಯಲಿರುವ ಭಾರತ್ ಬಂದ್ ಆಂದೋಲನಕ್ಕೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ವಿವಿಧ ಹಂತದ ಘಟಕಗಳು ಸಂಪೂರ್ಣ ಬೆಂಬಲ ನೀಡಲಿವೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕಾಂ. ಬಿ. ವೆಂಕಟ್ ಹೇಳಿದರು. ಅವರು ಅಗಸ್ಟ್ 28 ಮತ್ತು 29 ರಂದು ಎರಡು ದಿನಗಳ ಕಾಲ ಮಂಡ್ಯ ನಗರದ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯುತ್ತಿದ್ದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯ ಚರ್ಚೆಯನ್ನು ಅಂತಿಮಗೊಳಿಸಿ ಮಾತನಾಡುತ್ತಿದ್ದರು.

ಸಂಘದ ಅಧ್ಯಕ್ಷರಾದ ಎ. ವಿಜಯರಾಘವನ್‌ರವರ ಗೈರುಹಾಜರಿ ನಿಮಿತ್ತ ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷರೂ, ಕೇರಳದ ಸಿಪಿಐ(ಎಂ) ನೇತೃತ್ವದ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಅಬಕಾರಿ ಸಚಿವರಾದ ಎಂ.ವಿ. ಗೋವಿಂದನ್ ಮಾಸ್ತರ್ ವಹಿಸಿದ್ದರು. ಕೇರಳ, ಪಶ್ಚಿಮ ಬಂಗಾಳ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ತ್ರಿಪುರ, ಪಂಜಾಬ, ಕರ್ನಾಟಕ, ಬಿಹಾರ್, ಉತ್ತರಪ್ರದೇಶ, ಮಹಾರಾಷ್ಟ್ರ, ರಾಜಸ್ತಾನ್, ಹರ್ಯಾಣ, ಒಡಿಸ್ಸಾ, ಮತ್ತು ಮಧ್ಯಪ್ರದೇಶ ರಾಜ್ಯಗಳಿಂದ ಒಟ್ಟು 45 ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು ಎರಡು ದಿನಗಳ ಸಭೆಯಲ್ಲಿ ಭಾಗವಹಿಸಿದ್ದರು.

ಈ ಅವಧಿಯಲ್ಲಿ ಅಗಲಿದ ಸಂಗಾತಿಗಳಿಗೆ 2 ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಿದ ಬಳಿಕ ಪ್ರಧಾನ ಕಾರ್ಯದರ್ಶಿಗಳು ಎಲಾ ರಾಜ್ಯಗಳ ಕೆಲಸದ ವರದಿಯನ್ನು ಮುಂದಿನ ಕರ್ತವ್ಯಗಳ ಪ್ರಸ್ತಾವವನ್ನು ಮಂಡಿಸಿದರು. ಪ್ರಧಾನ ಕಾರ್ಯದರ್ಶಿಯವರು ಮಂಡಿಸಿದ ವರದಿಯ ಮೇಲೆ ಕಾರ್ಯಕಾರಿ ಸಮಿತಿ ಸದಸ್ಯರು ಚರ್ಚೆಮಾಡಿದರು.

ವಿಶ್ವದಲ್ಲಿ ಹಾಗೂ ನಮ್ಮ ದೇಶದಲ್ಲಿ ಕೊರೊನಾ ಸಂಕ್ರಾಮಿಕದ ಭೀಕರ ಹಾವಳಿ ಮುಂದುವರೆದಿದೆ. ವಿಶ್ವದ ಶ್ರೀಮಂತ ರಾಷ್ಟ್ರ ಎಂಬ ಖ್ಯಾತಿ ಪಡೆದ ಅಮೇರಿಕಾ ದೇಶದಲ್ಲಿ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿದ್ದರೂ ಅಲ್ಲಿ ಲಕ್ಷಾಂತರ ಜನ ಕೋವಿಡ್‌ಗೆ ಬಲಿಯಾಗಿ ಸಾವನ್ನಪ್ಪಿದರು. ಭಾರತ ದೇಶದಲ್ಲಿ ಕೋವಿಡ್ ನಿರ್ವಹಣೆಯಲ್ಲಿ ಮೋದಿ ಸರ್ಕಾರ ಸಂಪೂರ್ಣ ವಿಫಲವಾಯಿತು. ಸಾಂಕ್ರಾಮಿಕದ ಎರಡನೇ ಅಲೆ ಹರಡುವುದನ್ನು ತಡೆಯುವುದು ಭಾರತ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಈಗ ಮೂರನೇ ಅಲೆಯ ಭೀತಿ ಹಬ್ಬುತ್ತಿದ್ದು ಅದನ್ನು ತಡೆಯುವ ಯಾವುದೇ ಕಾರ್ಯಕ್ರಮ ಸರ್ಕಾರದ ಬಳಿ ಇಲ್ಲ. ಇದುವರೆಗೆ ಕೇವಲ 11.3 ರಷ್ಟು ಜಗಳಿಗೆ ಮೊದಲ ಲಸಿಕೆ ನೀಡಲಾಗಿದೆ. ಬಹುತೇಕ ರಾಜ್ಯಗಳಲ್ಲಿ ಲಸಿಕೆಗಳ ಕೊರತೆ ಇದೆ. ಕೇರಳ ರಾಜ್ಯದಲ್ಲಿ ಮಾತ್ರ ಒಳ್ಳೆಯ ಕೆಲಸ ನಡೆದಿದೆ. ಇಲ್ಲಿ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ ಎಂದು ಅಪಪ್ರಚಾರ ಮಾಡಲಾಗುತ್ತದೆ. ಇಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಲು ಇಲ್ಲಿ ವ್ಯಾಪಕವಾದ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಎಂಬ ವಾಸ್ತವಾಂಶವನ್ನು ಮರೆಮಾಚಲಾಗುತ್ತಿದೆ. ಕೇರಳದಲ್ಲಿ ಈಗಾಗಲೇ 23% ನಾಗರಿಕರಿಗೆ ಪೂರ್ಣ ಪ್ರಮಾಣದ ಲಸಿಕೆ ವಿತರಣೆ ಪೂರ್ಣಗೊಳಿಸಳಾಗಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರ್ಕಾರ ಕೋವಿಡ್ ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೀಡಾದ 54 ಲಕ್ಷ ಜನರಿಗೆ ಪ್ರತಿ ತಿಂಗಳು ರೂ.1600 ರಂತೆ ಅವರಿಗೆ ಪರಿಹಾರ ನೀಡುತ್ತಾ ಬಂತು. ಇದು ಬಿಜೆಪಿ, ಕಾಂಗ್ರೆಸ್ ಆಡಳಿತವಿರುವ ಯಾವ ರಾಜ್ಯದಲ್ಲೂ ಮಾಡದೇ ಇರುವ ಕೆಲಸ ಯಾರೂ ಹಸಿವೆಯಿಂದ ಸಾಯದಂತೆ ಕೇರಳ ಸರ್ಕಾರ ನೋಡಿಕೊಂಡಿದೆ.

ಭಾರತದಲ್ಲಿ ಹಿಂದೆಂದೂ ಕಾಣದ ಬಡತನ ಎದ್ದು ನಿಂತಿದೆ. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತ್ರಿ ಕಾಯ್ದೆ ಉದ್ಯೋಗ ಒದಗಿಸುವ ವಿಷಯದಲ್ಲಿ ಗಮನಾರ್ಹ ಪಾತ್ರವನ್ನು ನಿರ್ವಹಿಸಬಹುದು. ಆದರೆ ಶ್ರೀಮಂತರ ಪರವಾಗಿ ನಿಂತಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಉದ್ಯೋಗ ಖಾತ್ರಿ ಕಾಯ್ದೆಯನ್ನು ಬಲಪಡಿಸಿ ಜಾರಿಮಾಡುವಲ್ಲಿ ಆಸಕ್ತಿ ಹೊಂದಿಲ್ಲ. ಪ್ರತಿ ವರ್ಷ ನೀಡುವ ಅನುದಾನವನ್ನು ಹೆಚ್ಚಿಸುವ ಬದಲಾಗಿ ಕಡಿಮೆ ಮಾಡಲಾಗುತ್ತಿದೆ. ಕೇಂದ್ರದ ಬಿಜೆಪಿ ಸರ್ಕಾರ ಕೃಷಿ ಕೂಲಿಕಾರರನ್ನು ಒಡೆದು ಆಳುವ ನೀತಿಯನ್ನು ಅನುಸರಿಸಲು ಹೊರಟಿದೆ. ಅವರಲ್ಲಿ ಜಾತಿ ವಿಷ ಬೀಜ ಬಿತ್ತಿ ಅವರ ಒಗಟ್ಟಿನ ಶಕ್ತಿಯನ್ನು ಒಡೆಯುವ ಮೂಲಕ ಉದ್ಯೋಗ ಖಾತ್ರಿ ಯೋಜನೆಯನ್ನೇ ನಿರ್ಮೂಲನೆ ಮಾಡುವಂತೆ ರಾಜ್ಯಗಳಿಗೆ ಸಲಹೆ ನೀಡಿದೆ.

ಕೇಂದ್ರ ಸರ್ಕಾರದ ಇಂತಹ ಧೋರಣೆಗಳಿಂದಾಗಿ ಅತಿ ಹೆಚ್ಚು ಸಂಕಷ್ಟಕ್ಕೆ ಗುರಿಯಾದವರು ಕೃಷಿ ಕೂಲಿಕಾರರು. ಅವರಿಗೆ ಕನಿಷ್ಟ ವೇತನ ದೊರಕುವುದಿಲ್ಲ. ವರ್ಷದಲ್ಲಿ 30 ರಿಂದ 40 ದಿನಗಳು ಮಾತ್ರ ಅವರಿಗೆ ಕೃಷಿಯಲ್ಲಿ ಕೆಲಸ ಸಿಗುತ್ತದೆ. ಉದ್ಯೋಗ ಖಾತ್ರಿಯಲ್ಲಿ ಕೆಲವರು ಮಾತ್ರ ವರ್ಷದಲ್ಲಿ 100 ದಿಗಳ ಕೆಲಸ ಪಡೆಯುತ್ತಾರೆ. ಅವರ ಮನೆಗಳಲ್ಲಿರುವ ಮತ್ತು ಹೊರಗಿರುವ ಅದಷ್ಟೋ ಮಂದಿಗೆ ಈ ಕೆಲಸ ಸಿಗುವುದಿಲ್ಲ. ಕೋವಿಡ್ ಕಾರಣದಿಂದ ನಗರಗಳಿಗೆ ವಲಸೆ ಹೋಗಿದ್ದ ಗ್ರಾಮೀಣ ಕೆಲಸಗಾರರಿಗೆ ನಗರಗಳಲ್ಲಿಯೂ ಕೆಲಸ ಸಿಗದೆ ವಾಪಾಸ್ ಹಳ್ಳಿಗಳಿಗೆ ಹಿಂತಿರುಗುತ್ತಾರೆ. ಉದ್ಯೋಗ ಖಾತ್ರಿಯಲ್ಲಿ ಕನಿಷ್ಟ 200 ದಿನಗಳ ಕೆಲಸ ಸಿಗುವಂತಾದರೆ ಅವರು ಕನಿಷ್ಟ ಮಟ್ಟದ ಜೀವನವನ್ನಾದರೂ ಜೀವಿಸಬಹುದು.

ಕೃಷಿ ಕ್ಷೇತ್ರದಲ್ಲಿ ಕೂಲಿಕಾರರಿಗೆ ಸಿಗುವ ಕೆಲಸದ ದಿನಗಳು ಕುಸಿಯುತ್ತಿರುವುದರಿಂದ ಅವರ ಭೂಮಿಯ ಹಸಿವು ಹೆಚ್ಚುತ್ತಿದೆ. ಅವರು ಸರ್ಕಾರಿ ಕಂದಾಯ ಅಥವ ಮರಗಳೇ ಇಲ್ಲದ ಅರಣ್ಯಭೂಮಿಯಲ್ಲಿ ಬೇಸಾಯ ಮಾಡಿ ಜೀವನ ಸಾಗಿಸಲು ಯತ್ನಿಸುತ್ತಾರೆ. ಆದರೆ ಅವರು ಒಕ್ಕಲೆಬ್ಬಿಸಲ್ಪಡುವ ಭೀತಿಗೆ ಒಳಗಾಗಿರುತ್ತಾರೆ. ಅವರನ್ನು ಸಂಘಟಿಸಿ ಭೂಮಿಯ ಪ್ರಶ್ನೆಗಾಗಿ ಅವರನ್ನು ಹೋರಾಟಕ್ಕೆ ಇಳಿಸುವುದಕ್ಕೆ ಸಂಘ ಹೆಚ್ಚಿನ ಆಸಕ್ತಿ ತೋರಬೇಕು. ಕೂಲಿ ಕಾರ್ಮಿಕರ ಆದಾಯ ಅತಿ ಕನಿಷ್ಠ ಇರುವುದರಿಂದ ಸರ್ಕಾರದಿಂದ ಉಚಿತವಾಗಿ ಅಗತ್ಯ ಆಹಾರದಾನ್ಯಗಳನ್ನು ಪಡೆಯಲು ಪ್ರಯತ್ನ ತೀವ್ರಗೊಳಿಸಬೇಕು ಮಾತ್ರವಲ್ಲ ಸಮರ್ಪಕ ಪಡಿತರ ಪದ್ಧತಿಗಾಗಿ ಹೋರಾಡಬೇಕು. ಅದೇ ಸಮಯದಲ್ಲಿ ವಲಸೆ ಕಾರ್ಮಿಕರ ಹಕ್ಕುಗಳಿಗಾಗಿ ಬಲವಾದ ಹೋರಾಟ ನಡೆಯಬೇಕು.

ಇವೆಲ್ಲದರ ನಡುವೆ, ದೆಹಲಿ ಗಡಿಯಲ್ಲಿ ಕಳೆದ 9 ತಿಂಗಳುಗಳಿಂದ ರೈತರು ನಡೆಸುತ್ತಿರುವ ದಿಟ್ಟ ಹೋರಾಟಕ್ಕೆ ಕೃಷಿ ಕಾರ್ಮಿಕರು ಸಂಪೂರ್ಣ ಬೆಂಬಲ ನೀಡಬೇಕು. ಈ ಚಾರಿತ್ರಿಕ ಹೋರಾಟ ಗುರಿ ಮುಟ್ಟದೆ ಅಂತ್ಯಗೊಳ್ಳಲಾರದು. ಇದರೊಂದಿಗೆ ಕೈಗಾರಿಕಾ ಕಾರ್ಮಿಕರ ಬೇಡಿಕೆಗಳಿಗಾಗಿ, ಖಾಸಗೀಕರಣದ ವಿರುದ್ಧ, ವಿದ್ಯುತ್ ರಂಗವನ್ನು ಸಾರ್ವಜನಿಕ ರಂಗದಲ್ಲಿ ಉಳಿಸಲು ನಡೆಸುವ ಜಂಟಿ ಹೋರಾಟಗಳಲ್ಲಿ ಕೃಷಿ ಕೂಲಿಕಾರರು ದೊಡ್ಡ ಮಟ್ಟದಲ್ಲಿ ಭಾಗವಹಿಸಬೇಕು. ವಿದ್ಯುತ್ ರಂಗದ ಖಾಸಗೀಕರಣವನ್ನು ಪ್ರಬಲವಾಗಿ ವಿರೋಧಿಸಬೇಕು. ವಲಸೆ ಕಾರ್ಮಿಕರ ಬೇಡಿಕೆಗಳಿಗಾಗಿ, ದಲಿತರ, ಮಹಿಳೆಯರ, ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ನಿರಂತರ ಹೋರಾಟಗಳನ್ನು ನಡೆಸಬೇಕು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕರ್ನಾಟಕ ರಾಜ್ಯ ಘಟಕವಾಗಿದೆ. ಮಂಡ್ಯ ಒಂದು ಪ್ರಮುಖ ಜಿಲ್ಲೆ. ಉಳಿದ ಜಿಲ್ಲೆಗಳಲ್ಲಿಯೂ ಪ್ರತಿ ವರ್ಷ ಸದಸ್ಯತ್ವವನ್ನು ಹೆಚ್ಚಿಸುತ್ತಾ, ಸ್ಥಳೀಯ ಪ್ರಶ್ನೆಗಳಿಗಾಗಿ ಹೋರಾಟಗಳನ್ನು ತೀವ್ರಗೊಳಿಸುತ್ತಾ ಚಳುವಳಿಯನ್ನು ಬಲಪಡಿಸಬೇಕು ಎಂದು ಬಿ. ವೆಂಕಟ್ ಅವರು ಹೇಳಿದರು.

ಹೋರಾಟಕ್ಕೆ ಬೆಂಬಲ ದೆಹಲಿ ರೈತ ಹೋರಾಟಗಾರರಿಗೆ ಕೆಂಪು ಬಾವುಟದ ಸ್ವಾಗತ

ಹನ್ನನ್ ಮೊಲ್ಲಾರಿಗೆ ಅದ್ದೂರಿ ಸ್ವಾಗತ

ಅಖಿಲ ಭಾರತ ಕೃಷಿ ಕೂಲಿಕಾರರ ಕೇಂದ್ರ ಸಮಿತಿ ಸಭೆಯಲ್ಲಿ ಭಾಗವಹಿಸಲು ಆಗಮಿಸಿದ್ದ ದೆಹಲಿ ರೈತ ಹೋರಾಟಗಾರ ಹನ್ನನ್ ಮೊಲ್ಲಾ ಅವರಿಗೆ ಜಿಲ್ಲೆಯ ಗಡಿಭಾಗ ನಿಡಘಟ್ಟದಲ್ಲಿ ಅದ್ದೂರಿ ಸ್ವಾಗತ ನಿಡಲಾಯಿತು. ಬೆಂಗಳೂರಿನಿಂದ ತಡರಾತ್ರಿ ಗಡಿಭಾಗ ನಿಡಘಟ್ಟಕ್ಕೆ ಆಗಮಿಸಿದ ಹನ್ನನ್ ಮೊಲ್ಲಾ ಅವರಿಗೆ ರೈತಪರ ಸಂಘಟನೆಗಳ ಹೋರಾಟಗಾರರು ಪುಷ್ಪಾರ್ಚನೆ ಮಾಡಿ ಹೋರಾಟದ ಸಂಕೇತವಾದ ಕೆಂಪು ಭಾವುಟದ ಸ್ವಾಗತ ಕೋರಿದರು. ಜಗತ್ತಿನ ಅತಿದೊಡ್ಡ ದೆಹಲಿ ರೈತ ಹೋರಾಟಕ್ಕೆ ಮಂಡ್ಯ ರೈತರ ಬೆಂಬಲ ಇದೆ ಎಂದು ರೈತ ಸಂಘಟನೆಗಳ ನಾಯಕರು ವಾಗ್ದಾನ ಮಾಡಿದರು.

ನಂತರ ರೈತ ಸಂಘಟನೆಗಳ ಕಾರ್ಯಕರ್ತರ ಉದ್ದೇಶಿಸಿ ಮಾತನಾಡಿದ ಹನ್ನನ್ ಮೊಲ್ಲಾ ಪ್ರಧಾನಿ ನರೇಂದ್ರ ಮೋದಿ ರೈತ ವಿರೋಧಿ ರೀತಿ ಅನುಸರಿಸುತ್ತಿದ್ದಾರೆ. ಕೃಷಿ ಕಾನೂನು ರದ್ದು, ವಿದ್ಯುತ್ ಮಸೂದೆ 2021 ವಾಪಾಸಾತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ದೆಹಲಿಯಲ್ಲಿ ಕೃಷಿಕರು ಕಳೆದ 9 ತಿಂಗಳಿಂದಲ್ಲೂ ಹೋರಾಟ ನಡೆಸುತ್ತಿದ್ದರೂ ಸಹಾ ಪ್ರಧಾನಿ ನರೇಂದ್ರ ಮೋದಿ ಹೋರಾಟವನ್ನು ಕೀಳು ಮಟ್ಟದ ಹೋರಾಟವೆಂದು ಪರಿಗಣಿಸಿದ್ದಾರೆ, ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯನ್ನು ಮುಂದಿನ ದಿನಗಳಲ್ಲಿ ರಾಜಕೀಯವಾಗಿ ಎದುರಿಸಬೇಕಾದ ಸನ್ನಿವೇಶವನ್ನು ರೈತರು ಸಂಘಟನೆ ಮೂಲಕ ಸೃಷ್ಟಿಸುವುದರೊಂದಿಗೆ ರಾಷ್ಟ್ರಾದ್ಯಂತ ಹೋರಾಟ ನಡೆಸಬೇಕು ಎಂದು ಮನವಿ ಮಾಡಿದರು. ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಜಿ.ಎನ್. ನಾಗರಾಜು, ಕಾರ್ಯದರ್ಶಿ ಚಂದ್ರಪ ಹೊಸ್ಕೆರಾ, ಜನವಾದಿ ಸಂಘಟನೆಯ ಅಧ್ಯಕ್ಷೆ ದೇವಿ, ಮಂಜುಳಾ, ಸಿಐಟಿಯು ಮುಖಂಡರಾದ ಸಿ. ಕುಮಾರಿ, ಸಿ. ಪ್ರದೀಪ್, ತಿಮ್ಮೇಗೌಡ, ಪ್ರಾಂತ ರೈತ ಸಂಘದ ಕೆ.ಎಂ. ಕೃಷ್ಣೇಗೌಡ, ಭರಾಜ್, ಟಿ. ಯಶವಂತ್, ಆನಂದ್, ರಾಮಣ್ಣ ಭಾನುಪ್ರಕಾಶ್, ಗ್ರಾಪಮ ಅಧ್ಯಕ್ಷ ಮಹೇಶ್ ಮತ್ತಿತ್ತರು ಇದ್ದರು.





ಸ್ವಾತಂತ್ರ್ಯ ಸಂಗ್ರಾಮ: ಕಮ್ಯುನಿಸ್ಟರ ಮತ್ತು ಆರ್.ಎಸ್.ಎಸ್.ನ ಪಾತ್ರ

ಆರ್. ಅರುಣ್ ಕುಮಾರ್
ಅನುವಾದ: ಟಿ ಸುರೇಂದ್ರ ರಾವ್

ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಮ್ಮ ದೇಶದ ಚರಿತ್ರೆಯಲ್ಲಿ ಒಂದು ಭವ್ಯವಾದ ವೀರಗಾಥೆ. ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯ ಚಳುವಳಿಯ ಮೇಲೆ ಪೂರ್ಣ ಏಕಸ್ವಾಮ್ಯದ ಹಕ್ಕು ಸಾಧಿಸುವುದು ಸಾಧ್ಯವಿಲ್ಲ. ಕಮ್ಯುನಿಸ್ಟರು ಮತ್ತು ವಿವಿಧ ಸಮಾಜವಾದಿ ಬಣಗಳು ಕಾಂಗ್ರೆಸ್ ಮತ್ತದರ ತಂತ್ರಗಳೊಂದಿಗೆ ಅಸಂತುಷ್ಟರಾಗಿ ಬದ್ಧತೆಯಿಂದ ಹೋರಾಡಿದರು ಮತ್ತು ಈ ಚಳುವಳಿಗಾಗಿ ತಮ್ಮ ಇಡೀ ಬದುಕನ್ನೇ ಮುಡುಪಾಗಿಟ್ಟಿದ್ದರು. ದೇಶಾದ್ಯಂತ ವ್ಯಾಪಿಸಿದ್ದ ದೇಶಭಕ್ತಿಯ ಆ ಅಲೆಗೆ ಒಂದು ಅಪವಾದವಿತ್ತು – ಅದು ಆರ್.ಎಸ್.ಎಸ್. ಸ್ವಾತಂತ್ರ್ಯ ಚಳುವಳಿಯಲ್ಲಿ ಅದು ಭಾಗವಹಿಸಲೇ ಇಲ್ಲ.

ಆರ್.ಎಸ್.ಎಸ್.ನ ಎರಡನೇ ಸರಸಂಘಚಾಲಕರಾಗಿದ್ದ ಎಂ.ಎಸ್. ಗೋಲ್ವಾಲ್ಕರ್ ತಮ್ಮ ಪುಸ್ತಕ 'ಚಿಂತನ ಗಂಗಾ' (ದಿ ಬಂಚ್ ಆಫ್ ಥಾಟ್ಸ್)ದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು 'ಪ್ರಾದೇಶಿಕ ರಾಷ್ಟ್ರೀಯವಾದ' ಎಂದು ಬಹಿರಂಗವಾಗಿ ಖಂಡಿಸಿದ್ದರು; "ಅದು ನಮ್ಮ ನೈಜ ಹಿಂದೂ ರಾಷ್ಟ್ರೀಯತೆಯ ಸಕಾರಾತ್ಮಕ ಹಾಗೂ ಸ್ಫೂರ್ತಿದಾಯಕ ಹುರುಳನ್ನು ಕಸಿದುಕೊಂಡಿತ್ತು ಮತ್ತು ಹಲವಾರು 'ಸ್ವಾತಂತ್ರ್ಯ ಚಳುವಳಿಗಳನ್ನು' ಕಾರ್ಯತಃ ಬರಿಯ ಬ್ರಿಟಿಷ್–ವಿರೋಧಿ ಚಳುವಳಿಯನ್ನಾಗಿ ಮಾಡಿತ್ತು". ಈ ತಿಳುವಳಿಕೆಯೊಂದಿಗೆ 1925ರಲ್ಲಿ ಪ್ರಾರಂಭವಾಗಿದ್ದ ಆರ್.ಎಸ್.ಎಸ್., ಭಾರತದ ಸ್ವಾತಂತ್ರ್ಯ ಚಳುವಳಿಯಿಂದ ದೂರಸರಿದಿತ್ತು. ದೂರ ಸರಿದಿದ್ದು ಮಾತ್ರವಲ್ಲ, ಸ್ವಾತಂತ್ರ್ಯ ಹೋರಾಟಗಾರರಿಗೆ ನಂಬಿಕೆ ದ್ರೋಹವೆಸಗಲು ಸಿದ್ಧವಾಗಿದ್ದರು ಕೂಡ.

ಆರ್.ಎಸ್.ಎಸ್. ನ ಸಂಸ್ಥಾಪಕ ಕೆ.ಬಿ.ಹೆಡ್ಗೆವಾರ್ ಅವರ ಆತ್ಮಕತೆಯಲ್ಲಿ ಸ್ಪಷ್ಟವಾಗಿ ಹೀಗೆ ಹೇಳಲಾಗಿತ್ತು: "ಗಾಂಧಿಯವರು 1930ರಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸಿದಾಗ, ಈ ಸತ್ಯಾಗ್ರಹದಲ್ಲಿ ಸಂಘವು

ಆರ್.ಎಸ್.ಎಸ್. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲೇ ಇಲ್ಲ. ವಿ.ಡಿ.ಸಾವರ್ಕರ್ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದೆವು ಎಂಬ ಅವರ ಸಮರ್ಥನೆ ಕೂಡ ಟೊಳ್ಳೆಂದು ಸಾಬೀತಾಗಿದೆ. ತನ್ನ ಹಿಂದಿನ ವರ್ಷಗಳಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿನ ತನ್ನ ಪಾತ್ರದ ಬಗ್ಗೆ ಸಾವರ್ಕರ್ ಪಶ್ಚಾತ್ತಾಪಪಟ್ಟುಕೊಂಡಿದ್ದು ಮಾತ್ರವಲ್ಲ, ಮುಂದೆಂದೂ ತಾನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದಿಲ್ಲ ಎಂದು ವಾಗ್ದಾನ ಮಾಡಿದ್ದರು ಕೂಡ. ಮತ್ತು ತಮ್ಮ ವಾಗ್ದಾನವನ್ನು ಅವರು ಉಳಿಸಿಕೊಂಡರು. ಆರ್.ಎಸ್.ಎಸ್. ನ ಮತ್ತು ಅದರ ಪೂಜನೀಯ 'ಮಹಾನ್ ವೀರ' ಸಾವರ್ಕರ್ ಅವರ ಧೋರಣೆ ಇದಾಗಿತ್ತು.

ಪಾಲ್ಗೊಳ್ಳುವುದಿಲ್ಲ ಎಂದು ಎಲ್ಲ ಕಡೆಯೂ ಸುದ್ದಿ ಕಳುಹಿಸಲಾಗಿತ್ತು." ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಬಯಸಿದ್ದ ಒಬ್ಬ ವೈದ್ಯರನ್ನು ಭಾಗವಹಿಸದಿರುವಂತೆ ಹೆಡ್ಗೆವಾರ್ ಅವರು ವೈದ್ಯರನ್ನು ತಡೆದ ಸಂಭಾಷಣೆಯನ್ನು ಗೋಲ್ವಾಲ್ಕರ್ ಉಲ್ಲೇಖಿಸಿದ್ದರು.

'ಭಾರತ ಬಿಟ್ಟು ತೊಲಗಿ' ಚಳುವಳಿಯ ಸಮಯದಲ್ಲಿಯೂ ಅದೇ ಕತೆ. ಬ್ರಿಟಿಷ್ ಸರ್ಕಾರದ ಅಧಿಕೃತ ಟಿಪ್ಪಣಿಯ ಪ್ರಕಾರ, ಆರ್. ಎಸ್.ಎಸ್. ಮುಖಂಡರು ಗೃಹ ಇಲಾಖೆಯ ಕಾರ್ಯದರ್ಶಿಯನ್ನು ಭೇಟಿ ಮಾಡಿದ್ದರು ಮತ್ತು "ಹೆಚ್ಚಿನ ಸಂಖ್ಯೆಯಲ್ಲಿ ನಾಗರಿಕ ಕಾವಲು ದಳಕ್ಕೆ ಸೇರುವಂತೆ ಸಂಘದ ಸದಸ್ಯರನ್ನು ಪ್ರೋತ್ಸಾಹಿಸುವುದಾಗಿ ಕಾರ್ಯದರ್ಶಿಗೆ ವಾಗ್ದಾನ ಮಾಡಿದ್ದರು." 'ಆಂತರಿಕ ಭದ್ರತೆಗಾಗಿ ವಿಶೇಷ ಕ್ರಮದ' ಭಾಗವಾಗಿ ಈ ನಾಗರಿಕ ಕಾವಲು ದಳಗಳನ್ನು ಬ್ರಿಟಿಷ್ ಸರ್ಕಾರ ರಚಿಸಿತ್ತು. ಬ್ರಿಟಿಷರು ಈ ಸಹಾಯಕ್ಕೆ ಕೃತಜ್ಞತೆ ಸಲ್ಲಿಸಿದ್ದರು: "ಸಂಘದವರು ಜಾಗರೂಕತೆಯಿಂದ ಕಾನೂನನ್ನು ಚಾಚೂ ತಪ್ಪದೆ ಪಾಲಿಸುತ್ತ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದರು, ಮತ್ತು ವಿಶೇಷವಾಗಿ, ಆಗಸ್ಟ್ 1942 ರಲ್ಲಿ ಭುಗಿಲೆದ್ದ ಗಲಭೆಗಳಲ್ಲಿ ಭಾಗವಹಿಸದೆ ಸಂಯಮದಿಂದ ನಡೆದುಕೊಂಡಿದ್ದರು" (ಸರ್ಕಾರದ ಮೆಮೋ, ಬಾಂಬೇ ಪ್ರಾಂತ).



ವಿ.ಡಿ.ಸಾವರ್ಕರ್ ಮೂಲಕ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದೆವು ಎಂಬ ಅವರ ಸಮರ್ಥನೆ ಕೂಡ ಟೊಳ್ಳೆಂದು ಸಾಬೀತಾಗಿದೆ. ತನ್ನ ಹಿಂದಿನ ವರ್ಷಗಳಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿನ ತನ್ನ ಪಾತ್ರದ ಬಗ್ಗೆ ಸಾವರ್ಕರ್ ಪಶ್ಚಾತ್ತಾಪಪಟ್ಟುಕೊಂಡಿದ್ದು ಮಾತ್ರವಲ್ಲ, ಮುಂದೆಂದೂ ತಾನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದಿಲ್ಲ ಎಂದು ವಾಗ್ದಾನ ಮಾಡಿದ್ದರು ಕೂಡ. ಮತ್ತು ತಮ್ಮ ವಾಗ್ದಾನವನ್ನು ಅವರು ಉಳಿಸಿಕೊಂಡರು. 'ತಾನು ಕರುಣಾಮಯಿ ಬ್ರಿಟಿಷ್ ಸರ್ಕಾರದ ಅಪ್ರಯೋಜಕ ಮಗ' ಎಂದು ಹೇಳಿಕೊಳ್ಳುವ ಸಾವರ್ಕರ್ ಬ್ರಿಟಿಷ್ ಸರ್ಕಾರಕ್ಕೆ ಒಂದು ಸುದೀರ್ಘ ಪತ್ರವನ್ನೂ ಬರೆದಿದ್ದರು. "ಕೊನೆಯಲ್ಲಿ ತಮ್ಮಲ್ಲಿ ನೆನಪಿಸುವುದೇನೆಂದರೆ 1911ರಲ್ಲಿ ನಾನು ಕ್ಷಮಾದಾನ ಮಂಜೂರು ಮಾಡಬೇಕೆಂದು ಭಾರತ ಸರ್ಕಾರಕ್ಕೆ ಕಳಿಸಿದ್ದ ಕ್ಷಮಾದಾನದ ಅರ್ಜಿಯನ್ನೊಮ್ಮೆ ಗೌರವಾನ್ವಿತರಾದ ತಾವು ಓದಬೇಕೆಂದು ಕೋರುತ್ತೇನೆ, ... ಬಹುರೂಪದ ಉಪಕಾರ ಹಾಗೂ ಕರುಣೆಯುಳ್ಳ ಸರ್ಕಾರವು ನನ್ನನ್ನು ಬಿಡುಗಡೆ ಮಾಡಿದರೆ, ನಾನು ಇಂಗ್ಲಿಷ್ ಸರ್ಕಾರಕ್ಕೆ ನಿಷ್ಠಾವಂತ ಸಂವಿಧಾನಬದ್ಧ ಸಮರ್ಥಕನಾಗಿ ನಿಷ್ಠೆಯಿಂದ ಇಲ್ಲದಿರಲು ಸಾಧ್ಯವಿಲ್ಲ ... .. ಅಷ್ಟೂ ಸಾಲದೆಂಬಂತೆ, ನನ್ನ ಸಂವಿಧಾನಬದ್ಧತೆಯ ನಿಲುವು ಭಾರತದಲ್ಲಿ ಮತ್ತು ವಿದೇಶದಲ್ಲಿರುವ ನನ್ನ ಮಾರ್ಗದರ್ಶನಕ್ಕಾಗಿ ಕಾಯುತ್ತಿರುವ ದಾರಿ ತಪ್ಪಿದ ಯುವಜನರೆಲ್ಲರನ್ನೂ ಹಿಂದಕ್ಕೆ ಕರೆ ತರುತ್ತದೆ". ಆರ್.ಎಸ್.ಎಸ್. ನ ಮತ್ತು ಅದರ ಪೂಜನೀಯ 'ಮಹಾನ್ ವೀರ' ಸಾವರ್ಕರ್ ಅವರ ಧೋರಣೆ ಇದಾಗಿತ್ತು.



Gandhi murder trial at Red Fort. *Left to right, front to back:* Nathuram Godse, Apte, Karkare, Badge *(approver)*, Madanlal, Gopal Godse, Shankar Kistayya, Savarkar and Dr Parachure *(hidden)*. 22 June 1948.

ಇವರ ಜತೆ ಕಮ್ಯುನಿಸ್ಟರ ಪಾತ್ರವನ್ನು ಹೋಲಿಸಿ ನೋಡಬೇಕು ಮತ್ತು ಆಗ ನಾವು ಸುಲಭವಾಗಿ ಕಾಳು ಯಾವುದು ಜೊಳ್ಳು ಯಾವುದು ಎಂದು ಪ್ರತ್ಯೇಕಿಸಬಹುದು. ಕಮ್ಯುನಿಸ್ಟ್ ಪಕ್ಷವನ್ನು 1920 ರಲ್ಲಿ ಸ್ಥಾಪಿಸಲಾಯಿತು. ಮೊದಲ ದಿನದಿಂದಲೇ, ಕಮ್ಯುನಿಸ್ಟರ ಕುರಿತಾಗಿ ತಾವು ಯಾವ ಧೋರಣೆ ತಳೆಯಬೇಕೆಂದು ಬ್ರಿಟಿಷರು ಸ್ಪಷ್ಟತೆ ಹೊಂದಿದ್ದರು. "ಭಾರತದಲ್ಲಿ ಕಮ್ಯುನಿಸಂನ ಹರಡುವಿಕೆಯನ್ನು ಯಾವುದೋ ಒಂದು ನಿರ್ದಿಷ್ಟ 'ದೃಷ್ಟಿಕೋನದಿಂದ' ನೋಡಬಹುದಾದ ಸಾಮಾನ್ಯ ಸಮಸ್ಯೆಗಳಂತೆ ನೋಡಲಾಗದು; ಅದನ್ನು ನೇರಾ ನೇರಾ ಎದುರಿಸಬೇಕು ಮತ್ತು ಯಾವುದೇ ಅತ್ಯಂತ ದಯಾ ದಾಕ್ಷಿಣ್ಯವಿಲ್ಲದ ವಿರೋಧಿ ನೀತಿಯೊಂದಿಗೆ ಅವರ ವಿರುದ್ಧ ಹೋರಾಡಬೇಕು". ಕಮ್ಯುನಿಸ್ಟ್ ಪಕ್ಷವು ಸ್ಥಾಪನೆಯಾದ ಒಂದು ದಶಕದೊಳಗೆ ಅದರ ವಿರುದ್ಧ ಮೂರು 'ಪಿತೂರಿ ಮೊಕದ್ದಮೆ'ಗಳನ್ನು ಬ್ರಿಟಿಷರು ಹೂಡಿದರು – ಪೆಷಾವರ್ ಪಿತೂರಿ ಮೊಕದ್ದಮೆ (1922), ಕಾನ್ಪುರ್ ಪಿತೂರಿ ಮೊಕದ್ದಮೆ (1924) ಮತ್ತು ಮೀರತ್ ಪಿತೂರಿ ಮೊಕದ್ದಮೆ (1929). ನಿಸ್ಸಂದೇಹವಾಗಿ, ಇವಾವುದೂ ಕೂಡ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಚಿಂತನೆಗಳ ಹರಡುವಿಕೆಯನ್ನು ತಡೆಯಲಾಗಲಿಲ್ಲ.

ಖಚಿತವಾಗಿ ಸಮಾಜವಾದ ಮತ್ತು ಸಮತಾವಾದದ ಚಿಂತನೆಗಳಿಂದ ಸ್ಫೂರ್ತಿ ಪಡೆದ ಭಗತ್ ಸಿಂಗ್ ಬ್ರಿಟಿಷರನ್ನು ಅಧಿಕಾರದಿಂದ ಕಿತ್ತೊಗೆದರಷ್ಟೇ ಸಾಲದು ಎಂಬ ಅಭಿಪ್ರಾಯಕ್ಕೆ ಬಂದಿದ್ದರು. "ರಾಜಕೀಯ ಕ್ರಾಂತಿಯ ಆಧಾರದಲ್ಲಿ ಇಡೀ ಸಮಾಜವನ್ನು ಸಮಾಜವಾದದ ನೆಲೆಯಲ್ಲಿ ಪರಿವರ್ತಿಸುವ ಕೆಲಸ ಆರಂಭವಾಗಬೇಕು" ಎಂದು ಭಗತ್ ಸಿಂಗ್ ಹೇಳಿದ್ದರು.

ಭಗತ್‌ಸಿಂಗ್ ಕೋಮುವಾದಿ ಶಕ್ತಿಗಳನ್ನು ಖಂಡಿಸಿದ್ದರು ಮತ್ತು ಜನರು ವರ್ಗ ಐಕ್ಯತೆಯನ್ನು ಕಟ್ಟಬೇಕು ಎಂದು ಒತ್ತಾಯಪಡಿಸಿದ್ದರು. "ಜನರು ತಮ್ಮತಮ್ಮೊಳಗೆ ಕಾದಾಡದಂತೆ ಅವರಲ್ಲಿ ವರ್ಗ ಪ್ರಜ್ಞೆಯನ್ನು ಖಾತ್ರಿಪಡಿಸಬೇಕಾದ ಅಗತ್ಯವಿದೆ. ಬಡವರು, ಕಾರ್ಮಿಕ ವರ್ಗ ಹಾಗೂ ರೈತಾಪಿ ಜನರಿಗೆ ಅವರ ನೈಜ ಶತ್ರು ಬಂಡವಾಳವಾದ ಎಂಬುದನ್ನು ಸ್ಪಷ್ಟಪಡಿಸಬೇಕು. . . ಎಲ್ಲಾ ಬಡವರ – ಅವರು ಯಾವ ಜಾತಿಯವರೇ ಇರಲಿ, ಬಣ್ಣದವರಿರಲಿ, ಧರ್ಮದವರಿರಲಿ ಅಥವಾ ಪ್ರದೇಶದವರಿರಲಿ –

ಪುಟ 15 ಕ್ಕೆ



ಸೆಪ್ಟೆಂಬರ್ 1 ರಂದು ಕರ್ನಾಟಕ ನೂತನ ಶಿಕ್ಷಣ ನೀತಿ 2020 ಜಾರಿ ಮಾಡಿದ ಮೊದಲ ರಾಜ್ಯವಾಗಿದೆ. ರಾಜ್ಯದ ಉನ್ನತ ಶಿಕ್ಷಣ ಸಚಿವರೇ ರಾಜ್ಯಾದ್ಯಂತ ಇರುವ ವಿಶ್ವ ವಿದ್ಯಾಲಯಗಳಲ್ಲಿ ಈ ನೀತಿಯ ಪ್ರಚಾರ ಕಾರ್ಯ ನಡೆಸಿ ಅಲ್ಲಿ ತಮಗೆ ಬೇಕಾದವರಿಂದ ಈ ನೀತಿಯ ಪರವಾಗಿ ಮಾತುಗಳನ್ನಾಡಿಸುತ್ತಿದ್ದಾರೆ. ಇದು ನಿಜವಾಗಿಯೂ ಉತ್ತಮ ನೀತಿಯೇ ಆಗಿದ್ದರೆ ಇಂಥಹ ಮುಚ್ಚು ಮರೆಯ ಕಣ್ಣುಮುಚ್ಚಾಲೆಯಾಟದ ಅಗತ್ಯವಿತ್ತೇ? ಸರಕಾರ ನಿರ್ಲಕ್ಷ್ಯದಿಂದ ವಿಧಾನ ಸಭೆಯಲ್ಲಿ ಮಂಡಿಸಿ ಚರ್ಚೆಗೆ ಬಿಟ್ಟು, ರಾಜ್ಯದ ಶಿಕ್ಷಣ ತಜ್ಞರ ಜೊತೆ ಸಮಾಲೋಚನೆ ಮಾಡಿ ಪ್ರಾಥಮಿಕ ಹಂತದಿಂದ ಪ್ರಾರಂಭಿಸಿ ಹಂತ ಹಂತವಾಗಿ ಶುರುಮಾಡ ಬಹುದಿತ್ತಲ್ಲ. ಅದಿಲ್ಲದೇ ಈಗಿನ ಕಾರ್ಯವೈಖರಿ ನೋಡಿದರೆ. . . ಅಲ್ಲೊಂದು ಸಂಚು ಕಾಣಿಸುತ್ತದೆ.

ಉಳ್ಳವರಿಗೆ ಮಣೆ ಹಾಕುವ ನೂತನ ಶಿಕ್ಷಣ ನೀತಿ

ವಿಮಲಾ .ಕೆ.ಎಸ್

ಸುಸ್ಥಿರ ಅಭಿವೃದ್ಧಿಯ ಕಾರ್ಯಸೂಚಿ 2030ರ ಕಾರ್ಯಸೂಚಿಯ ಜಾರಿಯ ಬಗ್ಗೆ ಬಹಳ ಮಾತುಗಳು ಕೇಳಿ ಬರುತ್ತಿವೆ. 2030ರ ವೇಳೆಗೆ ದೇಶ ಸಮೃದ್ಧವಾದ, ಸಮಗ್ರವಾದ ಅಭಿವೃದ್ಧಿಯನ್ನು ಸಾಧಿಸಿಬಿಡುತ್ತದೆ. ಆಹಾ ಮೂಗಿನ ತುದಿಯ ತುಪ್ಪ, ಘಮ ಘಮ. ಏನ್ಮಾಡೋದು ?ನೆಕ್ಕಲು ಸಿಗದು, ಒರೆಸಿ ಹಾಕಲು ಮನಸ್ಸು ಒಗ್ಗದು. ಹೀಗೆ ಹಿಂದೊಮ್ಮೆ ಹೇಳಲಾಗಿತ್ತು, ಅದರ ಪ್ರಕಾರ 2000ದ ವೇಳೆಗೆ ಎಲ್ಲ ದೇಶಗಳಲ್ಲಿಯೂ ಆರೋಗ್ಯ ತುಂಬಿ ತುಳುಕಾಡುತ್ತದೆ. ಆಸ್ಪತ್ರೆ ವೈದ್ಯರು ಇತ್ಯಾದಿಗಳೆಲ್ಲ ಯಕಃಶ್ಚಿತ್ ಅಗತ್ಯಗಳಾಗುತ್ತವೆ ಎಂದು. ಮತ್ತು ನಂತರವೂ ರಾಷ್ಟ್ರೀಯ ಮಹಿಳಾ ಅಭಿವೃದ್ಧಿಯ ಕಣ್ನೋಟ ಎಂಬೊಂದು ಬಂತು. ಅದೂ ಕೂಡ ಮಹಿಳೆಯರು ಸಾಧಿಸಿಯೇ ಬಿಡುತ್ತಾರೆ ಎಲ್ಲ ಸಮಾನತೆಗಳನ್ನು ಎಂದು ಸಾರಿತು.

ಈಗ ಈ ಸುಸ್ಥಿರ ಅಭಿವೃದ್ಧಿಯ ಕಾರ್ಯ ಸೂಚಿಯ ಭಾಗವಾಗಿ ನೂತನ ಶಿಕ್ಷಣ ನೀತಿಯನ್ನು ತೋರಿಸಲಾಗುತ್ತಿದೆ. ನೂತನ ಶಿಕ್ಷಣ ನೀತಿಯ ಪರಿಚಯದಲ್ಲಿ 2030ರ ವೇಳೆಗೆ 'ಪ್ರತಿಯೊಬ್ಬರಿಗೂ ಸಮಾವಿಷ್ಟವಾದ ಮತ್ತು ಸಮಾನವಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಹಾಗೂ ಜೀವನಪರ್ಯಂತ ಕಲಿಕೆಯ ಅವಕಾಶಗಳನ್ನು ಖಾತರಿಯಾಗಿ ಒದಗಿಸಿಕೊಡುವ ಉದ್ದೇಶವನ್ನು ಹೊಂದಿದೆ.' 'ಇಂಥ ಉನ್ನತವಾದ ಗುರಿ ಸಾಧನೆ ಮಾಡಬೇಕಾದರೆ 2030ರ ಸುಸ್ಥಿರ ಬೆಳವಣಿಗೆ ಕಾರ್ಯಸೂಚಿಯ ಎಲ್ಲ ಮಹತ್ವ ಪೂರ್ಣವಾದ ಉದ್ದೇಶಗಳನ್ನು ಮತ್ತು ಗುರಿಗಳನ್ನು ಸಾಧಿಸಲು ಸಾಧ್ಯವಾಗುವಂತೆ ಕಲಿಕೆಯನ್ನು ಪೋಷಿಸಿ ಅದಕ್ಕೆ ಬೆಂಬಲ ನೀಡಲು ಸಮರ್ಥವಾಗುವಂತೆ ನಮ್ಮ ಇಡೀ ಶಿಕ್ಷಣ ವ್ಯವಸ್ಥೆಯನ್ನು **ಮರುವಿನ್ಯಾಸ ಮಾಡಬೇಕಿದೆ'** ಎಂದು ಹೇಳಿಕೊಂಡಿದೆ.

ಮರುವಿನ್ಯಾಸ: 10+2 –> 5+3+3+4

ಹಾಗಾದರೆ ಏನೀ ಮರುವಿನ್ಯಾಸ ಎಂಬುದನ್ನು ಗಮನಿಸಿದರೆ 34 ವರ್ಷಗಳ ನಂತರ ರೂಪಿಸಿರುವ ಈ ರಾಷ್ಟ್ರೀಯ ನೀತಿಯಂತೆ ಈಗಿರುವ 10+2 ವ್ಯವಸ್ಥೆಯ ಬದಲಿಗೆ ಹೊಸ ವ್ಯವಸ್ಥೆಯು 5+3+3+4 ಮಾದರಿಯನ್ನಾಗಿ ಬದಲಾಯಿಸುತ್ತದೆ. ಮೇಲ್ನೋಟಕ್ಕೆ ಪಠ್ಯ ಮತ್ತು ನೀತಿಯ ಪಠ್ಯದಲ್ಲಿರುವ ಶಬ್ದಾಡಂಬರಗಳು ಯಾರನ್ನಾದರೂ ಮರುಳುಗೊಳಿಸುವ ರೀತಿಯಲ್ಲಿದೆ. ಇದರ ಅನುಷ್ಠಾನದ ಹಂತದಲ್ಲಿ ಎರಗಬಹುದಾದ ಅಪಾಯ ಮತ್ತು ಅದು ಸುಸ್ಥಿರ ಅಭಿವೃದ್ಧಿಯ ಕಲ್ಪನೆಯನ್ನು ಎಲ್ಲರಿಗೂ ಸಾಕಾರಗೊಳಿಸಲು ಸಂಪೂರ್ಣ ವಿಫಲವಾಗುತ್ತದೆ ಎಂಬುದಕ್ಕೆ ಹಲವು ದೃಷ್ಟಾಂತಗಳು ಸೂಕ್ಷ್ಮವಾಗಿ ನೋಡಿದರೆ ಆ ಪಠ್ಯದೊಳಗಿನಿಂದಲೇ ಸಿಗುತ್ತವೆ.

ಪ್ರಾಥಮಿಕದ ಮೊದಲು ಬರಲಿರುವ ಪೂರ್ವ ಪ್ರಾಥಮಿಕವನ್ನು ಶಾಲಾ ವ್ಯವಸ್ಥೆಗೆ ಜೋಡಣೆ ಮಾಡುವ ಮೂಲಕ ಈಗ ಸುವ್ಯವಸ್ಥಿತವಾಗಿ ನಡೆಯುತ್ತಿರುವ ಅಂಗನವಾಡಿ ಬಿಸಿಯೂಟದಂಥಹ ವ್ಯವಸ್ಥೆಗಳನ್ನು ಬುಡಮೇಲು ಮಾಡುವ ಇರಾದೆ ಗೋಚರಿಸುತ್ತಿದೆ. ಅಂಗನವಾಡಿ ಮತ್ತು ಬಿಸಿಯೂಟಗಳ ಮೂಲಕ ಪೌಷ್ಟಿಕ ಆಹಾರ ಪೂರೈಸಲಾಗುತ್ತಿದೆ ಎಂಬುದು ನಮಗೆಲ್ಲ ತಿಳಿದ ಸಂಗತಿ. ಈ ದೇಶದಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವ ಮತ್ತು ಬೆಳವಣಿಗೆ ಕುಸಿತ ಕಂಡಿರುವ ಮಕ್ಕಳು ಮತ್ತು ಮಹಿಳೆಯರ ಸಂಖ್ಯೆ ದೊಡ್ಡ ಮಟ್ಟದಲ್ಲಿದೆ. ಅದರ ನಿವಾರಣೆಯ ಭಾಗವಾಗಿಯೂ ಅಂಗನವಾಡಿ ಬಿಸಿಯೂಟದ ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಈಗ ಪೂರ್ವ ಪ್ರಾಥಮಿಕವನ್ನು ಶಾಲೆಗಳ ಜೊತೆ ಜೋಡಿಸುವ ಕ್ರಮ ಆ ಪೌಷ್ಟಿಕಾಂಶ ಪೂರೈಕೆಗೆ ಏನು ವ್ಯವಸ್ಥೆ ಎಂಬುದನ್ನು ಸ್ಪಷ್ಟ ಪಡಿಸಿಲ್ಲ ಎನ್ನುವುದೊಂದು ಸಂಗತಿ ಇದೆ. ಸುಸ್ಥಿರ ಅಭಿವೃದ್ಧಿಯ ಭಾಗ ಜನರ ಅಪೌಷ್ಟಿಕತೆಯನ್ನು ನೀಗುವುದೂ ಒಂದು ಎಂಬುದು ಹೃದಯವಂತರ ಮತ್ತು ವಿವೇಕಿಗಳ ಅಭಿಪ್ರಾಯ. ಮತ್ತು ಕಳೆದ ಹಲವಾರು ವರ್ಷಗಳಿಂದ ಯೋಜನಾ ಕಾರ್ಮಿಕರಾಗಿ ದುಡಿಯುತ್ತಿರುವ ಸಾವಿರಾರು ಅಂಗನವಾಡಿ ಮತ್ತು ಬಿಸಿಯೂಟದ ನೌಕರರನ್ನು (ಸರಕಾರ ಅವರನ್ನು ಕಾರ್ಯಕರ್ತರೆಂದು ಮತ್ತು ಸಂಭಾವನೆ/ಗೌರವ ಧನ ಪಡೆಯುವವರೆಂದು ಪರಿಗಣಿಸಿದರೂ) ಬೀದಿಗೆ ತಳ್ಳಿ ಸಾಧಿಸುವುದು ಸುಸ್ಥಿರ ಅಭಿವೃದ್ಧಿಯಾಗಲಾರದು.

ಮೂರನೇ ಮಾಳಿಗೆಯಿಂದ ಮನೆ ಕಟ್ಟಲು ಪ್ರಾರಂಭ

ಇದೊಂದು ಪ್ರಾಥಮಿಕ ಸಂಗತಿ. ಇದರ ಜೊತೆಗೇ ಇಡೀ ಸಮಾಜದಲ್ಲಿ ಕ್ರಾಂತಿಕಾರಕ ಸುಧಾರಣೆಯನ್ನು ತರ ಹೊರಟಿರುವ ನಮ್ಮ ಘನ ಸರಕಾರವು ಬದಲಾವಣೆಯನ್ನು ಮಾಡಲು ಬೇಕಾದ ತಯಾರಿಯನ್ನೇ ಮಾಡದೇ ಜಾರಿಗೊಳಿಸ ಹೊರಟಿದೆ. ಅಲ್ಪ ಸ್ವಲ್ಪ ಆಲೋಚನಾ ಸಾಮರ್ಥ್ಯವನ್ನು ಹೊಂದಿದವರೂ ಕೂಡ ಮನೆಯನ್ನು ಕಟ್ಟಬೇಕಾದರೆ ಭದ್ರ ಬುನಾದಿಯೊಂದಿಗೆ ಕಟ್ಟುತ್ತಾರೆ. ಯಾರೂ ಮಾಳಿಗೆಯಿಂದ ಪ್ರಾರಂಭಿಸಿ ಮನೆ ಕಟ್ಟಲು ಸಾಧ್ಯವಾಗದು. ನಮ್ಮ ಕರ್ನಾಟಕ ಸರಕಾರ ತಮ್ಮ ದೊರೆಗಳನ್ನು ಮೆಚ್ಚಿಸಲು ಮೂರನೇ ಮಾಳಿಗೆಯಿಂದ ಮನೆ ಕಟ್ಟಲು ಪ್ರಾರಂಭಿಸಿದೆ. ಇಲ್ಲಿಯೇ ಇದೆ ನಮ್ಮ ಪ್ರಶ್ನೆಗೆ ಉತ್ತರ ಸುಸ್ಥಿರ ಅಭಿವೃದ್ಧಿ ಆಗಲಿದೆ ಯಾರದ್ದು ಎಂದು. ಯಾರದ್ದೆಂದರೆ ಖಾಸಗೀ ಶಿಕ್ಷಣ ಸಂಸ್ಥೆಗಳದ್ದು. ಅದು ಹೇಗೆ?

ಕರ್ನಾಟಕ ಸರಕಾರವು ಸಮವರ್ತಿ ಪಟ್ಟಿಯಲ್ಲಿ ಬರುವ ಶಿಕ್ಷಣವನ್ನು ರಾಜ್ಯದ ವಿಧಾನಸಭೆಯಲ್ಲಿಯೂ ಚರ್ಚೆ ಮಾಡದೇ, ನಾಡಿನ ಹಲವು ಶಿಕ್ಷಣ ತಜ್ಞರು ಪ್ರಾರಂಭದಿಂದಲೇ ಈ ಶಿಕ್ಷಣ ನೀತಿಯ ಸ್ವರೂಪದ ಕುರಿತು ಆಕ್ಷೇಪ ಎತ್ತಿದರೂ ಕಡೆಗಣಿಸಿ ಇದನ್ನು ಜಾರಿ ಮಾಡುತ್ತಿದೆ. ಹಾಗೆ ಮಾಡುವ ಮೂಲಕ ರಾಜ್ಯದ ಸಾಂವಿಧಾನಿಕ ಹಕ್ಕನ್ನು ಕಿತ್ತುಕೊಳ್ಳಲು ತೆರೆದ ಬಟ್ಟಲಲ್ಲಿಟ್ಟು ಕೇಂದ್ರ ಸರಕಾರಕ್ಕೆ ಅವಕಾಶ ಕಲ್ಪಿಸಿದೆ. ನಮ್ಮದು ಒಕ್ಕೂಟ ವ್ಯವಸ್ಥೆ ಮತ್ತು ಕೇಂದ್ರದಲ್ಲಿರುವುದು ಒಕ್ಕೂಟ ಸರಕಾರ ಎಂಬುದನ್ನು ಮರೆತ ಸರ್ವಾಧಿಕಾರೀ ಧೋರಣೆಯ ಮುಂದೆ ಶರಣಾಗತವಾಗಿದೆ. ಆ ಮೂಲಕ ರಾಜ್ಯದ ಹಿತವನ್ನು ಕಡೆಗಣಿಸಿದೆ ಮತ್ತು ಇಲ್ಲಿನ ಶಾಸಕರ ಹಕ್ಕುಗಳನ್ನು ಪ್ರಜಾಪ್ರತಿನಿಧಿಗಳ ಚರ್ಚೆಯ ಹಕ್ಕನ್ನು ಮೊಟಕುಗೊಳಿಸಿದೆ. ಇದು ಅಂಗೀಕಾರಾರ್ಹವಲ್ಲ.

ಯಾವುದೇ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆ ತರುವುದು ಎಂದರೆ ಸಾಕಷ್ಟು ಪೂರ್ವ ಸಿದ್ಧತೆಗಳ ಅಗತ್ಯವಿರುತ್ತದೆ. ಅದರಲ್ಲಿಯೂ ದೇಶದ ಭವಿಷ್ಯಗಳಾದ ಮಕ್ಕಳ, ಯುವ ಸಮೂಹದ ಭವಿಷ್ಯವನ್ನು ಸಿದ್ಧಪಡಿಸುವ ಶಿಕ್ಷಣ ವ್ಯವಸ್ಥೆಯನ್ನು ಅಮೂಲಾಗ್ರ ಬದಲಾವಣೆಗೆ ತೆರೆಯುವಾಗ ಮಾಡಬೇಕಾದ ಯಾವ ಸಿದ್ಧತೆಗಳೂ ಇಲ್ಲದೆಯೇ ತರಾತುರಿಯಲ್ಲಿ ಶುರು ಮಾಡಿದ್ದು ಉನ್ನತ ಶಿಕ್ಷಣದಲ್ಲಿ ನೂತನ ಪದ್ಧತಿಯನ್ನು. ಇದಲ್ಲವೇ ಮಾಳಿಗೆಯಿಂದ ಮನೆ ಕಟ್ಟಲು ಪ್ರಾರಂಭಿಸುವ ಹುಸಿ ಪ್ರಯತ್ನ!!

ನೂತನ ಶಿಕ್ಷಣ ನೀತಿಯು ದೇಶದಲ್ಲಿ ಅಭಿವೃದ್ಧಿಯ ಹೊಸ ಶಕೆಯನ್ನೇ ತೆರೆಯಲಿದೆ ಎಂದ ಈ ನೀತಿಯನ್ನು ತಳ ಹಂತದಿಂದ ಪ್ರಾರಂಭಿಸುವ ಬದಲು ಮೇಲ್ಮಾಳಿಗೆಯಿಂದ ಮನೆ ಕಟ್ಟುವ ಹಾಗೆ ಉನ್ನತ ಶಿಕ್ಷಣದಿಂದ ಪ್ರಾರಂಭಿಸಲಾಗಿದೆ.



ಕೃಪೆ: ಸತೀಶ್ ಕುಮಾರ್

ಈ ಶಿಕ್ಷಣ ನೀತಿಯಲ್ಲಿ ಬಹುಶಿಸ್ತೀಯ ಶಿಕ್ಷಣ ಪದ್ಧತಿಯ ಕುರಿತು ಹೇಳಲಾಗಿದೆ. ವಿದ್ಯಾರ್ಥಿಗಳಿಗೆ ಪ್ರಾಥಮಿಕ ಹಂತದಿಂದ ಆಗುವ ಬದಲಾವಣೆಗೆ ಒಗ್ಗಿಸಿ ಪ್ರೌಢ ಮತ್ತು ಉನ್ನತ ಹಂತಕ್ಕೆ ತರುವುದು ಸರಿಯಾದ ಕ್ರಮ. ಆದರಿಲ್ಲಿ ಕಳೆದ ವರ್ಷದ ವರೆಗೆ ಇದ್ದ ಶಿಕ್ಷಣ ಕ್ರಮವನ್ನು ಸಂಪೂರ್ಣವಾಗಿ ಗಾಳಿಗೆ ತೂರಿ ಇದ್ದಕ್ಕಿದ್ದ ಹಾಗೇ ಈ ಅವಧಿಗೆ ಹೊಸತೊಂದು ಬೋಧನಾಕ್ರಮಕ್ಕೆ ಒಗ್ಗಿಕೊಳ್ಳಿರೆಂದು ಶಿಕ್ಷಕರಿಗೂ ಮತ್ತು ವಿದ್ಯಾರ್ಥಿಗಳಿಗೂ ಹೇಳುತ್ತಿರುವುದರ ಹಿಂದೆ ಯಾವ ತರ್ಕವೂ ಕಾಣುತ್ತಿಲ್ಲ.

ನಾಲ್ಕು ವರ್ಷಗಳ ಪದವಿ = ಶಿಕ್ಷಣ ಮೊಟಕು

ಕೊವಿಡ್ ಕಾರಣದಿಂದಾಗಿ ಕಳೆದ ಎರಡು ವರ್ಷಗಳಿಂದ ಶೈಕ್ಷಣಿಕ ದಿನಚರಿಗಳು ಚಲ್ಲಾಪಿಲ್ಲಿಯಾಗಿರುವ ಹೊತ್ತಿಗೆ, ವಿದ್ಯಾರ್ಥಿಗಳು ಪಾಠ ಪ್ರವಚನಗಳಿಲ್ಲದೇ ಘೋಷಿತ ಪಾಸ್ ಮಾರ್ಕ್ಸ್ ಗಳಿಕೆಗೆ ಒಳಪಡಬೇಕಾದ ಸ್ಥಿತಿ ಇರುವಾಗ, ಪರಿಸ್ಥಿತಿ ಸುಧಾರಿಸುವವರೆಗೆ ತಾಳಲಾರದ ಒತ್ತಡ ಎಲ್ಲಿಂದ ಇತ್ತು ಕರ್ನಾಟಕ ಸರಕಾರಕ್ಕೆ ಎಂದು ಕೇಳಬೇಕಾದ ಶಿಕ್ಷಕ ಸಮೂಹ ಎಲ್ಲಿ ಹೋಗಿದೆ?

ಈ ಪದ್ಧತಿಯಲ್ಲಿ ಈ ಮೊದಲಿನ ಮೂರು ವರ್ಷಗಳ ಬದಲು ನಾಲ್ಕು ವರ್ಷಗಳ ಪದವಿಯನ್ನು ಸೂಚಿಸಿದೆ. ಯಾಕೆ ಎಂಬುದು ದೊಡ್ಡ ಪ್ರಶ್ನೆ. ಅದನ್ನು ಜನರು ಒಪ್ಪಿಕೊಂಡು ಬಿಡುವಂತೆ ಮಾಡುವ ಚಾಣಾಕ್ಷತೆ ಅದರ ಮಾದರಿಯಲ್ಲಿದೆ. ಆ ಮಾದರಿ ಏನೆಂದರೆ ಒಂದೇ ವರ್ಷದ ಪದವಿ ತರಗತಿಗಳನ್ನು ಮುಗಿಸಿ ಶಿಕ್ಷಣವನ್ನು ಮೊಟಕುಗೊಳಿಸಲು ವಿದ್ಯಾರ್ಥಿಯೊಬ್ಬರು ಬಯಸಿದರೆ ಅವರಿಗೆ ಒಂದು ಸರ್ಟಿಫಿಕೇಟ್ ನೀಡಲಾಗುತ್ತದೆ. ಮತ್ತು ನಂತರವೂ ಕೂಡಾ ಆ ಸರ್ಟಿಫಿಕೇಟಿನ ಆಧಾರದಲ್ಲಿ ಅವರು ಯಾವಾಗ ಬೇಕಾದರೂ ಮತ್ತೆ ವಿದ್ಯಾಭ್ಯಾಸವನ್ನು ಮುಂದುವರೆಸಬಹುದಂತೆ!. ಹಾಗೆಯೇ ಎರಡು ವರ್ಷ ಪೂರೈಸಿದರೆ ಡಿಪ್ಲೊಮಾ ಸರ್ಟಿಫಿಕೇಟ್ ದೊರೆಯುವುದಂತೆ. ಅದರ ಮೂಲಕವೂ ಉದ್ಯೋಗ ಪಡೆಯಬಹುದಂತೆ. ಎಂದರೆ ಯಾರು ಅಥವಾ ಯಾವ ವಿಭಾಗ ಹೀಗೆ ಶಿಕ್ಷಣವನ್ನು ಮೊಟಕುಗೊಳಿಸಿ ಉದ್ಯೋಗಕ್ಕೆ ಹೋಗುವ ವಿಭಾಗ ಮತ್ತು ಒಂದು ವರ್ಷದ ಪದವಿ ಅಥವಾ ಎರಡು ವರ್ಷದ ಡಿಪ್ಲೊಮಾ ಸರ್ಟಿಫಿಕೇಟ್ ಪಡೆದವರಿಗೆ ದೊರೆಯಬಹುದಾದ ಉದ್ಯೋಗ ಎಂಥಹುದು. ಇಲ್ಲಿಯೇ ಅರ್ಥ ಮಾಡಿಕೊಳ್ಳಬಹುದು. ಪಿರಮಿಡ್ ಮಾದರಿಯ ಶ್ರೇಣೀಕೃತ ಸಮಾಜವಾದ ಭಾರತದಲ್ಲಿ ಅಂಚಿಗೆ ತಳ್ಳಲ್ಪಟ್ಟ, ಆರ್ಥಿಕವಾಗಿ ತಲ್ಲಣಿಸುತ್ತಿರುವ ಬಹು ಸಂಖ್ಯಾತ ಜನ ಸಮೂಹದ ಭವಿಷ್ಯಗಳು ಮಧ್ಯದಲ್ಲಿಯೇ ಶಿಕ್ಷಣ ತೊರೆದು ಕ್ವಚಿತ್ ಸಂಬಳಗಳಿಗೆ ದುಡಿಮೆಯ ಕ್ಷೇತ್ರಕ್ಕೆ ತಳ್ಳಲ್ಪಡುತ್ತಾರೆ. ಎಂದರೆ ಪದವಿ ಅಥವಾ ಪೂರ್ಣ ಶಿಕ್ಷಣ, ಉಳ್ಳವರಿಗೆ ಮಾತ್ರ ಎಂದಾಯಿತು. ಎಂದರೆ ಹೊಸ ನೀತಿ ಮುಂದಿನ ತಲೆಮಾರಿನ ತಳ ಹಂತದ ವಿಭಾಗಗಳ ಮಕ್ಕಳನ್ನು ಶಿಕ್ಷಣದಿಂದ ವಂಚಿತರಾಗಿಸುವ ನೀತಿಯೇ ಆಗಿದೆ. ಸ್ವಾತಂತ್ರ್ಯದ 75ನೇ ಅಮೃತಮಹೋತ್ಸವದಲ್ಲಿ ಸ್ವತಂತ್ರ ಭಾರತದ ಈವರೆಗಿನ ಅಷ್ಟೋ ಇಷ್ಟೋ ಮಾಡಿದ ಸಾಧನೆಯನ್ನು ಹುಡಿಗೈಯುವ ಪ್ರಯತ್ನವಲ್ಲವೇ?

ಇನ್ನು ನಾಲ್ಕು ವರ್ಷಗಳ ಪದವಿ ಎನ್ನುವುದು ಬಹುತೇಕ ವಿದೇಶಗಳಲ್ಲಿ ಉನ್ನತೋನ್ನತ ವ್ಯಾಸಂಗ ಮಾಡುವವರಿಗೆ ನೆರವಾಗಲಿದೆ. ಯಾಕೆಂದರೆ ಅಮೆರಿಕಾ ದಂಥಹ ದೇಶಗಳಲ್ಲಿ ನಾಲ್ಕು ವರ್ಷಗಳ ಪದವಿ ಪದ್ಧತಿ ಜಾರಿಯಲ್ಲಿರುವುದರಿಂದ ಅಲ್ಲಿಗೆ ಹೋಗಿ ವ್ಯಾಸಂಗ ಮಾಡುವವರಿಗಾಗಿ ಈ ನೀತಿಯಾಗಿದೆ ಎಂಬುದು ಮುಚ್ಚಿಟ್ಟ ಸತ್ಯ. ದುಡಿಯುವ ಜನರು ಮತ್ತು ದಲಿತ ದಮನಿತ ವಿಭಾಗಗಳು ಈ ಸಂಚನ್ನು ಅರ್ಥಮಾಡಿಕೊಳ್ಳಬೇಕು.

ಇನ್ನು ಈ ಶಿಕ್ಷಣ ನೀತಿ ಭಾರತದ ಪರಂಪರಾಗತ ಶಿಕ್ಷಣ ಕ್ರಮವನ್ನು ಮರಳಿ ತರುವ ಮಾತುಗಳನ್ನಾಡುತ್ತಿದೆ. ಎಂದರೆ ಭಾರತದಲ್ಲಿ ಇದುವರೆಗೆ ಇದ್ದ ಶಿಕ್ಷಣ ದೋಷ ಪೂರಿತವಿತ್ತೇ? ಈಗ ಈ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲು ಹೊರಟಿರುವವರೂ ಈ ಹಿಂದಿನ ಪದ್ಧತಿಯಲ್ಲಿಯೇ ಕಲಿತು ಬಂದಿರುವವರಲ್ಲವೇ? ಹಾಗಾದರೆ ಅಲ್ಲಿ ಗುರುತಿಸಿದ ಕೊರತೆಗಳೇನು ಎಂಬುದನ್ನು ತಿಳಿಸಿ ಜನರಿಗೆ ಮನವರಿಕೆ ಮಾಡಲೇ ಬೇಕಲ್ಲವೇ. ಇದರ ಜೊತೆಗೆ ಎಲ್ಲ ಹಂತಗಳಲ್ಲಿ ಖಾಸಗೀ ಕ್ಷೇತ್ರಕ್ಕೆ ಆದ್ಯತೆ ಕೊಡುವ ಸೂಚನೆಗಳಿದ್ದು ಈಗಾಗಲೇ ಮುಚ್ಚಲಿರುವ ಸಾವಿರಾರು ಸರಕಾರಿ ಶಾಲೆ ಕಾಲೇಜುಗಳ ಜೊತೆ ಇನ್ನಷ್ಟು ಸೇರಲಿದೆ.

40% ಆನ್‌ಲೈನ್ = ಶಿಕ್ಷಣ ವಂಚನೆ

ಅಲ್ಲದೆಯೇ ನೂತನ ಶಿಕ್ಷಣ ಪದ್ಧತಿಯ ಪ್ರಕಾರ 40% ಆನ್‌ಲೈನ್ ಮೂಲಕ ಪಡೆಯಬಹುದೆಂದಿದೆ. ಆ ನಿಟ್ಟಿನಲ್ಲಿ ಕರ್ನಾಟಕ ಸರಕಾರದ ಅಧಿಕೃತ ಆದೇಶವೂ ಹೊರಬಿದ್ದಿದೆ. ಇದು ಕಾಲಕ್ರಮೇಣ ಪಡೆಯಬಹುದು ಎಂಬುದರಿಂದ ಪಡೆಯಬೇಕು ಎಂದಾದರೆ ಒಂದೇ ಏಟಿಗೆ ಭಾರತದ ಗ್ರಾಮೀಣ ವಿದ್ಯಾರ್ಥಿಗಳು ಶಿಕ್ಷಣದ ಬದಲು ಕೃಷಿ ಕೂಲಿಕಾರರಾಗಿ ತಳ್ಳಲ್ಪಡುತ್ತಾರೆ. ಮತ್ತು

ಪುಟ 15 ಕ್ಕೆ

ಪಶ್ಚಿಮ ಬಂಗಾಳ ವಿಧಾನ ಸಭಾ ಚುನಾವಣೆಗಳಲ್ಲಿ ಎಡರಂಗಕ್ಕೆ ತೀವ್ರ ಪರಾಭವ ಏಕಾಯಿತು?

ಇತ್ತೀಚೆಗೆ ನಡೆದ ಪಶ್ಚಿಮ ಬಂಗಾಲದ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಎಡರಂಗ ಹಿಂದೆಂದೂ ಕಾಣದಂತಹ ಆಘಾತಕಾರಿ ಪರಾಭವವನ್ನು ಕಂಡಿವೆ. ಇದು ಏಕಾಯಿತು ಎಂಬುದರ ಒಂದು ತೀಕ್ಷ್ಣವಾದ ವಿಮರ್ಶಾತ್ಮಕ ಆತ್ಮಾವಲೋಕನ ಸಿಪಿಐ(ಎಂ)ಪಶ್ಚಿಮ ಬಂಗಾಲ ರಾಜ್ಯ ಸಮಿತಿಯಲ್ಲಿ, ನಂತರ ಕೇಂದ್ರ ಸಮಿತಿಯಲ್ಲಿ ನಡೆದಿದ್ದು, ಇದರಿಂದ ಪಾಠಗಳನ್ನು ಗುರುತಿಸಿ, ಕೈಗೊಳ್ಳಬೇಕಾದ ಸರಿಪಡಿಕೆ ಕ್ರಮಗಳ ರೂಪುರೇಷೆಯನ್ನು ಆಗಸ್ಟ್ 6 ರಿಂದ 8 ರ ವರೆಗೆ ನಡೆದ ಕೇಂದ್ರ ಸಮಿತಿಯ ಸಭೆ ಕೊಟ್ಟಿದೆ. ರಾಜಕೀಯ ಸಂಘಟನಾತ್ಮಕ ಪ್ರಶ್ನೆಗಳಲ್ಲದೆ, ರಾಜ್ಯದಲ್ಲಿನ ಪರಿಸ್ಥಿತಿಯನ್ನು ನಿರ್ಣಯಿಸುವಾಗ ಪಕ್ಷದ ಸಾಮೂಹಿಕ ನೆಲೆಯಲ್ಲಿನ ಅವನತಿಗೆ ಕಾರಣವಾದ ಎರಡು ಮುಖ್ಯ ಅಂಶಗಳನ್ನು, ರಾಜಕೀಯ ಬಲಪಂಥದತ್ತ ಪಲ್ಲಟ ಮತ್ತು ನಮ್ಮ ಸಮಾಜದಲ್ಲಿನ ವರ್ಗ ಬದಲಾವಣೆಗಳನ್ನು ಸರಿಯಾಗಿ ಪರಿಗಣಿಸಲಿಲ್ಲ ಎಂದು ಈ ವಿಮರ್ಶೆ ಗುರುತಿಸಿರುವ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ಈ ಸಂಚಿಕೆಯಲ್ಲಿ ಆ ವಿಮರ್ಶೆಯಲ್ಲಿ ಗುರುತಿಸಿದ ಇತರ ಅಂಶಗಳ ಬಗ್ಗೆ ಮತ್ತು ನಿರ್ಧರಿಸಿರುವ ಕಾರ್ಯಭಾರಗಳ ಬಗ್ಗೆ ಓದಿ.



ಟಿಎಂಸಿ ಮತ್ತು ಬಿಜೆಪಿ ನಡುವೆ ತೀಕ್ಷ್ಣ ಧೃವೀಕರಣ

2019ರ 17ನೇ ಲೋಕಸಭಾ ಚುನಾವಣೆಯಲ್ಲಿ ಯಾವ ವಿಧಾನಸಭಾ ಕ್ಷೇತ್ರದಲ್ಲೂ ನಾವು ಬಹುಮತವನ್ನು ಪಡೆಯಲಾಗಲಿಲ್ಲ ಮತ್ತು ಆ ನಂತರದ ಪರಾಮರ್ಶೆಯು ಬಿಜೆಪಿ ಮತ್ತು ಟಿಎಂಸಿ ನಡುವಿನ ಧೃವೀಕರಣ ಹೆಚ್ಚಾಗುತ್ತಿರುವುದನ್ನು ಗಮನಿಸಿದೆ. ಈ ಎರಡು ಧೃವಗಳ ಸನ್ನಿವೇಶವನ್ನು ಮುರಿಯಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಬೇಕೆಂದು ತೀರ್ಮಾನಿಸಲಾಗಿತ್ತು. ಆದಾಗ್ಯೂ, 2021ರ ವಿಧಾನಸಭಾ ಚುನಾವಣೆಯ ಸಮಯದಲ್ಲಿ, 2019 ಮತ್ತು 2021ರ ಅವಧಿಯಲ್ಲಿ ಎಲ್ಲಾ ಹೋರಾಟಗಳು ಹಾಗೂ ಜನರನ್ನು ಅಣಿನೆರೆಸುವ ಕಾರ್ಯಗಳು ನಡೆದಾಗಲೂ, ರಾಜಕೀಯ ಅಂತರ್ಸಂಬಂಧಗಳಲ್ಲಿ ಬದಲಾವಣೆಯಾಗಲಿಲ್ಲ ಮತ್ತು 2019ರಲ್ಲಿ ಹೇಗಿತ್ತೋ ಹಾಗೆಯೇ ಇದೆ ಎಂದು ರಾಜ್ಯ ಸಮಿತಿ ತೀರ್ಮಾನಕ್ಕೆ ಬಂದಿದೆ.

ಸಿಪಿಐ(ಎಂ) ಗಳಿಸಿದ ಮತಗಳು 2016ರಲ್ಲಿದ್ದ ಶೇಕಡಾ 19.75 ರಿಂದ 2019ರಲ್ಲಿ ಶೇಕಡಾ 6.28 ಕ್ಕೆ ಇಳಿದು, ಈಗ 2021ರಲ್ಲಿ ಅದು ಶೇಕಡಾ 4.73 ಗೆ ಕುಸಿದಿದೆ.

ಈಗಿನ ಕೆಲವು ವರ್ಷಗಳಲ್ಲಿ ಎರಡು ರಾಜಕೀಯ ಧೃವಗಳ ಪರಿಸ್ಥಿತಿ ಬಲವಾಗುತ್ತಿದೆ. ಇದು 2019 ರ ಲೋಕಸಭಾ ಚುನಾವಣೆಯ ಸಮಯ ಹಾಗೂ ನಂತರದ ಅವಧಿಯಲ್ಲಿ ತೀವ್ರಗೊಂಡಿದೆ. ಬಂಗಾಳ ರಾಜ್ಯದಲ್ಲಿ ಬೇರಾವುದೇ ರಾಜಕೀಯ/ಚುನಾವಣಾ ಪರ್ಯಾಯಗಳನ್ನು ನಿರಾಕರಿಸಿ ಬಿಜೆಪಿ-ಟಿಎಂಸಿ ದ್ವಿಧೃವೀಕರಣ ಮಾತ್ರವೇ ಇದೆ ಎಂಬ ಪರಿಕಲ್ಪನೆಯನ್ನು ಕಾರ್ಪೋರೇಟ್ ಮಾಧ್ಯಮಗಳು ಹಾಗೂ ಆಳುವ ವರ್ಗಗಳ ಪ್ರಭಾವೀ ವಿಭಾಗಗಳು ಬೆಂಬಲಿಸಿದವು ಮತ್ತು ಪ್ರೋತ್ಸಾಹಿಸಿದವು. ಆದರೆ, ಅಂತಹ ದ್ವಿಧೃವೀಕರಣ ಸಾಧಿಸಲು ಟಿಎಂಸಿ-ಬಿಜೆಪಿ ನಡುವೆ ಒಳಸಂಚಿತ್ತು ಎಂಬ ತೀರ್ಮಾನಕ್ಕೆ ಬರುವುದು ತಪ್ಪಾಗುತ್ತದೆ.

ಆರ್‌ಎಸ್‌ಎಸ್/ಬಿಜೆಪಿಗೆ ಬಂಗಾಳದಲ್ಲಿ ತಳಊರಲು ಟಿಎಂಸಿಯು ಬೆನ್ನು ಕೊಟ್ಟಿರುವ ಸಂಗತಿ ನಿಜವಾದುದೇ ಆಗಿದೆ. ಬಿಜೆಪಿಯೊಂದಿಗಿನ ಟಿಎಂಸಿಯ ದೀರ್ಘಕಾಲದ ಮೈತ್ರಿ ಮತ್ತು ಅದು ಎನ್.ಡಿ.ಎ. ಯ ಭಾಗವಾಗಿದ್ದು ಹಾಗೂ ವಾಜಪೇಯಿ ಸರ್ಕಾರದಲ್ಲಿ ಕೇಂದ್ರ ಸಂಪುಟದ ಭಾಗವಾಗಿದ್ದುದು ಅವೆಲ್ಲಾ ಬಹಳ ಕಾಲ ಅವರ ಮೈತ್ರಿಯನ್ನು ಗಟ್ಟಿಯಾಗಿಸಿತ್ತು. ಆದರೆ, ದೇಶಾದ್ಯಂತ ಬಿಜೆಪಿಯ ಬೆಳವಣಿಗೆ ಮತ್ತು ಭಾರತದ ಎಲ್ಲಾ ರಾಜ್ಯಗಳಲ್ಲೂ ಅದು ನಿಯಂತ್ರಣ ಸಾಧಿಸಲು ಬಯಸಿದ್ದು ಅವರ ಮೈತ್ರಿಯಲ್ಲಿ ಒಡಕನ್ನು ಸೃಷ್ಟಿಸಿತು. ಬಲಪಂಥೀಯತೆಯೆಡೆಗಿನ ಪಲ್ಲಟ ಮತ್ತು ಅದರೊಂದಿಗಿನ ಕೋಮುವಾದಿ ದಾಳಿಗಳು ದೇಶದೆಲ್ಲೆಡೆ ಹೆಚ್ಚಾಗುತ್ತಿವೆ. ಬಂಗಾಳದಲ್ಲಿ, ಇದು ಟಿಎಂಸಿಯ ಪ್ರಾಬಲ್ಯಕ್ಕೆ ಸೆಡ್ಡುಹೊಡೆಯಿತು ಮತ್ತು ಬಂಗಾಳವನ್ನು ವಶಪಡಿಸಿಕೊಳ್ಳುವ ಘೋಷಣೆಯೊಂದಿಗೆ ಮುಂದುವರಿಯಿತು.

ಟಿಎಂಸಿಯಿಂದ ಬಿಜೆಪಿಗೆ ಆದ ದೊಡ್ಡ ಮಟ್ಟದ ಪಕ್ಷಾಂತರಗಳು ಮತ್ತು ಚುನಾವಣೆಯ ನಂತರ ಅವರ ಹಿಂತಿರುಗುವಿಕೆಯು ರಾಜ್ಯದಲ್ಲಿ ಇವೆರಡರ ನಡುವೆ ಧೃವೀಕರಣ ಸೃಷ್ಟಿಸಿರುವುದರ ಪ್ರತಿಫಲನ ಎಂದು ನಾವು ತಪ್ಪಾಗಿ ಅಂದಾಜು ಮಾಡಿದ್ದೆವು. ಹೊಸ ಪ್ರದೇಶಗಳಲ್ಲಿ ತಮ್ಮ ವಿಸ್ತರಣೆಗಾಗಿ ಅವರು ಯಾವುದೇ ರಾಷ್ಟ್ರೀಯ ಅಥವಾ ಪ್ರಾದೇಶಿಕ ಪಕ್ಷದೊಂದಿಗೆ ಮಾಡಿಕೊಂಡ ಮೈತ್ರಿಯು ಅಂತಿಮವಾಗಿ ಅವುಗಳನ್ನು ದುರ್ಬಲಗೊಳಿಸುವಲ್ಲಿ, ವಿಭಜಿಸುವಲ್ಲಿ, 1960ರ ಮಧ್ಯದಿಂದ ಮತ್ತು ಆನಂತರ ಸೋಶಿಯಲಿಸ್ಟ್ ಪಕ್ಷಕ್ಕೆ ಆದಂತೆ ಅಂತಿಮವಾಗಿ ಹೇಳಹೆಸರಿಲ್ಲದಂತೆ ನಿರ್ನಾಮ ಮಾಡುವಲ್ಲಿ ಯಶಸ್ವಿಯಾಗಿರುವುದನ್ನು ಆರ್‌ಎಸ್‌ಎಸ್ ಮತ್ತು ಅದರ ರಾಜಕೀಯ ರಂಗವಾಗಿದ್ದ ಜನಸಂಘ ಮತ್ತು ಈಗ ಬಿಜೆಪಿಯ ಚರಿತ್ರೆಯು ರುಜುವಾತುಪಡಿಸುತ್ತದೆ. ಹಲವಾರು ಪ್ರಾದೇಶಿಕ ಪಕ್ಷಗಳು ಇದೇ ರೀತಿಯ ಅನುಭವಗಳನ್ನು ಪಡೆದಿವೆ. ಅಸ್ಸಾಮಿನ ಎಜಿಪಿಯಂತಹ ಪಕ್ಷಗಳು ಬಿಜೆಪಿಯೊಂದಿಗೆ ಸೇರಿಕೊಂಡ ನಂತರ ದುರ್ಬಲವಾಗಿವೆ.

ಮೋದಿ-ಶಾ ಕಾರುಬಾರು ವಿರೋಧ ಪಕ್ಷಗಳ ವಿರುದ್ಧ ಮುಮ್ಮುಖ ರಣತಂತ್ರವನ್ನು ಬಳಸುತ್ತಿದೆ: ಪಕ್ಷಾಂತರಕ್ಕಾಗಿ ನೇರವಾಗಿ ಹಣಕಾಸಿನ ಆಮಿಷ ಒಡ್ಡುವುದು ಮತ್ತು ಸರ್ಕಾರಗಳಲ್ಲಿ ಪ್ರಮುಖವಾದ ಸ್ಥಾನಗಳ ಭರವಸೆ ನೀಡುವುದು; ಎರಡನೆಯದಾಗಿ, ಕಾನೂನು ಜಾರಿ ಸಂಸ್ಥೆಗಳ ಮೂಲಕ ಕಿರುಕುಳ ಮತ್ತು ಬೆದರಿಕೆ ಒಡ್ಡುವುದು; ಮತ್ತು ಕೊನೆಯದಾಗಿ, ವಿರೋಧಿ ಮುಖಂಡರ ಮೇಲೆ ಪ್ರಕರಣ ದಾಖಲಿಸಿ ಅವರನ್ನು ಜೈಲಿಗೆ ಕಳಿಸುವುದು. ಗೋವಾ, ಕರ್ನಾಟಕ, ಮಧ್ಯಪ್ರದೇಶ ಹಾಗೂ ಈಶಾನ್ಯ ರಾಜ್ಯಗಳಲ್ಲಿ ಚುನಾಯಿತ ಸರ್ಕಾರಗಳ ಪತನವನ್ನು ಹೇಗೆ ನಿಭಾಯಿಸಿದರು ಎಂದು ನಾವು ನೋಡಿದ್ದೇವೆ. ಇಂತಹ ಚಟುವಟಿಕೆಗಳು ಬಿಜೆಪಿ ಮತ್ತು ಅವರ ಅತ್ಯಂತ ಹಳೆಯ ಮಿತ್ರರಾದ ಶಿವಸೇನೆ ಮತ್ತು ಅಕಾಲಿದಳ ನಡುವೆ ತೀವ್ರ ತಿಕ್ಕಾಟಗಳಿಗೆ ಕಾರಣವಾಗಿ ಅವರು ಮೈತ್ರಿಕೂಟದಿಂದ ಹೊರಹೋಗುವಂತೆ ಆಯಿತು.

ಒಕ್ಕೂಟತತ್ವದ ಮೇಲೆ ಮತ್ತು ಪ್ರಾದೇಶಿಕ ಪಕ್ಷಗಳ ನೇತೃತ್ವದ ಚುನಾಯಿತ ರಾಜ್ಯ ಸರ್ಕಾರಗಳ ಹಕ್ಕುಗಳ ಮೇಲಿನ ಬಿಜೆಪಿ ಸರ್ಕಾರದ ದಾಳಿಗಳು, ಆರ್‌ಎಸ್‌ಎಸ್ ಪ್ರಚಾರಕರನ್ನು ರಾಜ್ಯಪಾಲರುಗಳನ್ನಾಗಿ ನೇಮಿಸುವ ಮೂಲಕ ನಿರ್ಲಜ್ಜ ಹಸ್ತಕ್ಷೇಪಗಳು ಆಳುವ ಪ್ರಾದೇಶಿಕ ಪಕ್ಷಗಳು ಮತ್ತು ಬಿಜೆಪಿ ನಡುವೆ ತಿಕ್ಕಾಟಗಳನ್ನು ಸೃಷ್ಟಿಸಿವೆ.

ಅದರ ಫಲವಾಗಿ ಬೆಳೆಯುತ್ತಿರುವ ಬಿಜೆಪಿ ಮತ್ತು ಆಳುವ ಟಿಎಂಸಿ ನಡುವಿನ ಹಗೆತನವನ್ನು ನಾವು ಕಡಿಮೆ ಅಂದಾಜು ಮಾಡಿದೆವು. ಇದು ಬಿಜೆಪಿ ವಿರೋಧಿ ಪ್ರಚಾರದ ತೀಕ್ಷ್ಣತೆಯನ್ನು ದುರ್ಬಲಗೊಳಿಸಿತು ಮತ್ತು ನಮ್ಮ ಪಕ್ಷದ ಪ್ರಮುಖ ಸಮಿತಿಗಳು ಬಿಜೆಪಿಯನ್ನು ನಮ್ಮ ಪ್ರಧಾನ ವಿರೋಧಿ ಎಂದು ಹೇಳಿಕೆಗಳ ಹಾಗೂ ನಿಲುವುಗಳ ಮೂಲಕ ಸ್ಪಷ್ಟಪಡಿಸಿದ್ದರೂ, ಕಾರ್ಯತಃ ಕೆಲವು ವೇಳೆ ಬಿಜೆಪಿಯನ್ನು ತೃಣಮೂಲ ಕಾಂಗ್ರೆಸ್ಸಿನೊಂದಿಗೆ ಸಮೀಕರಿಸಲಾಗಿತ್ತು. ಇದರಿಂದಾಗಿ ನಮ್ಮ ಪಕ್ಷವು ಬಿಜೆಪಿಯನ್ನು ವಿರೋಧಿಸುವ ಜಾತ್ಯತೀತ ಪ್ರಜಾಪ್ರಭುತ್ವದ ರಾಜಿಯಿಲ್ಲದ ರಕ್ಷಕ ಎಂಬುದಕ್ಕೆ ಧಕ್ಕೆಯುಂಟಾಯಿತು.

ಬಂಗಾಳದ ಜನರಲ್ಲಿ ಬಿಜೆಪಿ-ವಿರೋಧಿ ಮತಗಳನ್ನು ಕ್ರೋಢೀಕರಿಸುವ ಈ ಫಲಿತಾಂಶದಲ್ಲಿ, ನವಭಾರತಕ್ಕಾಗಿ ಬಿಜೆಪಿಯ ಬಹಿರಂಗ ಕರೆ ಮತ್ತು ಬಂಗಾಳವನ್ನು ವಶಪಡಿಸಿಕೊಳ್ಳುವ ಸಲುವಾಗಿನ ಅದರ ಆಕ್ರಮಣಕಾರಿ ಪ್ರಚಾರಗಳು ದೊಡ್ಡ ಪಾತ್ರ ವಹಿಸಿದವು.

ಟಿಎಂಸಿ ವಿರುದ್ಧದ ಅಧಿಕಾರಸ್ಥ-ವಿರೋಧಿ ಭಾವನೆಯ ಬಗ್ಗೆ ಮೇಲಂದಾಜು: ಟಿಎಂಸಿ ಸರ್ಕಾರದ ವಿರುದ್ಧ ಜನರಲ್ಲಿ ಅಧಿಕಾರಸ್ಥ-ವಿರೋಧಿ ಭಾವನೆಗಳಿದ್ದವು ಎಂಬುದು ಸರಿಯಾದದ್ದೆ. ಇದು 2019ರ ಲೋಕಸಭಾ ಚುನಾವಣೆಯ ಫಲಿತಾಂಶದಲ್ಲಿ ತೀಕ್ಷ್ಣವಾಗಿ ವ್ಯಕ್ತವಾಗಿದೆ.

ಆದರೆ, ಇದನ್ನು ಜಯಿಸುವಲ್ಲಿ ಟಿಎಂಸಿಯು ಮಾಡಿದ ಪ್ರಯತ್ನಗಳನ್ನು ಕೀಳಂದಾಜು ಮಾಡಲಾಯಿತು. ಒಂದು ಹಂತದಲ್ಲಿ ಜನಕಲ್ಯಾಣ ಕಾರ್ಯಕ್ರಮಗಳು ಜನರಿಗೆ ತೀರ ಅಗತ್ಯವಾಗಿದ್ದ ಪರಿಹಾರ ಒದಗಿಸಿದವು. ಇವುಗಳನ್ನು 'ಭಿಕ್ಷಾ ರಾಜಕೀಯ'(ಡೋಲ್ ಪಾಲಿಟಿಕ್ಸ್) ಎಂದು ತುಚ್ಛವಾಗಿ ತಿರಸ್ಕರಿಸಿದ್ದು ನಮ್ಮ ಕಡೆಯಿಂದಾದ ಪ್ರಮಾದವಾಗಿದೆ. ಟಿಎಂಸಿಯಿಂದ ದೂರವಾಗಿದ್ದ ಒಂದು ವಿಭಾಗದ ಜನರು ಅದನ್ನು ಬೆಂಬಲಿಸಲಿಸಲು ಮುಂದಾದರು.

ಎರಡನೆಯದಾಗಿ, ಮುಖ್ಯ ಮಂತ್ರಿಗಳ ವಿರುದ್ಧ ಪ್ರಧಾನ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಹರಿಬಿಟ್ಟ ವೈಯಕ್ತಿಕ ನಿಂದನಾ ಭಾಷಣಗಳು 'ಸಂತರು ಮತ್ತು ರಾಕ್ಷಸರ" ನಡುವಿನ ಸಂಘರ್ಷಕ್ಕೆ ಹೋಲಿಕೆ ಮಾಡಿ ಜನರಲ್ಲಿ ಟಿಎಂಸಿಯ ಬಗ್ಗೆ ಒಂದು ಪ್ರಮಾಣದ ಅನುಕಂಪವನ್ನು ಹುಟ್ಟಿಸಿತು. ಮುಖ್ಯ ಮಂತ್ರಿಗಳು ಗಾಲಿಖುರ್ಚಿಯ ಮೇಲೆ ಪ್ರಚಾರ ಮಾಡಿದ್ದರಿಂದಾಗಿ ಈ ಅನುಕಂಪವು ಇನ್ನೂ ಹೆಚ್ಚಾಯಿತು. ಆದರೆ ಅವರ ಗಾಯಗಳು ಎಷ್ಟೇ ಉತ್ಪ್ರೇಕ್ಷಿತವಾಗಿದ್ದಾಗ್ಯೂ, ಅದು ಮುಖ್ಯವಾಗಿ ಮಹಿಳಾ ಮತದಾರರಲ್ಲಿ ಅನುಕಂಪ ಹುಟ್ಟಿಸಿತು.

ಮೂರನೆಯದಾಗಿ, ಕೆಲವು ನಿರ್ದಿಷ್ಟ ರಿಯಾಯತಿಗಳೊಂದಿಗೆ ನಿರ್ದಿಷ್ಟ ಗುಂಪುಗಳನ್ನು ಗುರಿಯಾಗಿಸಿ ಒಂದು ರೀತಿಯ ಚಾತುರ್ಯದಿಂದ ಸಾಮಾಜಿಕ ತಂತ್ರಗಾರಿಕೆ(ಸೋಶಿಯಲ್ ಎಂಜಿನಿಯರಿಂಗ್) ನಡೆಸುವ ಮೂಲಕ ಅವರ ಬೆಂಬಲ ಪಡೆಯುವಲ್ಲಿ ಅವರು ಯಶಸ್ವಿಯಾದರು.

ಸಿಂಹಾವಲೋಕನ ಮಾಡಿದಾಗ ಸ್ಪಷ್ಟವಾಗಿ ಗೋಚರಿಸುವ ಈ ಅಂಶಗಳನ್ನು ನಾವು ಸರಿಯಾಗಿ ಪರಿಗಣಿಸಲಾಗಲಿಲ್ಲ.

ಭೂಮಿ ಪ್ರಶ್ನೆ: ಎಡರಂಗ ಸರ್ಕಾರದ ಭೂಸುಧಾರಣೆ ಮತ್ತಿತರ ಜನಪರ ನೀತಿಗಳು ಅಲ್ಪಸಂಖ್ಯಾತರ, ದಲಿತರ, ಆದಿವಾಸಿಗಳ ಹಾಗೂ ಇತರ ಅಂಚಿನಲ್ಲಿರುವ ವಿಭಾಗಗಳ ಬೆಂಬಲ ಪಡೆಯಲು ಸಾಧ್ಯವಾಗಬಹುದು ಎಂಬ ಮಿತಿಮೀರಿದ ಆತ್ಮವಿಶ್ವಾಸದಿಂದ ನಾವು ಪ್ರಚಾರವನ್ನು ಮುಂದುವರಿಸಿದೆವು. ಭೂಮಿ ನಮ್ಮ ಮೂಲಾಧಾರ ಮತ್ತು ಕೈಗಾರಿಕೀಕರಣ ನಮ್ಮ ಭವಿಷ್ಯ ಎಂದು ನಾವು ನಂದಿಗ್ರಾಮ ಬೆಳವಣಿಗೆಯ ಸಂದರ್ಭದಲ್ಲಿ ಬಳಸಿದ ಘೋಷಣೆಯನ್ನು ಈ ಚುನಾವಣಾ ಪ್ರಚಾರದಲ್ಲೂ ಮುಂದುವರಿಸಿದೆವು. ಇವತ್ತಿನ ಪರಿಸ್ಥಿತಿಯಲ್ಲಿ ಈ ಘೋಷಣೆಯನ್ನು ಭೂಸ್ವಾಧೀನ ನೀತಿಯ ಮುಂದುವರಿಕೆಯೆಂದು ಜನರು ಭಾವಿಸಿ ಹಳೆಯ ನೆನಪುಗಳನ್ನು ತರುವುದರ ಮೂಲಕ ಗ್ರಾಮೀಣ ಜನರನ್ನು ಎಡರಂಗದಿಂದ ದೂರ ಉಳಿಸಿತು. ಮುಂದುವರಿದು, ತೀವ್ರ ಕಾರ್ಷಿಕ ಬಿಕ್ಕಟ್ಟು ಮತ್ತು ಕೃಷಿ ಕಾನೂನುಗಳ ವಾಪಸಾತಿಗಾಗಿ ಹಾಗೂ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧವಾಗಿಸುವ ಸಲುವಾಗಿನ ರೈತರ ಹೋರಾಟದ ಇವತ್ತಿನ ಪರಿಸ್ಥಿತಿಯಲ್ಲಿ, ರೈತರಿಂದ ಜಮೀನು ಸ್ವಾಧೀನಪಡಿಸಿಕೊಳ್ಳುವ ಯಾವುದೇ ಮಾತು, ಮುಖ್ಯವಾಗಿ ಅವರು ಭೂಮಾಫಿಯಾ ಭಯೋತ್ಪಾದನೆಗೆ ಒಳಗಾಗಿರುವಾಗ, ರೈತಾಪಿ ಜನರನ್ನು ನಮ್ಮಿಂದ ಮತ್ತಷ್ಟು ದೂರವಾಗಿಸುತ್ತದೆಯಷ್ಟೆ.

ಅಸ್ಮಿತೆಯ ರಾಜಕೀಯ: ಅಸ್ಮಿತೆಯ ರಾಜಕೀಯದ ಪ್ರಭಾವವನ್ನು ಕೀಳಂದಾಜು ಮಾಡಿದ್ದರಿಂದಾಗಿ ಈ ಅಂಶಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವಲ್ಲಿ ನಮ್ಮ ವೈಫಲ್ಯ ಉಂಟಾಯಿತು. ಈ ಮೂರು ವಿಷಯಗಳಲ್ಲಿ ಅಲ್ಪಸಂಖ್ಯಾತರ ಸ್ಥಾನಮಾನ ಹಾಗೂ ಕಲ್ಯಾಣದ ವಿಚಾರಕ್ಕಾಗಿ ರಚಿಸಿದ್ದ ಸಾಚಾರ್ ಸಮಿತಿಯು ಭದ್ರತೆ, ನ್ಯಾಯ, ಅಸ್ಮಿತೆಯನ್ನು ಗುರುತಿಸಿತು, ಆದರೆ ನಮ್ಮ ಹೆಚ್ಚಿನ ಗಮನ ಪ್ರಥಮವಾಗಿ ಭದ್ರತೆಯ ಬಗ್ಗೆ ಮಾತ್ರ ಇತ್ತು. ಎಡರಂಗ ಸರ್ಕಾರದ ಅಡಿಯಲ್ಲಿ ಕೂಡ ನಂತರದ ವರ್ಷಗಳಲ್ಲಿ ನಮ್ಮ ಪಕ್ಷವು ಭದ್ರತೆಯ ವಿಷಯಕ್ಕೆ ಮಾತ್ರ ಹೆಚ್ಚಿನ ಒತ್ತು ನೀಡಿದ್ದು ಅಲ್ಪಸಂಖ್ಯಾತರ ಮಹತ್ವಾಕಾಂಕ್ಷೆಗಳನ್ನು ಪೂರೈಸಲಿಲ್ಲ. ಎಡರಂಗ ಸರ್ಕಾರದ ಆಡಳಿತದಿಂದಾಗಿ ಹೆಚ್ಚೂ ಕಡಿಮೆ ನಾಲ್ಕು ದಶಕಗಳ ಕಾಲ ಯಾವುದೇ ಕೋಮು ಗಲಭೆ ಅಥವಾ ಘಟನೆಗಳಿಲ್ಲದೇ ಕೋಮುಸಾಮರಸ್ಯವನ್ನು ಕಾಪಾಡಿದ ಸಂಗತಿಯನ್ನು ಅಲ್ಪಸಂಖ್ಯಾತರು 'ಹೌದು' ಎಂದು ಒಪ್ಪಿಕೊಂಡಿದ್ದಾರೆ. ಉತ್ತಮ ಬದುಕಿಗಾಗಿ, ಉದ್ಯೋಗಕ್ಕಾಗಿನ ಅವರ ಹಂಬಲ ಬಹುತೇಕ ಪರಿಹಾರ ಕಾಣದೇ ಹಾಗೇ ಉಳಿದುಹೋಯಿತು. ಇದನ್ನು ಸರಿಪಡಿಸಬೇಕಾದ ಅಗತ್ಯವಿದೆ ಮತ್ತು ಸಮತೋಲನದ ಧೋರಣೆಯನ್ನು ತಳೆಯಬೇಕಾಗಿದೆ. ಭದ್ರತೆಯ ವಿಷಯದ ಜತೆಯಲ್ಲಿಯೇ ಅಸ್ಮಿತೆ ಹಾಗೂ ನ್ಯಾಯದ ವಿಷಯಗಳನ್ನೂ ವರ್ಗ ರಾಜಕೀಯ ಹಾಗೂ ಹೋರಾಟದ ಭಾಗವಾಗಿ ತೆಗೆದುಕೊಳ್ಳಬೇಕು, ವರ್ಗಗಳು ಹಾಗೂ ವರ್ಗ ಹೋರಾಟವನ್ನು ನಿರಾಕರಿಸುವ ರೀತಿಯಲ್ಲಿ ವರ್ಗ ವಿಷಯಗಳ ಮೇಲೆ ಅಸ್ಮಿತೆಯ ರಾಜಕೀಯ ಪ್ರಾಬಲ್ಯ ಸಾಧಿಸದಿರುವಂತೆ ಎಚ್ಚರ ವಹಿಸಬೇಕು.

ಪರಿಶಿಷ್ಟ ಜಾತಿಗಳ ನಿರ್ದಿಷ್ಟ ಸಮಸ್ಯೆಗಳನ್ನು ಸರಿಯಾಗಿ ಅಂದಾಜು ಮಾಡಿ ಪರಿಹಾರ ಒದಗಿಸಬೇಕು. ಆದಿವಾಸಿಗಳ ಸಮಸ್ಯೆಗಳು, ಮುಖ್ಯವಾಗಿ ಉತ್ತರ ಬಂಗಾಳದಲ್ಲಿ, ಮತ್ತು ಜನರ ಐಕ್ಯತೆಯನ್ನು ಒಡೆಯುವ ಸಲುವಾಗಿ ಅತಿರೇಕದ ದೇಶಭಕ್ತಿಯನ್ನು ಕೆರಳಿಸುವ ಬಿಜೆಪಿ ಮತ್ತು ಟಿಎಂಸಿಗಳ ಪ್ರಯತ್ನಗಳನ್ನು ಸರಿಯಾಗಿ ನಿಭಾಯಿಸಬೇಕು.

ಪುಟ 14 ನೋಡಿ

ಎಲ್‌ಪಿಜಿ ಬೆಲೆ ನಾಗಾಲೋಟ 1000 ದತ್ತ: ಏಳು ವರ್ಷಗಳಲ್ಲಿ ದುಪ್ಪಟ್ಟು

ನ್ಯೂಇಂಡಿಯಾ ನ್ಯೂಸ್

ಈ ಮೊದಲು ಪೆಟ್ರೋಲ್ ಬೆಲೆ 100ರೂ.ದಾಟಿತ್ತು. ಡೀಸೆಲ್ ಬೆಲೆ ಅದನ್ನು ಹಿಂಬಾಲಿಸುತ್ತಿರುವಂತೆ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್ (ಎಲ್‌ಪಿಜಿ) ಬೆಲೆಯೂ ಸ್ಪರ್ಧೆಗಿಳಿದಿದೆ. 14.2 ಕೆ.ಜಿ.ಸಿಲಿಂಡರ್‌ನ ಬೆಲೆ 1000ರೂ.ನತ್ತ ಧಾವಿಸುತ್ತಿದೆ. ಸಪ್ಟಂಬರ್ 1 ರಂದು ಮತ್ತೆ ರೂ.25 ಹೆಚ್ಚಳ ಮಾಡಲಾಗಿದೆ. ಸತತ ಮೂರನೇ ತಿಂಗಳು ಬೆಲೆ ಏರಿಕೆಯ ಬಿಸಿ ಗ್ರಾಹಕರಿಗೆ ತಟ್ಟಿದೆ. ಇದರ ಪರಿಣಾಮವಾಗಿ ಬೆಂಗಳೂರಿನಲ್ಲಿ ಎಲ್‌ಪಿಜಿ ಸಿಲಿಂಡರ್ ಬೆಲೆ ಈಗ ರೂ.887.50 ದೆಹಲಿಯಲ್ಲಿ 884.50 ರೂ.ಕೊಲ್ಕತ್ತಾದಲ್ಲಿ 911ರೂ., ಮುಂಬೈಯಲ್ಲಿ 884.50ರೂ. ಮತ್ತು ಚೆನ್ನೈನಲ್ಲಿ 900.50ರೂ.

ತೈಲ ಕಂಪನಿಗಳು ಪ್ರತಿ ತಿಂಗಳು 1 ಹಾಗೂ 15ರಂದು ಎಲ್‌ಪಿಜಿ ಬೆಲೆಗಳ ಪರಿಶೀಲನೆ ನಡೆಸುತ್ತಿದ್ದು ಆಗಸ್ಟ್ 17, 2021 ರಂದು 25 ರೂ., ಅದಕ್ಕೂ ಮೊದಲು ಜುಲೈ 1, 2021 ರಂದು 25.50 ರೂ. ಏರಿಸಲಾಗಿತ್ತು..

ಬೆಂಗಳೂರಿನಲ್ಲಿ ಈ ವರ್ಷ ಎಲ್‌ಪಿಜಿ ದರಗಳು ಹೀಗಿದ್ದವು:

ಜನವರಿ 2021	ರೂ. 697.00
ಫೆಬ್ರುವರಿ	772.00
ಮಾರ್ಚ್	822.00
ಎಪ್ರಿಲ್	812.00
ಮೇ	812.00
ಜೂನ್	812.00
ಜುಲೈ	837.50
ಆಗಸ್ಟ್	862.50
ಸಪ್ಟಂಬರ್	887.50

2021ರ ಆರಂಭದಿಂದ ಸರಾಸರಿ ರೂ.190, ಅಂದರೆ 27% ದರ ಏರಿಕೆಯಾಗಿದೆ.




ಫೆಬ್ರವರಿಯಲ್ಲಿ ರೂ.75, ಮಾರ್ಚ್‌ನಲ್ಲಿ ರೂ.50 ರೂಪಾಯಿ ದರ ಏರಿಕೆ ಮಾಡಲಾಗಿತ್ತು. ನಂತರ ಏಪ್ರಿಲ್‌ನಲ್ಲಿ 10 ರೂಪಾಯಿ ಇಳಿಕೆ ಮಾಡಲಾಯಿತು. ಮೇ-ಜೂನ್‌ನಲ್ಲಿ ಹೆಚ್ಚಳವಾಗಿರಲಿಲ್ಲ(5 ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳ ಸಮಯದಲ್ಲಿ ಪೆಟ್ರೋಲ್-ಡೀಸೆಲ್ ಬೆಲೆ 'ಪರಾಮರ್ಶೆ'ಗಳೂ ನಡೆದಿರಲಿಲ್ಲ). ನಂತರ ಮತ್ತೆ ಜುಲೈನಲ್ಲಿ ರೂ.25.5೦, ಮತ್ತು ಆಗಸ್ಟ್‌ನಲ್ಲಿ 25 ರೂಪಾಯಿ ಏರಿಕೆಗೊಂಡು ಇದೀಗ ಸಪ್ಟಂಬರ್ ಆರಂಭದಲ್ಲೇ ಮತ್ತೆ 25 ರೂ. ಹೆಚ್ಚಳ ಮಾಡಲಾಗಿದೆ.

ನವ-ಉದಾರವಾದಿ ತತ್ವದಿಂದಾಗಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳ ಮೇಲಿನ ಹತೋಟಿ ತೆಗೆದ ಮೇಲೆ ಎಲ್‌ಪಿಜಿ ಬೆಲೆಗಳೂ ಸತತವಾಗಿ ಏರುತ್ತಲೇ ಬಂದಿವೆ. ಬಿಜೆಪಿ ನೇತೃತ್ವದ ಬಿಜೆಪಿ ಸರಕಾರ 2014ರಲ್ಲಿ ಅಧಿಕಾರ ವಹಿಸಿಕೊಂಡಂದಿನಿಂದ ಅವು ಇನ್ನಷ್ಟು ವೇಗವಾಗಿ ಏರುತ್ತಿವೆ. 14.2 ಕೆಜಿ ಎಲ್‌ಪಿಜಿ ಸಿಲಿಂಡರ್ ದರ ಕಳೆದ ಏಳು ವರ್ಷಗಳಲ್ಲಿ ದುಪ್ಪಟ್ಟಿಗಿಂತಲೂ ಹೆಚ್ಚಾಗಿದೆ. 2014ರ ಮಾರ್ಚ್ 1 ರಂದು ಪ್ರತಿ ಸಿಲಿಂಡರ್‌ಗೆ ರೂ 410 ಇದ್ದದ್ದು ಈಗ ರೂ.887 ದಾಟಿದೆ.

ಆದರೆ ಬಿಜೆಪಿಯ ಕೇಂದ್ರ ಮುಖಂಡರ ಪ್ರಕಾರ ಇದು ಸಮಸ್ಯೆಯೇ ಅಲ್ಲ. ರಾಜ್ಯ ಪ್ರವಾಸಕ್ಕೆ ಬಂದಿರುವ ಅರುಣ್ ಸಿಂಗ್ ಸಪ್ಟಂಬರ್ ದರ ಏರಿಕೆ ಬಗ್ಗೆ ಕೇಳಿದಾಗ ಮತ್ತೆ-ಮತ್ತೆ ವಿಷಯಾಂತರ ಮಾಡಿ ಮೋದಿ ಸರಕಾರದ 'ಸಾಧನೆ'ಗಳ ರಾಗ ಹಾಡಲಾರಂಭಿಸಿದರು. ವರದಿಗಾರರು ಪಟ್ಟು ಹಿಡಿದಾಗ ಒಂದು ಪೆಟ್ರೋಲ್, ಒಂದು ಟೊಮೆಟೊ, ಒಂದು ಈರುಳ್ಳಿ ವಿಚಾರ ಇಟ್ಟುಕೊಂಡು ಚರ್ಚೆ ಮಾಡಬೇಡಿ ಎಂದರಂತೆ.!

ವ್ಯಂಗ್ಯಚಿತ್ರ ಕೃಪೆ: ಪ್ರಕಾಶ ಶೆಟ್ಟಿ, ಪ್ರಜಾವಾಣಿ



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ಜಿಡಿಪಿ ಬೆಳವಣಿಗೆ ದರ 20.1%ಕ್ಕೆ ಜಿಗಿತ!?

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ 20.1%ಕ್ಕೆ ಜಿಗಿದಿದೆ ಎಂದು ಅಂಕಿ-ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯ ಹರ್ಷ ವ್ಯಕ್ತ ಪಡಿಸಿದೆ.


ಜಿಡಿಪಿ ದತ್ತಾಂಶ ದೇಶ ಅರ್ಥವ್ಯವಸ್ಥೆ V ಆಕಾರದ ಚೇತರಿಕೆ ಪಡೆಯುತ್ತದೆ ಎಂದು ಸರಕಾರ ಹೇಳಿದ್ದನ್ನು ಸಾಬೀತು ಮಾಡಿದೆ ಎಂದು ಸರಕಾರದ ಮುಖ್ಯ ಆರ್ಥಿಕ ಸಲಹೆಗಾರರು ಇನ್ನಷ್ಟು ಸಂತೋಷದಿಂದ ಹೇಳಿದ್ದಾರೆ.

ಆದರೆ ಕಳೆದ ವರ್ಷ ಇದೇ ಅವಧಿಯಲ್ಲಿ 24.3% ಕುಸಿತ ಕಂಡಿತ್ತು ಎಂಬುದನ್ನು ಅನುಷ್ಠಾನ ಮಂತ್ರಾಲಯದ ಮಾಹಿತಿಯೇ ಹೇಳುತ್ತದೆ. ಅಂದರೆ ಇದು ಕಳೆದ ವರ್ಷದ ಕುಸಿತದ ಮೇಲೆ ಆಗಿರುವ 'ಏರಿಕೆ', ನಿಜವಾದ ಏರಿಕೆಯಲ್ಲ. ಕಳೆದ ನಾಲ್ಕು ಹಣಕಾಸು ವರ್ಷಗಳ ಮೊದಲ ತ್ರೈಮಾಸಿಕದ ಅಂಕಿ-ಅಂಶಗಳನ್ನು ನೋಡಿದಾಗ ಇದು ಸ್ಪಷ್ಟವಾಗಿ ಕಾಣುತ್ತದೆ. ಅವು ಹೀಗಿವೆ:

2017 ರ ಮೊದಲ ತ್ರೈಮಾಸಿಕ ರೂ.	31.46ಲಕ್ಷ ಕೋಟಿ
2018ರ ಮೊದಲ ತ್ರೈಮಾಸಿಕ	33.84 ಲಕ್ಷ ಕೋಟಿ
2019ರ ಮೊದಲ ತ್ರೈಮಾಸಿಕ	35.66 ಲಕ್ಷ ಕೋಟಿ
2020ರ ಮೊದಲ ತ್ರೈಮಾಸಿಕ	26.95 ಲಕ್ಷ ಕೋಟಿ
2021ರ ಮೊದಲ ತ್ರೈಮಾಸಿಕ	32.38ಲಕ್ಷ ಕೋಟಿ

ಅಂದರೆ ಇದು ಕೊವಿಡ್-ಪೂರ್ವದ 2019ರ ಮೊದಲ ತ್ರೈಮಾಸಿಕಕ್ಕಿಂತ ಕಡಿಮೆ ಮಾತ್ರವಲ್ಲ, ಅದರ ಹಿಂದಿನ ವರ್ಷದ ಮೊದಲ ತ್ರೈಮಾಸಿಕಕ್ಕಿಂತಲೂ ಕಡಿಮೆ, ಸುಮಾರು 1.5ಲಕ್ಷ ಕೋಟಿ ರೂ.ಗಳಷ್ಟು, ಅಂದರೆ 4%ದಷ್ಟು ಕಡಿಮೆ!

ಹೀಗಿದೆ ಜಿಡಿಪಿ ಬೆಳವಣಿಗೆಯ ಸಂಪೂರ್ಣ ಚಿತ್ರ!



ವ್ಯಂಗ್ಯಚಿತ್ರ ಕೃಪೆ: ಮಂಜುಲ್, ಫೇಸ್‌ಬುಕ್

ರೈತ ಪ್ರತಿಭಟನಾಕಾರರ 'ತಲೆ ಒಡೆಯಿರಿ' ಎಂಬ ಆದೇಶ ನೀಡಿದ ಅಧಿಕಾರಿಗೆ ಶಿಕ್ಷೆಯಿಲ್ಲ-'ವರ್ಗಾವಣೆ'

ಪ್ರಧಾನ ಮಂತ್ರಿಗಳು ಪಂಜಾಬಿನ ಅಮೃತಸರದಲ್ಲಿ ಜಾಲಿಯಾನ್‌ವಾಲಾ ಬಾಗ್ ಜನರಲ್ ಡಾಯರನ ಹತ್ಯಾಕಾಂಡದ ಹುತಾತ್ಮರ ಸ್ಮಾರಕದ 'ನವೀಕರಣ'ವನ್ನು ಉದ್ಘಾಟಿಸುತ್ತಿದ್ದಾಗ ಹರ್‍ಯಾಣದ ಕರ್ನಾಲ್‌ನಲ್ಲಿ ಮುಖ್ಯಮಂತ್ರಿಗಳ ವಿರುದ್ಧ ರೈತರ ಪ್ರತಿಭಟನೆಯ ಸಂದರ್ಭದಲ್ಲಿ ಅವರನ್ನು ತಡೆಯಿರಿ, ಅಗತ್ಯಬಿದ್ದರೆ ತಲೆ ಒಡೆದರೂ ಸರಿಯೇ ಎಂದು ಪೋಲೀಸರಿಗೆ ಹೇಳುತ್ತಿರುವ ವಿಡಿಯೋ ವೈರಲ್ ಆಗಿದ್ದ ಎಸ್‌ಡಿಎಂ ಆಯುಷ್ ಸಿನ್ಹಾರವರ ಕ್ರಮವನ್ನು ಮುಖ್ಯಮಂತ್ರಿಗಳು ಸಮರ್ಥಿಸಿಕೊಂಡರು, ಅವರು ಬಳಸಿದ ಮಾತು ಸರಿಯಿರಲಿಕ್ಕಿಲ್ಲ, ಆದರೆ ಕ್ರಮ ಸರಿಯಾಗಿತ್ತು ಎಂದು ಹೇಳಿದರು.

ವೈರಲ್ ಆದ ವೀಡಿಯೋದಲ್ಲಿ ಕೇಳಿರುವ ಆತನ ಮಾತುಗಳು ಹೀಗಿವೆ: "ಎಲ್ಲರನ್ನೂ ಎತ್ತಿ-ಎತ್ತಿ ಹಿಂದಕ್ಕೆ ಹೊಡೆಯಿರಿ. ಏನೇ ಆಗಲಿ, ಈ ನಾಕಾವನ್ನು ಮುರಿಯಲು ನಾವು ಬಿಡಬಾರದು. ನಮ್ಮ ಬಳಿ ಸಾಕಷ್ಟು ಪಡೆಗಳಿವೆ. ನಾವು ಎರಡು ದಿನ ಮಲಗಿಲ್ಲ. ಆದರೆ ತಾವುಗಳು ಸ್ವಲ್ಪ ನಿದ್ದೆ ಮಾಡಿ ಇಲ್ಲಿಗೆ ಬರಬೇಕು. ನನ್ನ ಬಳಿ ಯಾವುದೇ ಮನುಷ್ಯ ದಾಟಿಕೊಂಡು ಬರಲು ಆಗಬಾರದು. ಏನಾದರೂ ಬಂದರೆ, ಅವನ ತಲೆ ಒಡೆದಿರಬೇಕು. ನಿಮಗೆ ಇದು ಕ್ಲಿಯರ್".

ರೈತರು ಮತ್ತು ಪ್ರತಿಪಕ್ಷಗಳವರು ಮಾತ್ರವಲ್ಲ, ಈ ಮಾತುಗಳನ್ನು ಕೇಳಿದ ಮತ್ತು ನಿಜವಾಗಿ ಸಂಭವಿಸಿದ್ದನ್ನು ಗಮನಿಸಿದ ನಿವೃತ್ತ ಅಧಿಕಾರಿಗಳಿಂದಲೂ ಈ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹ ಗಟ್ಟಿಯಾದಾಗ ಕೊನೆಗೂ 'ಶಿಕ್ಷೆ' ಎಂದು ಆತನನ್ನು ಹರ್‍ಯಾಣ ಸರಕಾರದ ನಾಗರಿಕರ ಸಂಪನ್ಮೂಲಗಳ ಮಾಹಿತಿ ಇಲಾಖೆ (ಸಿಆರ್‌ಐಡಿ)ಗೆ ಅಡಿಷನಲ್ ಸೆಕ್ರೆಟರಿಯಾಗಿ ಟ್ರಾನ್ಸ್‌ಫರ್ ಮಾಡಲಾಗಿದೆ ಎಂದು ಬಿಬಿಸಿ ನ್ಯೂಸ್‌ಹಿಂದಿ (ಸಪ್ಟಂಬರ್1) ವರದಿ ಮಾಡಿದೆ.

ಈ ಲಾಠೀ ಪ್ರಹಾರದಲ್ಲಿ ಸುಶೀಲ್ ಕಾಜಲ್ ಎಂಬ 55ವರ್ಷದ ರೈತ ಹೋರಾಟಗಾರ ಬಲಿಯಾಗಿದ್ದಾರೆ. ಅವರ ಮರಣೋತ್ತರ ಪರೀಕ್ಷೆ ನಡೆಸದೆಯೇ ಹೃದಯಾಘಾತದಿಂದ ನಿಧನರಾಗಿದ್ದಾರೆ ಎಂದು ಹೇಳಲಾಗಿದೆ ಎಂದು ಆರೋಪಿಸಿರುವ ಅಖಿಲ ಭಾರತ ಕಿಸಾನ್ ಸಭಾದ ನಿಯೋಗವೊಂದು ಅವರ ಊರಿಗೆ ಹೋಗಿ ಅವರ ತಾಯಿ ಮತ್ತು ಹೆಂಡತಿಯನ್ನು ಭೇಟಿ ಮಾಡಿದರು. ಅವರು ಹೇಳಿರುವ ಪ್ರಕಾರ ತೀವ್ರವಾಗಿ ಗಾಯಗೊಂಡಿದ್ದವರಿಗೆ 'ಪ್ರಥಮ ಚಿಕಿತ್ಸೆ' ಎಂಬುದರ ನಂತರ ಅವರು ಆಸ್ಪತ್ರೆ ಬಿಟ್ಟು ಹೋಗುವಂತೆ ಬಲವಂತ ಮಾಡಲಾಯಿತು. ಸುಶೀಲ್ ಅವರನ್ನು ಆಸ್ಪತ್ರೆಗೆ ಸೇರಿಸಲು ಪೋಲೀಸರು ಬಿಡಲಿಲ್ಲವಾದ್ದರಿದ ಮನೆಗೆ ಬಂದರು. ಅವರ ತಲೆಯ ಹಿಂಭಾಗದಲ್ಲಿ ಮತ್ತು ಭುಜದಲ್ಲಿ ಗಾಯಗಳಿದ್ದವು, ತೀವ್ರ ನೋವಿನಿಂದ ನರಳುತ್ತಿದ್ದರು. ಅದೇ ರಾತ್ರಿ ಅವರು ಸಾವಪ್ಪಿದರು. ಅವರ ಮುಖ ಮತ್ತು ಹೊಟ್ಟೆ ಊದಿಕೊಂಡಿತ್ತು, ಚರ್ಮ ನೀಲಿಯಾಗಿತ್ತು. ಇದರ ಆಧಾರದಲ್ಲಿ, ಸುಶೀಲ್ ಕಾಜಲ್ ತೀವ್ರ ಲಾಠೀ ಪ್ರಹಾರದಿಂದ ಉಂಟಾದ ಆಂತರಿಕ ಗಾಯ ಮತ್ತು ರಕ್ತಸ್ರಾವದಿಮದ ಸತ್ತಿದ್ದಾರೆ, ಅಂದರೆ ಅವರ ಹತ್ಯೆ ಯಾಗಿದೆ ಎಂಬ ತೀರ್ಮಾನಕ್ಕೆ ಎಐಕೆಎಸ್ ನಿಯೋಗ ಬಂದಿದೆ.

ಆ ದಿನ ಗಾಯಗೊಂಡ ಪ್ರತಿಭಟನಾಕಾರರ ಕೆಲವು ಚಿತ್ರಗಳು ಮತ್ತು ಅದರ ಆಧಾರದಲ್ಲಿ ಭಟಿಂಡಾದ ಕಲಾವಿದ ಗುರುಪ್ರೀತ್ ರಚಿಸಿದ ಕೃತಿ"ನಾವು ಭಾರತದ ಜನತೆ'












ರೈತರನ್ನು ಹಿಂಡುವ ನವ-ಉದಾರವಾದ ಮತ್ತು ಹಿಂದುತ್ವ ರಾಷ್ಟ್ರೀಯವಾದದ ಮೈತ್ರಿ



ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ರಾಜಕೀಯ ಸ್ವಾತಂತ್ರ್ಯದ ವರ್ಗಾವಣೆಯೊಂದಿಗೆ ಕೊನೆಗೊಳ್ಳದ ಸಾಮ್ರಾಜ್ಯಶಾಹಿಯ ದಾಳಿಯ ವಿರುದ್ಧ "ರಾಷ್ಟ್ರ"ವು ಬದುಕುಳಿದು ತನ್ನ ರಾಷ್ಟ್ರೀಯವಾದವನ್ನು ಮುಂದುವರಿಸಿಕೊಂಡು ಸಾಗಬೇಕು ಎಂದಾದರೆ ಅದನ್ನು ರೈತರ ಸಕ್ರಿಯ ಬೆಂಬಲದಿಂದ ಮಾತ್ರ ಸಾಧಿಸಬಹುದು. ಹಾಗಾಗಿ, ರೈತರ ಮೇಲೆ ದಬ್ಬಾಳಿಕೆ ಮಾಡುವ ಯಾವುದೇ ಅಭಿವೃದ್ಧಿಯ ಕಾರ್ಯತಂತ್ರವು ರಾಷ್ಟ್ರ ನಿರ್ಮಾಣದ ಯೋಜನೆಗೆ ವಿರುದ್ಧವಾಗುತ್ತದೆ. ಆದ್ದರಿಂದ ರೈತರನ್ನು ಹಿಂಡುವ ನವ-ಉದಾರವಾದದೊಂದಿಗೆ ಮೈತ್ರಿ ಹೊಂದಿರುವ ಹಿಂದುತ್ವವು, ಅದರ ದ್ವೇಷ ಕೆರಳಿಸುವ ಲಕ್ಷಣದ ಹೊರತಾಗಿಯೂ, ಅಲ್ಪಾವಧಿಯಲ್ಲಿ ಎಷ್ಟೇ ಯಶಸ್ವಿಯಾಗಲಿ, 'ರಾಷ್ಟ್ರೀಯವಾದ'ದ ಬಗ್ಗೆ ಎಷ್ಟೇ ಮಾತಾಡಲಿ, ಅಂತಿಮವಾಗಿ ಯಶಸ್ವಿಯಾಗದು.

ಎಲ್ಲರೂ ತಿಳಿದಿರುವಂತೆ ಮೂರನೆಯ ಜಗತ್ತಿನ ದೇಶಗಳ ವಿಮೋಚನಾ ಹೋರಾಟವನ್ನು ಪ್ರೇರೇಪಿಸಿದ ವಸಾಹತುಶಾಹಿ-ವಿರೋಧಿ ರಾಷ್ಟ್ರೀಯವಾದವು, ಹದಿನೇಳನೇ ಶತಮಾನದಲ್ಲಿ ಯುರೋಪಿನಲ್ಲಿ ಹೊರಹೊಮ್ಮಿದ ಬೂರ್ಜ್ವಾ ರಾಷ್ಟ್ರೀಯವಾದಕ್ಕಿಂತ ಸಂಪೂರ್ಣವಾಗಿ ಭಿನ್ನ ಸ್ವರೂಪದ್ದಾಗಿತ್ತು. ಕೆಲವು ಪ್ರಗತಿಪರರೂ ಸೇರಿದಂತೆ, ಪಾಶ್ಚಾತ್ಯ ದೇಶಗಳಲ್ಲಿ ಎಲ್ಲ "ರಾಷ್ಟ್ರೀಯವಾದ"ಗಳನ್ನೂ ಸಮರೂಪದವು ಮತ್ತು ಪ್ರತಿಗಾಮಿ ಸ್ವಭಾವದವುಗಳೆಂದು ಪರಿಗಣಿಸುವ ಒಂದು ಪ್ರವೃತ್ತಿ ಇದೆ. ಇವೆರಡೂ ರೂಪದ ರಾಷ್ಟ್ರೀಯವಾದಗಳ ನಡುವೆ ಹಲವಾರು ನಿರ್ಣಾಯಕ ವ್ಯತ್ಯಾಸಗಳಿದ್ದರೂ ಸಹ, ವಸಾಹತುಶಾಹಿ-ವಿರೋಧಿ ರಾಷ್ಟ್ರೀಯವಾದವು ಯುರೋಪಿಯನ್ ಬೂರ್ಜ್ವಾ ರಾಷ್ಟ್ರೀಯವಾದಕ್ಕಿಂತ ಭಿನ್ನವಾದದ್ದಲ್ಲ ಎಂದೇ ಅವರು ಪರಿಗಣಿಸುತ್ತಾರೆ.

ಈ ರಾಷ್ಟ್ರೀಯವಾದಗಳ ನಡುವಿನ ಹಲವು ವ್ಯತ್ಯಾಸಗಳ ಪೈಕಿ ಕನಿಷ್ಠ ಮೂರು ವ್ಯತ್ಯಾಸಗಳು ಮಹತ್ವಪೂರ್ಣವಾಗಿವೆ. ಮೊದಲನೆಯದು, ಯುರೋಪಿಯನ್ ರಾಷ್ಟ್ರೀಯವಾದವು ಮೊದಲಿನಿಂದಲೂ ಸಾಮ್ರಾಜ್ಯ-ದಾಹದಿಂದ ಕೂಡಿತ್ತು. ಎರಡನೆಯದು, ಎಲ್ಲರನ್ನೂ ಒಳಗೊಳ್ಳುವ ಲಕ್ಷಣವನ್ನು ಯಾವತ್ತೂ ಹೊಂದಿರಲಿಲ, ಬದಲಿಗೆ ಯುರೋಪಿಯನ್ ರಾಷ್ಟ್ರೀಯವಾದವು ಸದಾ ಒಂದು "ಒಳಗಿನ ಶತ್ರು"ವನ್ನು ಗುರುತಿಸಿಕೊಂಡಿತ್ತು. ಮೂರನೆಯದು, "ರಾಷ್ಟ್ರ"ವನ್ನು ದೈವತ್ವಕ್ಕೇರಿಸಿ, ಅದನ್ನು ಜನರಿಗಿಂತ ಎತ್ತರದಲ್ಲಿ ಇರಿಸಿದ ಯುರೋಪಿಯನ್ ರಾಷ್ಟ್ರೀಯವಾದವು, ಜನರಿಂದ ತ್ಯಾಗಗಳನ್ನು ಬಯಸಿತೇ ವಿನಃ, ಪ್ರತಿಯಾಗಿ ಜನರಿಗೆ ಏನೂ ನೀಡಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಸಾಮ್ರಾಜ್ಯ ಸಂಪಾದನೆಯಲ್ಲಿ ತೊಡಗದ, ಮತ್ತು ಎಲ್ಲರನ್ನೂ ಒಳಗೊಂಡು ಜನ ಜೀವನವನ್ನು ಸುಧಾರಿಸುವುದೇ ವಸಾಹತುಶಾಹಿ-ವಿರೋಧಿ ರಾಷ್ಟ್ರೀಯವಾದದ ಮೂಲೋದ್ದೇಶವಾಗಿತ್ತು. ರಾಷ್ಟ್ರೀಯ ಬೂರ್ಜ್ವಾ ವರ್ಗದ ಜೊತೆಗೆ ಕಾರ್ಮಿಕರು ಮತ್ತು ರೈತರನ್ನೂ ಒಳಗೊಂಡಂತೆ ಬಹು-ವರ್ಗಗಳು ಒಟ್ಟುಗೂಡಿ ನಡೆಸಿದ ವಸಾಹತುಶಾಹಿ-ವಿರೋಧಿ ಹೋರಾಟದ ಮೇಲೆ ಯುರೋಪಿಯನ್ ಮಾದರಿಯ ಬೂರ್ಜ್ವಾ ರಾಷ್ಟ್ರೀಯವಾದದ ಮುದ್ರೆ ಒತ್ತುವುದು ಸಾಧ್ಯವಿರಲಿಲ್ಲ.

ವಸಾಹತುಶಾಹಿ ದಬ್ಬಾಳಿಕೆಯಲ್ಲಿ ಅತಿ ಹೆಚ್ಚು ನಲುಗಿದ್ದ ಮತ್ತು ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ರೈತಾಪಿಯೇ ಒಂದು ಮಹತ್ವದ ವರ್ಗವಾಗಿದ್ದರಿಂದ, ಕೆಲವು ಬರಹಗಾರರು ವಸಾಹತುಶಾಹಿ-ವಿರೋಧಿ ರಾಷ್ಟ್ರೀಯವಾದವನ್ನು "ರೈತ ರಾಷ್ಟ್ರೀಯವಾದ" ಎಂದೂ ಕರೆದಿದ್ದಾರೆ. ವಿಷಯವೆಂದರೆ, ರಾಜಕೀಯ ಸ್ವಾತಂತ್ರ್ಯದ ವರ್ಗಾವಣೆಯೊಂದಿಗೆ ಕೊನೆಗೊಳ್ಳದ ಸಾಮ್ರಾಜ್ಯಶಾಹಿಯ ದಾಳಿಯ ವಿರುದ್ಧ "ರಾಷ್ಟ್ರ"ವು ಬದುಕುಳಿದು ತನ್ನ ಈ ರಾಷ್ಟ್ರೀಯವಾದವನ್ನು ಮುಂದುವರಿಸಿಕೊಂಡು ಸಾಗಬೇಕು ಎಂದಾದರೆ ಅದನ್ನು ರೈತರ ಸಕ್ರಿಯ ಬೆಂಬಲದಿಂದ ಮಾತ್ರ ಸಾಧಿಸಬಹುದು. ಹಾಗಾಗಿ, ರೈತರ ಮೇಲೆ ದಬ್ಬಾಳಿಕೆ ಮಾಡುವ ಯಾವುದೇ ಅಭಿವೃದ್ಧಿಯ ಕಾರ್ಯತಂತ್ರವು ರಾಷ್ಟ್ರ ನಿರ್ಮಾಣದ ಯೋಜನೆಗೆ ವಿರುದ್ಧವಾಗುತ್ತದೆ. ನಗುವವರ ಎದುರಿಗೆ ಎಡವಿ ಬಿದ್ದ ರೀತಿಯಲ್ಲಿ ಸಾಮ್ರಾಜ್ಯಶಾಹಿಯ ಎದುರಿನಲ್ಲೇ ರಾಷ್ಟ್ರವನ್ನು ಚೂರು ಚೂರು ಮಾಡಿದಂತಾಗುತ್ತದೆ.

ಸಾಮ್ರಾಜ್ಯಶಾಹಿಯ ಬಿಗಿ ಮುಷ್ಠಿಯಿಂದ ಆಗ ತಾನೇ ವಿಮೋಚನೆಗೊಂಡ ಸನ್ನಿವೇಶದಲ್ಲಿ ಮೂರನೇ ಜಗತ್ತಿನ ದೇಶಗಳು ತಕ್ಷಣವೇ ಬಂಡವಾಳಶಾಹಿ ಅಭಿವೃದ್ಧಿ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವುದು ಶಕ್ಯವಿರಲಿಲ್ಲ. ಏಕೆಂದರೆ, ರೈತ ಕೃಷಿಯೂ ಸೇರಿದಂತೆ ಕಿರು ಉತ್ಪಾದನಾ ವಲಯವನ್ನು ಅತಿಕ್ರಮಿಸುವ ಮತ್ತು ದುರ್ಬಲಗೊಳಿಸುವ ಪ್ರವೃತ್ತಿಯು ಬಂಡವಾಳಶಾಹಿಯಲ್ಲಿ ಅಂತರ್ಗತ ವಾಗಿದೆ. ಇದು ಬಂಡವಾಳಶಾಹಿಯ ಒಂದು ವಿಶಿಷ್ಟ ಲಕ್ಷಣ. ಈ ಅಂಶವನ್ನು ವಸಾಹತುಶಾಹಿ-ವಿರೋಧಿ ವಿಮೋಚನಾ ಚಳುವಳಿಯು ಗುರುತಿಸಿತ್ತು. ಇಂತಹ ವಸಾಹತುಶಾಹಿ-ವಿರೋಧಿ ವಿಮೋಚನಾ ಚಳುವಳಿಗಳನ್ನು ಕಮ್ಯುನಿಸ್ಟರು ಮುನ್ನಡೆಸದಿದ್ದರೂ ಸಹ, ಈ ಚಳುವಳಿಯ ನಾಯಕತ್ವವು ಬಂಡವಾಳಶಾಹಿಗಳಿಗೆ ಕಾರ್ಯಾಚರಣೆ ಮಾಡುವ ಅವಕಾಶವನ್ನು ಕೊಡುವುದರ ಜೊತೆಯಲ್ಲೇ ಅದರ ಮೇಲೆ ನಿಯಂತ್ರಣವನ್ನೂ ಸಾಧಿಸಿತು. ಅವರು ಅನುಸರಿಸಿದ ಅಭಿವೃದ್ಧಿಯ ಈ ಕಾರ್ಯತಂತ್ರವನ್ನು ನಿಯಂತ್ರಣ ನೀತಿಯ (ಡಿರಿಜಿಸ್ಟ್) ಆಳ್ವಿಕೆ ಎಂದು ಕರೆಯಲಾಗಿದೆ.

ಈ ಡಿರಿಜಿಸ್ಟ್ ಕಾರ್ಯತಂತ್ರದ ಅಡಿಯಲ್ಲಿ, ಭೂ ಮರುಹಂಚಿಕೆಯ ಪ್ರಕ್ರಿಯೆಯು ಆಮೂಲಾಗ್ರವಾಗಿ ನಡೆಯದ ಕಾರಣದಿಂದಾಗಿ, ಕೃಷಿಯಲ್ಲಿ ರೈತರ ನಡುವೆ ವಿಭಿನ್ನೀಕರಣದ ಪ್ರಕ್ರಿಯೆ ನಡೆಯಿತು ಮತ್ತು ಈ ಕಾರಣದಿಂದಾಗಿ ಕೃಷಿ ವಲಯದೊಳಗೇ ಬಂಡವಾಳಶಾಹಿಯ ಅಭಿವೃದ್ಧಿಯು ಭೂಮಾಲೀಕ ಬಂಡವಾಳಶಾಹಿಯ ಜೊತೆಗೇ ಸಾಗಿತು. ಆದಾಗ್ಯೂ, ಹೊರಗಿನ ಬಂಡವಾಳಗಾರರಿಗೆ ಈ ವಲಯದ ಮೇಲೆ ಯಾವುದೇ ಪ್ರಭಾವ ಬೀರಲು ಅಥವಾ ಹಿಡಿತ ಸಾಧಿಸಲು ಅವಕಾಶವಿರಲಿಲ್ಲ. ವಿದೇಶಿ ಕೃಷಿ ವ್ಯವಹಾರ-ಕಂಪೆನಿಗಳ ಮಾತಿರಲಿ, ದೇಶೀಯ ಏಕಸ್ವಾಮ್ಯ ಬೂರ್ಜ್ವಾವರ್ಗದಿಂದಲೂ ರೈತ ಕೃಷಿಯನ್ನು ರಕ್ಷಿಸಲಾಯಿತು.

ನವ-ಉದಾರವಾದಿ ಆಳ್ವಿಕೆಯ ಆಗಮನದೊಂದಿಗೆ ಈ ಎಲ್ಲ ರಕ್ಷಣೆಗಳು ಇಲ್ಲವಾದವು. ರೈತ ಕೃಷಿಯನ್ನು "ಹೊರಗಿನ ಬಂಡವಾಳಶಾಹಿಗಳಿಂದ" ರಕ್ಷಿಸುವ ಸಲುವಾಗಿ ಪ್ರಭುತ್ವದ ನಿಯಂತ್ರಣಗಳಲ್ಲಿ ಸಿಲುಕಿದ ಬಂಡವಾಳಶಾಹಿಯ ಬದಲು, ಅನಿರ್ಬಂಧಿತ ಬಂಡವಾಳಶಾಹಿ ಅಭಿವೃದ್ಧಿಯನ್ನು ಹರಿಯಬಿಡುವುದೇ ನವ-ಉದಾರವಾದದ ಉದ್ದೇಶವಾಗಿದೆ. ಆದ್ದರಿಂದ, ನವ-ಉದಾರವಾದವು ರೈತ ಕೃಷಿಯನ್ನು ದುರ್ಬಲಗೊಳಿಸುತ್ತದೆ.

ಭಾರತದಲ್ಲಿ ರೈತ ಕೃಷಿಯ ಮೇಲೆ ಹಲವು ರೀತಿಗಳಲ್ಲಿ ಹಲ್ಲೆಯಾಗುತ್ತದೆ. ಮೊದಲನೆಯದಾಗಿ, ಬೆಲೆ ಏರಿಳಿತಗಳು, ಅದರಲ್ಲೂ ವಿಶೇಷವಾಗಿ ತೀಕ್ಷ್ಣ ಬೆಲೆ ಕುಸಿತಗಳು ರೈತರಿಗೆ ಆಘಾತಕಾರಿಯಾಗುತ್ತವೆ. ಸರ್ಕಾರಿ ಸಂಸ್ಥೆಗಳ ಮಾರುಕಟ್ಟೆ ಮಧ್ಯಪ್ರವೇಶದ ಮೂಲಕ ಆಹಾರ ಮತ್ತು ರೊಕ್ಕದ-ಬೆಳೆಗಳ ಕುಸಿತವನ್ನು ಡಿರಿಜಿಸ್ಟ್ ಆಡಳಿತದಲ್ಲಿ ತಪ್ಪಿಸಲಾಗಿತ್ತು. ಹಿಂದಿನ ಯಾವುದೇ ಸರ್ಕಾರವೂ, ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬರುವ ಹಿಂದಿನ ಸರ್ಕಾರಗಳು ಆಹಾರ ಬೆಳೆಗಳಿಗೆ ಒದಗಿಸುತ್ತಿದ್ದ ರಕ್ಷಣೆಯನ್ನು ಹಿಂತೆಗೆದುಕೊಂಡಿಲ್ಲವಾದರೂ, ಡಿರಿಜಿಸ್ಟ್ ಆಡಳಿತದಲ್ಲಿ ಸರ್ಕಾರಿ ಸಂಸ್ಥೆಗಳ ಮಾರುಕಟ್ಟೆ ಮಧ್ಯಪ್ರವೇಶವನ್ನು ನಿಲ್ಲಿಸುವ ಮೂಲಕ ರೊಕ್ಕದ-ಬೆಳೆಗಳಿಗೆ ನೀಡಲಾದ ರಕ್ಷಣೆಯನ್ನು ಹಿಂತೆಗೆದುಕೊಳ್ಳಲಾಗಿತ್ತು. ಪರಿಣಾಮವಾಗಿ, ಬೆಲೆ ಕುಸಿತದ ವರ್ಷಗಳಲ್ಲಿ ಸಾಲದ ಬಲೆಗೆ ಸಿಲುಕಿದ ರೈತರು, ಆನಂತರ ಸಾಲ ತೀರಿಸುವುದು ಎಂದಿಗೂ ಸಾಧ್ಯವಾಗಲಿಲ್ಲ.

ಎರಡನೆಯದಾಗಿ, ನವ-ಉದಾರ ಅವಧಿಯಲ್ಲಿ, ರೊಕ್ಕದ-ಬೆಳೆಗಳ ಮಾರಾಟದ ಬೆಲೆಗಳು ವಿಶ್ವ ಮಾರುಕಟ್ಟೆಯಲ್ಲಿ ನಿರ್ಧರಿಸಲ್ಪಡುತ್ತಿದ್ದ ಸಮಯದಲ್ಲಿ ಲಾಗುವಾಡುಗಳ ಬೆಲೆಗಳು ಹೆಚ್ಚಾದವು. ಬ್ಯಾಂಕುಗಳ ಖಾಸಗೀಕರಣದೊಂದಿಗೆ ರೈತರ ಸಾಲಗಳು ದುಬಾರಿಯಾದವು. ಒಟ್ಟು ಇಂತಿಷ್ಟು ಮೊತ್ತದ "ಆದ್ಯತಾ ವಲಯ"(ಇದರಲ್ಲಿ ಕೃಷಿಯು ಪ್ರಮುಖವಾಗಿದೆ) ಸಾಲಗಳನ್ನು ಒದಗಿಸಬೇಕೆಂಬ ನಿಯಮಗಳನ್ನು ಅನುಸರಿಸಲು ಬದ್ಧವಾಗಿದ್ದ ಖಾಸಗಿ ಬ್ಯಾಂಕುಗಳು ಈ ನಿಯಮಗಳನ್ನು ನಿರ್ಭಯವಾಗಿ ಉಲ್ಲಂಘಿಸಿದವು. ಈ ವಿಷಯದಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳ ಕಾರ್ಯನಿರ್ವಹಣೆಯು ಉತ್ತಮವಾಗಿದ್ದರೂ ಸಹ, "ಕೃಷಿ ಸಾಲ"ಗಳ ವ್ಯಾಖ್ಯಾನವನ್ನು ಸಡಿಲಗೊಳಿಸಿದರ ಲಾಭ ಪಡೆದು, ರೈತ ಕೃಷಿಗೆ ಸಾಲವನ್ನು ನಿರಾಕರಿಸುತ್ತವೆ. ಹೀಗೆ ರೈತರನ್ನು ಖಾಸಗಿ ಲೇವಾದೇವಿದಾರರ ತೆಕ್ಕೆಗೆ ತಳ್ಳಲಾಯಿತು. ಲೇವಾದೇವಿದಾರರು ರೈತರಿಂದ ವಿಪರೀತ ಬಡ್ಡಿ ವಸೂಲು ಮಾಡಿದರು.

ಮೂರನೆಯದಾಗಿ, ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯಂತಹ ಸೇವೆಗಳಿಗೆ ಮತ್ತು ಜೀವನ ನಿರ್ವಹಣೆಗಾಗಿ ಬಳಕೆಯಾಗುವ ಸರಕು-ಸರಂಜಾಮುಗಳಿಗೆ ಹಾಗೂ ಲಾಗುವಾಡುಗಳಿಗೆ ಏರಿಕೆಯಾದ ಬೆಲೆಗಳಿಗೆ ಹೋಲಿಸಿದಾಗ ರೈತರ ಫಸಲಿಗೆ ಸಿಗುವ ಬೆಲೆಗಳು ತೀರಾ ಕಡಿಮೆಯೇ. ಅವರ ಈ ಪರಿಸ್ಥಿತಿಗೆ, ವ್ಯಾಪಾರ ನಿಯಮಗಳನ್ನು ರೈತರ ವಿರುದ್ಧವಾಗಿ ಬದಲಾಯಿಸಿರುವುದೇ ಕಾರಣ ಎಂಬುದು ಕಂಡುಬರುತ್ತದೆ. ಎದ್ದು ಕಾಣುವ ಇನ್ನೊಂದು ಕಾರಣವೆಂದರೆ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುತ್ತಿದ್ದ ಸರ್ಕಾರವು ಈ ಅಗತ್ಯ ಸೇವೆಗಳನ್ನು ಖಾಸಗೀಕರಿಸಿದೆ. ನವ-ಉದಾರವಾದದ ಲಕ್ಷಣವೇ ಆಗಿರುವ ಈ ಕ್ರಮವು ರೈತರಿಗೆ ಅತ್ಯಂತ ದುಬಾರಿಯಾಗಿ ಪರಿಣಮಿಸಿದೆ.


ನಾಲ್ಕನೆಯದಾಗಿ, ಈ ಹಿಂದಿನ ಸರ್ಕಾರಗಳು ಹೊರಗಿನ ಬಂಡವಾಳಶಾಹಿಗಳ ಮತ್ತು ರೈತ ಕೃಷಿಯ ನಡುವೆ ಒಂದು ಸೇತುವೆಯಂತಿದ್ದವು. ನವ-ಉದಾರವಾದದ ಅಡಿಯಲ್ಲಿ ಈ ಸಂಬಂಧವು ಕೊನೆಗೊಂಡಿದೆ. ಬಂಡವಾಳಗಾರರು ರೈತರನ್ನು ನೇರವಾಗಿ ಸಂಪರ್ಕಿಸುತ್ತಾರೆ. ತಮ್ಮ ಏಜೆಂಟರ ಮೂಲಕ ಹಳ್ಳಿ ಹಳ್ಳಿಗಳಲ್ಲಿ ಕಾರ್ಯನಿರ್ವಹಿಸುವ ಬಹುರಾಷ್ಟ್ರೀಯ ಬೀಜ ಮತ್ತು ಕೀಟನಾಶಕ ಸಂಸ್ಥೆಗಳು ರೈತರಿಗೆ ಸಾಲವನ್ನೂ ಸಹ ಒದಗಿಸುತ್ತವೆ. ಒಮ್ಮೆ ರೈತನು ಈ ಸಂಸ್ಥೆಗಳ ಹಿಡಿತಕ್ಕೆ ಸಿಲುಕಿದರೆ, ಹೊರಬರುವುದು ಅಸಾಧ್ಯವೇ. ಗುತ್ತಿಗೆ ಕೃಷಿಯು ಈಗ ರೈತರ ಬಾಗಿಲಲ್ಲಿ ನಿಂತು ಕದ ತಟ್ಟುತ್ತಿದೆ. ವಿವಿಧ ವಿಧಾನಗಳ ಮೂಲಕ ಕೊಡಬೇಕಾಗಿದ್ದುದಕ್ಕಿಂತ ಕಡಿಮೆ ಹಣ ಕೊಟ್ಟು ರೈತರನ್ನು ಮೋಸಗೊಳಿಸಲಾಗುತ್ತಿದೆ.

ಮೇಲೆ ತಿಳಿಸಿದ ಅಂಶಗಳು ರೈತ ಕೃಷಿಯ ಮೇಲಿನ ಹಲ್ಲೆಗಳ ಸಮಗ್ರ ಪಟ್ಟಿಯಲ್ಲ. ಇವು ಕೆಲವು ಮಾತ್ರ. ಈ ಎಲ್ಲ ಬೆಳವಣಿಗೆಗಳ ಫಲಶೃತಿಯೆಂದರೆ, ಹೊರಲಾರದಷ್ಟು ಸಾಲ ಭಾರದಲ್ಲಿ ಸಿಲುಕಿದ ರೈತಾಪಿಯು ಗತಿಯಿಲ್ಲದಂತಾಗಿದೆ. 1995ರಿಂದ ಭಾರತದಲ್ಲಿ ಸುಮಾರು ನಾಲ್ಕು ಲಕ್ಷ ಮಂದಿ ರೈತರ ಆತ್ಮಹತ್ಯೆಯ ಪ್ರಕರಣಗಳು ರೈತಾಪಿಯ ನಿರ್ಗತಿಕತನದ ಸ್ಪಷ್ಟ ಲಕ್ಷಣವಾಗಿದೆ. ಪ್ರಸ್ತುತ ಸರ್ಕಾರವು ಆಹಾರ ಬೆಳೆಗಳಿಗೆ ಕೊಡುತ್ತಿದ್ದ ಬೆಲೆ-ಬೆಂಬಲವನ್ನು ಹಿಂತೆಗೆದುಕೊಳ್ಳುವ ಮೂಲಕ ರೈತ ಕೃಷಿಯ ಮೇಲಿನ ದಾಳಿಯನ್ನು ಇನ್ನೂ ಒಂದು ಹೆಜ್ಜೆ ಮುಂದೆ ಕೊಂಡೊಯ್ದಿದೆ. ಈ ದಾಳಿಯನ್ನು ವಿರೋಧಿಸಿ ಸಾವಿರಾರು ರೈತರು ದೆಹಲಿ ಗಡಿಯ ಬಳಿ ಒಂಬತ್ತು ತಿಂಗಳುಗಳಿಂದಲೂ ಪ್ರತಿಭಟನಾ-ಪ್ರದರ್ಶನ ನಡೆಸುತ್ತಿದ್ದಾರೆ.

ರೈತರ ಮೇಲಿನ ಈ ದಾಳಿಗಳು ಆಕಸ್ಮಿಕವೂ ಅಲ್ಲ ಅಥವಾ ಭಾರತಕ್ಕೆ ನಿರ್ದಿಷ್ಟವೂ ಅಲ್ಲ. ಅವು, ಬಂಡವಾಳದಲ್ಲಿ ಅಂತರ್ಗತವಾಗಿರುವ ಪ್ರವೃತ್ತಿಗಳನ್ನು ಅನುಸರಿಸಿವೆ. ಈ ಪ್ರವೃತ್ತಿಗಳನ್ನು ನಿರ್ವಸಾಹತೀಕರಣದ ನಂತರದ ಅನೇಕ ವರ್ಷಗಳ ಕಾಲ ಸ್ವಲ್ಪ ಮಟ್ಟಿಗೆ ನಿಯಂತ್ರಣದಲ್ಲಿಡಲಾಗಿತ್ತು. ಆದರೆ, ಈಗ, ನವ-ಉದಾರವಾದದ ಅಡಿಯಲ್ಲಿ ಈ ಪ್ರವೃತ್ತಿಗಳನ್ನು ಸ್ವೇಚ್ಛೆಯಾಗಿ ಬಿಟ್ಟುಬಿಡಲಾಗಿದೆ. ಹಾಗಾಗಿ, ರೈತ ಕೃಷಿಯು ಹಾನಿಗೀಡಾಗಿದೆ.

ಪುಟ 14 ನೋಡಿ

ಪ್ರಸ್ತುತ ಸರ್ಕಾರವು ಆಹಾರ ಬೆಳೆಗಳಿಗೆ ಕೊಡುತ್ತಿದ್ದ ಬೆಲೆ-ಬೆಂಬಲವನ್ನು ಹಿಂತೆಗೆದುಕೊಳ್ಳುವ ಮೂಲಕ ರೈತ ಕೃಷಿಯ ಮೇಲಿನ ದಾಳಿಯನ್ನು ಇನ್ನೂ ಒಂದು ಹೆಜ್ಜೆ ಮುಂದೆ ಕೊಂಡೊಯ್ದಿದೆ. ಈ ದಾಳಿಯನ್ನು ವಿರೋಧಿಸಿ ಸಾವಿರಾರು ರೈತರು ದೆಹಲಿ ಗಡಿಯ ಬಳಿ ಒಂಬತ್ತು ತಿಂಗಳುಗಳಿಂದಲೂ ಪ್ರತಿಭಟನಾ-ಪ್ರದರ್ಶನ ನಡೆಸುತ್ತಿದ್ದಾರೆ. ರೈತರ ಮೇಲಿನ ಈ ದಾಳಿಗಳು ಆಕಸ್ಮಿಕವೂ ಅಲ್ಲ ಅಥವಾ ಭಾರತಕ್ಕೆ ನಿರ್ದಿಷ್ಟವೂ ಅಲ್ಲ. ಅವು, ಬಂಡವಾಳದಲ್ಲಿ ಅಂತರ್ಗತವಾಗಿರುವ ಪ್ರವೃತ್ತಿಗಳನ್ನು ಅನುಸರಿಸಿವೆ. ಈಗ, ನವ-ಉದಾರವಾದದ ಅಡಿಯಲ್ಲಿ ಈ ಪ್ರವೃತ್ತಿಗಳನ್ನು ಸ್ವೇಚ್ಛೆಯಾಗಿ ಬಿಟ್ಟುಬಿಡಲಾಗಿದೆ.



ಭಾರತದಂತಹ ದೇಶಗಳಲ್ಲಿ ರಾಷ್ಟ್ರ ನಿರ್ಮಾಣದ ಯೋಜನೆಗೆ ರೈತ ಕೃಷಿಯನ್ನು ರಕ್ಷಿಸುವಂಥಹ ಒಂದು ಅಭಿವೃದ್ಧಿ-ಕಾರ್ಯತಂತ್ರದ ಅಗತ್ಯವಿದೆ. ಸಮಾಜವಾದದ ಉದಯಕ್ಕೆ ಕಾರಣವಾಗುವ ಈ ಕಾರ್ಯತಂತ್ರವು ರೈತಾಪಿಯು ಸ್ವ-ಇಚ್ಛೆಯಿಂದ ಸಾಮೂಹಿಕ ಮತ್ತು ಸಹಕಾರಿ ಸಂಘಗಳಾಗಿ ಸ್ವಯಂ-ಪರಿವರ್ತನೆ ಹೊಂದುವವರೆಗೂ ಚಾಲನೆಯಲ್ಲಿ ಇರಬೇಕಾಗುತ್ತದೆ. ಅಂತಹ ಒಂದು ಸಂದರ್ಭದಲ್ಲಿ ಸಮಾಜವಾದಿ ಕಾರ್ಯತಂತ್ರವನ್ನು ಮುಂದುವರೆಸುವುದು ಕೇವಲ ಅಪೇಕ್ಷೆಯ ಒಂದು ವಿಷಯವಲ್ಲ; ಒಂದು ಸ್ವತಂತ್ರ ಘಟಕವಾಗಿ ರಾಷ್ಟ್ರದ ಉಳಿವಿಗೂ ಇದು ಅತ್ಯಗತ್ಯವಾಗುತ್ತದೆ.

ನವ-ಉದಾರವಾದ ಮತ್ತು ಹಿಂದುತ್ವ ರಾಷ್ಟ್ರೀಯವಾದ

ಪುಟ 13 ರಿಂದ

ರೈತಾಪಿಯು ನಿರ್ಗತಿಕತನಕ್ಕೆ ಒಳಗಾಗಿರುವಾಗ ಮೂರನೇ ಜಗತ್ತಿನ ಒಂದು ದೇಶದಲ್ಲಿ ರಾಷ್ಟ್ರ ನಿರ್ಮಾಣವು ಅಸಾಧ್ಯವೇ ಸರಿ. ಯೂರೋಪಿನಲ್ಲಿ ಬೂರ್ಜ್ವಾ ರಾಷ್ಟ್ರೀಯವಾದವು ಸಂಪಾದಿಸಿದ ಬೆಂಬಲ ಮತ್ತು ಗೌರವಾದರಗಳು ದುಡಿಯುವ ಜನರ ಪರಿಸ್ಥಿತಿಗಳನ್ನು ಅದು ಸ್ವಲ್ಪ ಮಟ್ಟಿಗೆ ಸುಧಾರಿಸಿದ ಕಾರಣದಿಂದ ಲಭ್ಯವಾಗಿದ್ದವು. ಈ ಬೆಂಬಲ ಮತ್ತು ಗೌರವಾದರಗಳು ಎಷ್ಟು ಮೇಲು ಮೇಲಿನವು ಎಂಬುದನ್ನು ಮೊದಲ ಮಹಾಯುದ್ಧವು ಬಯಲುಮಾಡಿತು. ಜನರ ಸ್ಥಿತಿ–ಗತಿಗಳು ಅಲ್ಲಿ ಉತ್ತಮಗೊಂಡದ್ದು ಬಂಡವಾಳಶಾಹಿಯ ಯಾವುದೇ ಅಂತರ್ಗತ ಪ್ರವೃತ್ತಿಯ ಕಾರಣದಿಂದಾಗಿ ಅಲ್ಲ, ಯುರೋಪಿಯನ್ ಬಂಡವಾಳಶಾಹಿಯ ಸಾಮ್ರಾಜ್ಯಶಾಹಿಯ ವ್ಯಾಪ್ತಿಯ ಕಾರಣದಿಂದಾಗಿ.

ಸಾಮ್ರಾಜ್ಯಶಾಹಿಯ ಈ ವ್ಯಾಪ್ತಿಯು ಯುರೋಪಿಯನ್ ಕಾರ್ಮಿಕರ ವಿಶಾಲ ಸಮೂಹವನ್ನು ಬಿಳಿಯರು ಅದಾಗಲೇ ನೆಲೆಸಿದ್ದ ಸಮಶೀತೋಷ್ಣ ಪ್ರದೇಶಗಳಿಗೆ ವಲಸೆ ಹೋಗಲು ಅನುವು ಮಾಡಿಕೊಟ್ಟಿತು. ಈ ವಿದ್ಯಮಾನವು ಯುರೋಪಿಯನ್ ಕಾರ್ಮಿಕ ಮಾರುಕಟ್ಟೆಗಳಲ್ಲಿ ಬಿಗಿತವನ್ನು ಸೃಷ್ಟಿಸಿತು. ಪರಿಣಾಮವಾಗಿ, ಕಾರ್ಮಿಕ ಸಂಘಟನೆಗಳು ವೇತನ ಹೆಚ್ಚಳವನ್ನು ಪಡೆಯುವಲ್ಲಿ ಯಶಸ್ವಿಯಾದವು. ಉಷ್ಣವಲಯದ ವಸಾಹತುಗಳ ಅಪ–ಕೈಗಾರಿಕೀಕರಣವು ನಿರುದ್ಯೋಗದ ರಫ್ತಿನ ಮೂಲಕ ಅದೇ ರೀತಿಯ ಪಾತ್ರವನ್ನು ವಹಿಸಿತು. ಅಂತಿಮವಾಗಿ ಈ ಉಷ್ಣವಲಯದ ವಸಾಹತುಗಳಿಂದ ಮಿಗುತಾಯವನ್ನು ಹೀರುವ ಮೂಲಕ, ಲಾಭದ ಪ್ರಮಾಣವನ್ನು ಹಿಂಡದೆ, ಮಹಾನಗರೀಯ (ಪಾಶ್ಚಿಮಾತ್ಯ)ಅರ್ಥವ್ಯವಸ್ಥೆಗಳಲ್ಲಿ ವೇತನ ಹೆಚ್ಚಳವನ್ನು ಸಾಧ್ಯವಾಗಿಸಿತು.

ಹೀಗೆ, ಭಾರತದಂತಹ ದೇಶದಲ್ಲಿ ವಸಾಹತುಶಾಹಿ ವಿರೋಧಿ ರಾಷ್ಟ್ರೀಯವಾದವನ್ನು ಮುನ್ನಡೆಸುವುದು ನವ–ಉದಾರವಾದಿ ಬಂಡವಾಳಶಾಹಿಯ ಆಡಳಿತದಲ್ಲಿ ಅಸಾಧ್ಯವೇ ಸರಿ. ಅದು ರೈತರ ಮೇಲೆ ತೀವ್ರ ಒತ್ತಡವನ್ನು ಹೇರುತ್ತದೆ. ಅಂತೆಯೇ, ರಾಷ್ಟ್ರವನ್ನು ನಿರ್ಮಿಸಲು ಬೂರ್ಜ್ವಾ ರಾಷ್ಟ್ರೀಯವಾದವನ್ನು ಪ್ರಚೋದಿಸುವುದೂ ಅಷ್ಟೇ ಅಸಾಧ್ಯದ ಕೆಲಸ. ಏಕೆಂದರೆ, ಅಂತಹ ದೇಶವು ಯುರೋಪ್ ಹೊಂದಿದ್ದಂತೆ ಸಾಮ್ರಾಜ್ಯವನ್ನು ಹೊಂದುವ ಅವಕಾಶವಿಲ್ಲ. “ಹಿಂದುತ್ವ”ದ ಜೊತೆಗೆ ಬೂರ್ಜ್ವಾ ರಾಷ್ಟ್ರೀಯತ್ವವನ್ನು ರಾಷ್ಟ್ರ ನಿರ್ಮಾಣ ಯೋಜನೆಯ ಆಧಾರವಾಗಿ ಬಳಸುವುದೂ ಸಹ ವ್ಯರ್ಥವೇ. ರೈತರನ್ನು ಹಿಂಡುವ ನವ–ಉದಾರವಾದದೊಂದಿಗೆ ಮೈತ್ರಿ ಹೊಂದಿರುವ ಹಿಂದುತ್ವವು, ಅದರ ದ್ವೇಷ ಕೆರಳಿಸುವ ಲಕ್ಷಣದ ಹೊರತಾಗಿಯೂ, ಅಲ್ಪಾವಧಿಯಲ್ಲಿ ಎಷ್ಟೇ ಯಶಸ್ವಿಯಾಗಲಿ, ಅಂತಿಮವಾಗಿ ಯಶಸ್ವಿಯಾಗದು. ಹಿಟ್ಲರ್ ಕೂಡ 1930ರ ಬಿಕ್ಕಟ್ಟಿನಿಂದ ಜರ್ಮನ್ ಅರ್ಥವ್ಯವಸ್ಥೆಯ ಚೇತರಿಕೆಗಾಗಿ ಉದ್ಯೋಗ ಸೃಷ್ಟಿಯ ಮೂಲಕ ತನ್ನ “ರಾಷ್ಟ್ರೀಯವಾದಿ” ನಿವೇದನೆಯನ್ನು ಗಟ್ಟಿಗೊಳಿಸಿಕೊಳ್ಳಬೇಕಾಯಿತು ಎಂಬುದನ್ನು ನೆನಪಿನಲ್ಲಿಡಬೇಕು.

ಭಾರತದಂತಹ ದೇಶಗಳಲ್ಲಿ ರಾಷ್ಟ್ರ ನಿರ್ಮಾಣದ ಯೋಜನೆಗೆ ರೈತ ಕೃಷಿಯನ್ನು ರಕ್ಷಿಸುವಂಥಹ ಒಂದು ಅಭಿವೃದ್ಧಿ–ಕಾರ್ಯತಂತ್ರದ ಅಗತ್ಯವಿದೆ. ಸಮಾಜವಾದದ ಉದಯಕ್ಕೆ ಕಾರಣವಾಗುವ ಈ ಕಾರ್ಯತಂತ್ರವು ರೈತಾಪಿಯು ಸ್ವ–ಇಚ್ಛೆಯಿಂದ ಸಾಮೂಹಿಕ ಮತ್ತು ಸಹಕಾರಿ ಸಂಘಗಳಾಗಿ ಸ್ವಯಂ–ಪರಿವರ್ತನೆ ಹೊಂದುವವರೆಗೂ ಚಾಲನೆಯಲ್ಲಿರಬೇಕಾಗುತ್ತದೆ. ಅಂತಹ ಒಂದು ಸಂದರ್ಭದಲ್ಲಿ ಸಮಾಜವಾದಿ ಕಾರ್ಯತಂತ್ರವನ್ನು ಮುಂದುವರೆಸುವುದು ಕೇವಲ ಅಪೇಕ್ಷೆಯ ಒಂದು ವಿಷಯವಲ್ಲ; ಒಂದು ಸ್ವತಂತ್ರ ಘಟಕವಾಗಿ ರಾಷ್ಟ್ರದ ಉಳಿವಿಗೂ ಇದು ಅತ್ಯಗತ್ಯವಾಗುತ್ತದೆ.

ವಿಶಾಖ ಪಟ್ಟಣ ಉಕ್ಕುಸ್ಥಾವರದ ಖಾಸಗೀಕರಣದ ವಿರುದ್ಧ ಮಾನವ ಸರಪಳಿ, ಪಂಜಿನ ಮೆರವಣಿಗೆಗಳು, ಪಟ್ಟುಬಿಡದ ಹೋರಾಟ

ವಿಶಾಖಪಟ್ಟಣ ಉಕ್ಕು ಸ್ಥಾವರದ ‘ಆಯಕಟ್ಟಿನ ಮಾರಾಟ’ಕ್ಕೆ ಇಳಿದಿರುವ ಬಿಜೆಪಿ ಕೇಂದ್ರ ಸರಕಾರದ ವಿರುದ್ಧ ಆಂಧ್ರಪ್ರದೇಶದಲ್ಲಿ ಚಳುವಳಿ ತೀವ್ರಗೊಳ್ಳುತ್ತಿದೆ. ಆಗಸ್ಟ್ 29 ರಂದು ವಿಶಾಖಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿ–16 ರ ಗುಂಟ ಎರಡು ಗಂಟೆಗಳ ಕಾಲ 10 ಕಿ.ಮೀ. ಉದ್ದದ ಮಾನವ ಸರಪಳಿ ರಚಿಸಲಾಯಿತು. ಇದರಲ್ಲಿ ಉಕ್ಕು ಕಾರ್ಮಿಕರಲ್ಲದೆ, ಈ ಉಕ್ಕು ಸ್ಥಾವರ ಸ್ಥಾಪನೆಗೆ ತಮ್ಮ ಜಮೀನನ್ನು ಬಿಟ್ಟುಕೊಟ್ಟು ಸ್ಥಾನ ಪಲ್ಲಟಗೊಂಡ ಕುಟುಂಬಗಳ ಸದಸ್ಯರು ಮತ್ತು ಸಾರ್ವಜನಿಕರು ಕೈಜೋಡಿಸಿದರು. ವಿಶಾಖ ಉಕ್ಕು ಪರಿರಕ್ಷಣಾ ಪೋರಾಟ ಕಮಿಟಿ ಕರೆಯ ಮೇರೆಗೆ ನಡೆದ ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ‘ವಿಶಾಖ ಉಕ್ಕು, ಆಂಧ್ರುಲ ಹಕ್ಕು’ ಘೋಷಣೆ ಮೊಳಗಿತು.

ಈ ಸಂದರ್ಭದಲ್ಲಿ ವಿವಿಧ್ ಕಾರ್ಮಿಕ ಮುಖಂಡರು ಈ ಉಕ್ಕು ಸ್ಥಾವರದ ಸ್ಥಾಪನೆಗಾಗಿ ನಡೆದ ಚಳುವಳಿಯಲ್ಲಿ ಪ್ರಾಣ ತೆತ್ತ 33 ಹುತಾತ್ಮರನ್ನು ಸ್ಮರಿಸಿಕೊಂಡರು. ಈ ಸ್ಥಾವರ ಸ್ಥಾಪನೆಗೆ ಬೇಕಾಗಿದ್ದ 26,500 ಎಕ್ರೆ ಜಾಗವನ್ನು ಬಿಟ್ಟುಕೊಟ್ಟ ಗ್ರಾಮಸ್ಥರ ತ್ಯಾಗವನ್ನೂ ನೆನಪಿಸಿಕೊಳ್ಳಲಾಯಿತು. ತಮ್ಮ ಮಕ್ಕಳಿಗೆ ಇಲ್ಲಿ ಕೆಲಸ ಸಿಗಬಹುದೆಂಬ ಆಶಾಭಾವನೆಯಿಂದ ಅವರು ತಮ್ಮ ಜಮೀನುಗಳನ್ನು ಬಿಟ್ಟುಕೊಟ್ಟಿದ್ದರು. ಅದೀಗ ಖಾಸಗೀಕರಣದ ಪ್ರಯತ್ನದಿಂದಾಗಿ ಹುಸಿಯಾಗುತ್ತಿದೆ.

ಮರುದಿನ, ಆಗಸ್ಟ್ 30 ರಂದು ರಾಜ್ಯಾದ್ಯಂತ ಪಂಜಿನ ಮೆರವಣಿಗೆಗಳು ನಡೆದವು. ಇದರಲ್ಲಿ ಬಿಜೆಪಿ ಬಿಟ್ಟು ಬೇರೆಲ್ಲ ಪಕ್ಷಗಳು ಮತ್ತು ಬಿಎಂಎಸ್ ಬಿಟ್ಟು ಬೇರೆಲ್ಲಾ ಕಾರ್ಮಿಕ ಸಂಘಟನೆಗಳು ಭಾಗವಹಿಸಿದವು.

ಈ ನಡುವೆ ಹೋರಾಟ ಸಮಿತಿ ಸಂಘಟಿಸಿರುವ ಉಪವಾಸ ಮುಷ್ಕರ 200 ದಿನಗಳನ್ನು ದಾಟಿದೆ. ಈಗಾಗಲೇ ಆಂಧ್ರ ವಿಧಾನ ಸಭೆಯಲ್ಲಿ ಮತ್ತು ವಿಶಾಖ ಮಹಾ ನಗರಪಾಲಿಕೆಯಲ್ಲಿ ನಿರ್ಣಯಗಳನ್ನು ಪಾಸು ಮಾಡಲಾಗಿದೆ.

ಬಿಜೆಪಿ ಕೇಂದ್ರ ಸರಕಾರ ಖಾಸಗೀಕರಣದ ತನ್ನ ನಿರ್ಧಾರವನ್ನು ಹಿಂತೆಗೆದುಕೊಳ್ಳುವ ವರೆಗೆ ಈ ಹೋರಾಟ ಮುಂದುವರೆಯುತ್ತದೆ ಎಂದು ಜನರು ದೃಢನಿರ್ಧಾರ ಮಾಡಿದ್ದಾರೆ ಎಂದು ಹೋರಾಟ ಸಮಿತಿಯ ಮುಖಂಡರು ಹೇಳಿದ್ದಾರೆ. ಇದನ್ನು ಕೊಳ್ಳಬೇಕೆಂದಿರುವ ಕಾರ್ಪೊರೇಟ್ ಗುಂಪುಗಳ ಪ್ರತಿನಿಧಿಗಳು ಈ ನಗರವನ್ನು ಪ್ರವೇಶಿಸಲು ಬಿಡುವುದಿಲ್ಲ ಎಂದೂ ವರು ನಿರ್ಧರಿಸಿದ್ದಾರೆ.

ಪಶ್ಚಿಮ ಬಂಗಾಳ ವಿಧಾನ ಸಭಾ ಚುನಾವಣೆಗಳ ವಿಮರ್ಶೆ

ಪುಟ 11 ರಿಂದ

ಸಂಯುಕ್ತ ಮೋರ್ಚಾ ಮತ್ತು ಪರ್ಯಾಯ ಸರ್ಕಾರ: ಬಿಜೆಪಿ–ವಿರೋಧಿ, ಟಿಎಂಸಿ–ವಿರೋಧಿ ಮತಗಳನ್ನು ಹೆಚ್ಚು ಒಟ್ಟುಗೂಡಿಸುವ ಸಲುವಾಗಿ ಪಕ್ಷವು ಇತರರೊಂದಿಗೆ ಚುನಾವಣಾ ಹೊಂದಾಣಿಕೆಗಳನ್ನು ಮಾಡಿಕೊಳ್ಳಬಹುದು ಎಂದು ಕೇಂದ್ರ ಸಮಿತಿಯು ನಿರ್ಧರಿಸಿತು. ಆದರೆ ಪ್ರಚಾರ ಮಾಡುವ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ಇಂಡಿಯನ್ ಸೆಕ್ಯುಲರ್ ರಂಗದೊಂದಿಗಿನ ಸಂಯುಕ್ತ ಮೋರ್ಚಾ ಎಂಬ ಪದವನ್ನು ಸಂಯುಕ್ತ ರಂಗ ಎಂದು ಬಿಂಬಿಸಿ ಪರ್ಯಾಯ ಸರ್ಕಾರ ಎಂದು ಹೇಳಲಾಯಿತು. ಇದು ಪ್ರಮಾದವಾಗಿದೆ ಮತ್ತು ಕೇಂದ್ರ ಸಮಿತಿಯ ತಿಳುವಳಿಕೆಯೊಂದಿಗೆ ಸಾಂಗತ್ಯ ಹೊಂದಿಲ್ಲ.

ಸಂಯುಕ್ತ ಮೋರ್ಚಾವು ಒಂದು ಶಾಶ್ವತ ಸಂರಚನೆ ಅಥವಾ ಸಮಾನ ಪ್ರಣಾಳಿಕೆ ಅಥವಾ ಕಾರ್ಯಕ್ರಮದೊಂದಿಗಿನ ಸಂಯುಕ್ತ ರಂಗವಾಗಲು ಸಾಧ್ಯವಿಲ್ಲ. ಚುನಾವಣೆಯ ಸಮಯದಲ್ಲಿ ತಮ್ಮ ಅಭ್ಯರ್ಥಿಗಳಿಗೆ ಬೆಂಬಲ ಕೇಳಿ ಒಂದು ಜಂಟೀ ಮನವಿ ಮಾಡಲಾಗಿತ್ತು.

ಕಾಂಗ್ರೆಸ್ ಪಕ್ಷವು ಐಎಸ್‌ಎಫ್‌ನ್ನು ಮಾನ್ಯ ಮಾಡಲು ಒಪ್ಪದಿದ್ದುದರಿಂದ ಸ್ಥಾನ ಹೊಂದಾಣಿಕೆಯ ಆಧಾರದ ಚುನಾವಣಾ ಒಪ್ಪಂದವು ಒಗ್ಗಟ್ಟನ್ನು ಹೊಂದಿರಲಿಲ್ಲ. ಕಾರ್ಯಕ್ರಮ ಮತ್ತು ಸ್ಪರ್ಧಿಸಿದ ಅಭ್ಯರ್ಥಿಗಳ ಜಾತ್ಯತೀತ ಸ್ವಭಾವದ ಹೊರತಾಗಿಯೂ ಮತ್ತು ಅಂಚಿನಲ್ಲಿರುವ ವಿಭಾಗದವರನ್ನು ಅಭ್ಯರ್ಥಿಗಳನ್ನಾಗಿ ಮಾಡಿದ್ದಾಗ್ಯೂ ಅದೊಂದು ಮುಸ್ಲಿಂ ಅಲ್ಪಸಂಖ್ಯಾತ ಸಂಸ್ಥೆಯ ಪ್ರತೀಕ ಎನ್ನುವುದನ್ನು ಅಳಿಸಲಾಗಲಿಲ್ಲ. ಈ ಎರಡು ಅಂಶಗಳು ಈ ಚುನಾವಣಾ ಒಪ್ಪಂದದ ಒಗ್ಗಟ್ಟಿನ ಮೇಲೆ ಪರಿಣಾಮ ಬೀರಿದವು.

ಮುಂದಿನ ದಿನಗಳಲ್ಲಿ, ಜಂಟೀ ಪ್ರಚಾರ ಹಾಗೂ ಹೋರಾಟಗಳಿಗಾಗಿ ನಿರ್ದಿಷ್ಟ ಸಮಸ್ಯೆಗಳ ಆಧಾರದಲ್ಲಿ ಎಡರಂಗದೊಂದಿಗೆ ಇತರ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸಬೇಕು. ಅದೇ ರೀತಿಯಲ್ಲಿ ಮುಂಬರುವ ವಿಧಾನಸಭಾ ಉಪಚುನಾವಣೆಗಳಲ್ಲಿ ಅಥವಾ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ, ಟಿಎಂಸಿ–ವಿರೋಧಿ, ಬಿಜೆಪಿ–ವಿರೋಧಿ ಜಾತ್ಯತೀತ ಶಕ್ತಿಗಳೊಂದಿಗೆ ಚುನಾವಣಾ ಹೊಂದಾಣಿಕೆಗಳನ್ನು ಮುಂದುವರಿಸಬಹುದು.

ಪಕ್ಷದ ಮುಂದಿನ ಕಾರ್ಯಭಾರಗಳು

ಪಕ್ಷದ ರಾಜ್ಯ ಸಮಿತಿಯು ಗುರುತು ಮಾಡಿದ ಮತ್ತು ಕೈಗೊಳ್ಳಲಿರುವ ಕೆಲಸ ಕಾರ್ಯಗಳಲ್ಲಿ ಈ ಕೆಳಗಿನವುಗಳಿಗೆ ಒತ್ತು ಕೊಡಬೇಕಾದ ಅವಶ್ಯಕತೆ ಇದೆ.

ಬಿಜೆಪಿ ಮತ್ತು ಬಂಗಾಳವನ್ನು ವಶಪಡಿಸಿಕೊಳ್ಳುವ ಅದರ ಪ್ರಯತ್ನಗಳನ್ನು ಈ ಚುನಾವಣೆಗಳಲ್ಲಿ ಸೋಲಿಸುವುದು ಬಂಗಾಳದ ಜನರ ಅತಿಮುಖ್ಯವಾದ ಹಾರೈಕೆಯಾಗಿತ್ತು. ಈಗ ಅದನ್ನು ಸಾಧಿಸಿದ ನಂತರ ಜನರ ಬದುಕಿನ ದಿನನಿತ್ಯದ ಸಮಸ್ಯೆಗಳು ಮತ್ತೆ ಮುಂಚೂಣಿಗೆ ಬರಲಿವೆ. ಜನರ ಸಮಸ್ಯೆಗಳಿಗಾಗಿ ಹೋರಾಡುವ ರಾಜಕೀಯಕ್ಕೆ ಇದು ಸರಿಯಾದ ಸಮಯವಾಗಲಿದೆ. ಪಕ್ಷ ಈಗ ಜಾಗರೂಕವಾಗಿರಬೇಕು, ಜನರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ಸಮರ್ಥವಾಗಬೇಕು, ಅವರ ಹಲವಾರು ಸಮಸ್ಯೆಗಳ ಆಧಾರದಲ್ಲಿ ಅವರನ್ನು ಅಣಿನೆರೆಸಬೇಕು, ಬಹಳ ಮುಖ್ಯವಾಗಿ ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಮುಂತಾದ ಅಂಚಿನಲ್ಲಿರುವ ವಿಭಾಗಗಳನ್ನು ಕಾರ್ಯಾಚರಣೆಗೆ ಮತ್ತು ಹೋರಾಟಕ್ಕೆ ಇಳಿಸಲು ಸಾಧ್ಯವಾಗಬೇಕು.

ಸಂಘಟನಾತ್ಮಕ ಕಾರ್ಯಭಾರಗಳು: ನಮ್ಮ ಸ್ವತಂತ್ರ ಶಕ್ತಿ ಮತ್ತು ರಾಜಕೀಯ ಮಧ್ಯಪ್ರವೇಶದ ಸಾಮರ್ಥ್ಯದ ಮೇಲೆ ಜನರ ಹೋರಾಟಗಳ ಮೂಲಕ ಅಂತಹ ರಾಜಕೀಯ ನಾಯಕತ್ವದ ಶಕ್ತಿ ನಿರ್ಣಾಯಕವಾಗಿ ಅವಲಂಬಿಸಿರುತ್ತದೆ ಎಂದು ನಾವು ಪದೇ ಪದೇ ವಿಶ್ಲೇಷಣೆ ಮಾಡಿದ್ದೇವೆ. 2008ರ ನಂತರದಿಂದ ಪಕ್ಷದ ಎಲ್ಲಾ ಹಂತಗಳಲ್ಲಿ ಈ ಹಿಂದೆ ತೆಗೆದುಕೊಂಡ ಎಲ್ಲಾ ತೀರ್ಮಾನಗಳನ್ನು ಸರಿಯಾಗಿ ಪರಾಮರ್ಶೆ ಮಾಡಬೇಕಿದೆ. ನಮ್ಮ ಹಿಂದಿನ ತೀರ್ಮಾನಗಳನ್ನು ಏಕೆ ಸರಿಯಾಗಿ ಜಾರಿ ಮಾಡಲಾಗಲಿಲ್ಲ ಎಂದು ನಾವು ಪರಿಶೀಲಿಸಬೇಕಾದ ಅಗತ್ಯಬಿದ್ದಾಗ, ನಾವು ನಿರಂತರ ಸ್ವಯಂವಿಮರ್ಶಾತ್ಮಕವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂಬುದೇ ಇದರ ಅರ್ಥ. ಈ ದೌರ್ಬಲ್ಯಗಳನ್ನು ಪತ್ತೆಹಚ್ಚಬೇಕು, ಹೋಗಲಾಡಿಸಬೇಕು ಮತ್ತು ತೀರ್ಮಾನಗಳನ್ನು ಶ್ರದ್ಧಾಪೂರ್ವಕವಾಗಿ ಜಾರಿಮಾಡಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು.

ಕಳೆದ ಬಹಳ ದಿನಗಳಿಂದ ಪಕ್ಷದ ಸಂಘಟನಾತ್ಮಕ ಸ್ಥಿತಿಯು ದುರ್ಬಲವಾಗುತ್ತಿದೆ. ಕೊಲ್ಕೊತ್ತಾ ಪ್ಲೀನಂ ಸೂಚಿಸಿದ ಮಾರ್ಗದ ಆಧಾರದಲ್ಲಿ ಪಕ್ಷದ ದಕ್ಷತೆಯನ್ನು ಹೆಚ್ಚಿಸಲು ಮತ್ತು ಕ್ರಿಯಾಶೀಲಗೊಳಿಸಲು ನಾವು ಪ್ರಯತ್ನ ಮಾಡುತ್ತಾ ಇದ್ದೇವೆ. ಆದಾಗ್ಯೂ, ಗಂಭೀರ ದೌರ್ಬಲ್ಯಗಳು ಉಳಿದುಕೊಂಡಿವೆ.

ಇವತ್ತಿನ ಪರಿಸ್ಥಿತಿಯಲ್ಲಿ, ಹಿಂದುತ್ವ ವಿರುದ್ಧದ ಸೈದ್ಧಾಂತಿಕ ಹೋರಾಟಗಳು ಮತ್ತು ಪ್ರಚಾರಗಳನ್ನು ಅಗಾಧ ಪ್ರಮಾಣದಲ್ಲಿ ಬಲಪಡಿಸಬೇಕಾದ ಅಗತ್ಯವಿದೆ. ಬಂಗಾಳಿ ಜನರಲ್ಲಿ ಜಾತ್ಯತೀತತೆಯ ಕುರಿತ ಬದ್ಧತೆ ಶಿಥಿಲಗೊಂಡಿದೆ ಎಂಬ ಆಲೋಚನೆಯಿಂದ ನಾವು ತಪ್ಪು ದಾರಿಗೆ ಹೋಗಬಾರದು. ದೇಶ ವಿಭಜನೆ ಮತ್ತು ಆಗ ಎದ್ದಿದ್ದ ಉಗ್ರ ಕೋಮುವಾದಿ ಪರಿಸ್ಥಿತಿಯ ಚರಿತ್ರೆ ಇದೆ. ಆ ಕಾಲದ ನೆನಪುಗಳಿಗೆ ಪುನರ್ಜೀವ ಕೊಡುವ ಮೂಲಕ ಹಿಂದುತ್ವ ಪ್ರಚಾರವನ್ನು ಹಬ್ಬಿಸಲು ಆರ್‌ಎಸ್‌ಎಸ್/ಬಿಜೆಪಿ ಯತ್ನಿಸಿತು. ಈ ಹಿಂದೆ ಗುರುತಿಸಿದಂತೆ, ಹಿಂದುತ್ವ ಭಾವನೆಗಳು ಬೆಳೆಯುವುದರ ವಿರುದ್ಧ ನಮ್ಮ ಹೋರಾಟಗಳನ್ನು ಸೈದ್ಧಾಂತಿಕವಾಗಿ, ರಾಜಕೀಯವಾಗಿ, ಸಂಘಟನಾತ್ಮಕವಾಗಿ, ಸಾಂಸ್ಕೃತಿಕವಾಗಿ ನಡೆಸಬೇಕಿದೆ.

ನಮ್ಮ ಪಕ್ಷದಿಂದ ಟಿಎಂಸಿಗೆ ಮತ್ತು ನಂತರದಲ್ಲಿ ಬಿಜೆಪಿಗೆ ಹಲವಾರು ಹಂತದಲ್ಲಿ ಪಕ್ಷಾಂತರಗಳು ನಡೆದಿವೆ. ಪಕ್ಷದಲ್ಲಿನ ರಾಜಕೀಯ–ಸೈದ್ಧಾಂತಿಕ ತಿಳುವಳಿಕೆಯ ಮಟ್ಟದಲ್ಲಿ ತೀವ್ರತರದ ಸವೆತ ಉಂಟಾಗಿರುವುದನ್ನು ಇದು ತೋರಿಸುತ್ತದೆ. ಚುನಾವಣೆಯ ಸಮಯದಲ್ಲಿ ಪಕ್ಷದ ಸಮಿತಿಗಳ ಮತ್ತು ಬೂತ್ ಸಮಿತಿಗಳ ಕಾರ್ಯನಿರ್ವಹಣೆಯಲ್ಲಿ ಗುರುತಿಸಿದ ದೌರ್ಬಲ್ಯಗಳನ್ನು ನಿವಾರಿಸಬೇಕಿದೆ. ಪರಿಸ್ಥಿತಿಯನ್ನು ನಿಯಂತ್ರಿಸಿ ಸರಿಪಡಿಸಲು ಈ ಕೂಡಲೇ ಕ್ರಮಗಳನ್ನು ಕೈಗೊಳ್ಳಬೇಕಿದೆ. ಟಿಎಂಸಿಯ ನಿರಂತರ ದಾಳಿಗಳಿಂದ ನಮ್ಮ ಕಾರ್ಯಕರ್ತರನ್ನು ರಕ್ಷಿಸಲು ಮತ್ತು ನಮ್ಮ ಬೆಂಬಲಿಗರ ನೆಲೆಯನ್ನು ಉಳಿಸಲು ಕ್ರಮಗಳನ್ನು ಬಲಪಡಿಸಬೇಕಿದೆ.

ನಮ್ಮ ಸಾಮೂಹಿಕ ಸಂಘಟನೆಗಳನ್ನು ಕ್ರಿಯಾಶೀಲಗೊಳಿಸುವ, ನಮ್ಮ ಕೇಂದ್ರ ಸಮಿತಿಯ ನಿರ್ಣಯಗಳಲ್ಲಿ ನಿರ್ಧರಿಸಿದಂತೆ ಅವುಗಳ ಸ್ವತಂತ್ರ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸುವ ಮತ್ತು ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ನಡುವೆ ಸಮತೋಲಿತ ಸಂಬಂಧಗಳನ್ನು ಉಳಿಸಿಕೊಳ್ಳುವ ಅಗತ್ಯವಿದೆ.

ಎಡರಂಗ ಮತ್ತು ಅದರ ಮಿತ್ರರನ್ನು ಕ್ರೋಢೀಕರಿಸುವ ಪ್ರಯತ್ನಗಳನ್ನು ಮಾಡಬೇಕು. ಇದರ ಆಧಾರದಲ್ಲಿ ಸಮಾನ ಒಪ್ಪಿತ ಸಮಸ್ಯೆಗಳ ಮೇಲಿನ ಜಂಟೀ ಕಾರ್ಯಾಚರಣೆಗಳು ಮತ್ತು ಹೋರಾಟಗಳ ಆಧಾರದಲ್ಲಿ ಶಕ್ತಿಗಳ ವಿಶಾಲ ಐಕ್ಯತೆಯನ್ನು ಬಲಪಡಿಸಲು ನಾವು ಕೆಲಸ ಮಾಡಬೇಕಿದೆ.

ಬಂಗಾಳದಲ್ಲಿನ ಈ ಚುನಾವಣೋತ್ತರ ಅವಧಿಯು, ಈ ಹಿಂದೆ ಗುರುತುಮಾಡಿದಂತೆ, ಜನರ ಅಸ್ತಿತ್ವ ಹಾಗೂ ಉತ್ತಮ ಬದುಕಿಗಾಗಿನ ಪ್ರಮುಖ ಸಮಸ್ಯೆಗಳ ಆಧಾರದಲ್ಲಿ ವರ್ಗ ಹಾಗೂ ಜನಪ್ರಿಯ ಹೋರಾಟಗಳನ್ನು ತೀವ್ರಗೊಳಿಸಲು ಮಹಾನ್ ಸಾಧ್ಯತೆಯ ಅವಧಿಯಾಗಿದೆ. ಈ ಜನತಾ ಹೋರಾಟಗಳನ್ನು ಆತ್ಮವಿಶ್ವಾಸದೊಂದಿಗೆ ಪ್ರಾರಂಭಿಸಲು ಮತ್ತು ಮುನ್ನಡೆಸಲು ಸಿದ್ಧರಾಗಬೇಕಾದ ಸಮಯ ಇದಾಗಿದೆ. ಆತ್ಮಸ್ಥೈರ್ಯ ಕಳೆದುಕೊಳ್ಳುವುದಕ್ಕೆ ಪ್ರತಿಯಾಗಿ ವರ್ಗ ಹೋರಾಟಗಳನ್ನು ಪುನರುಜ್ಜೀವಗೊಳಿಸುವ ಮತ್ತು ಜನರೊಂದಿಗಿನ ನಮ್ಮ ಸಂಬಂಧಗಳನ್ನು ಪುನಶ್ಚೇತನಗೊಳಿಸುವ ಸಂದರ್ಭ ಇದಾಗಿದೆ. ಅತ್ಯಂತ ಉತ್ಸಾಹದಾಯಕ ಅಂಶವೇನೆಂದರೆ ಈ ಚುನಾವಣೆಯ ಪ್ರಚಾರದಲ್ಲಿ ಯುವಜನರ ಭಾಗವಹಿಸುವಿಕೆ, ಅವರ ಚೈತನ್ಯಶೀಲತೆ ಮತ್ತು ಬಲವಾದ ತುಡಿತ. ಪಕ್ಷದ ಭವಿಷ್ಯಕ್ಕಾಗಿ ಅವುಗಳನ್ನು ಚಾಲಕ ಶಕ್ತಿಯಾಗಿ ಬಳಸಿಕೊಳ್ಳಬೇಕು.

ಸ್ವಾತಂತ್ರ್ಯ ಸಂಗ್ರಾಮ: ಕಮ್ಯುನಿಸ್ಟರ ಮತ್ತು ಆರ್.ಎಸ್.ಎಸ್.ನ ಪಾತ್ರ......

ಪುಟ 9 ರಿಂದ

ಹಕ್ಕುಗಳು ಒಂದೇ ಆಗಿರುತ್ತವೆ". ಕೋಮುವಾದ ಮತ್ತು ಕೋಮು ಗಲಭೆಗಳ ಬೆಳವಣಿಗೆಯ ಹಿಂದೆ ಆರ್ಥಿಕ ಕಾರಣಗಳು ಇರುತ್ತವೆ ಎಂದು ಭಗತ್ ಸಿಂಗ್ ಸ್ಪಷ್ಟವಾಗಿ ಗುರುತಿಸಿದ್ದರು: "ಎಲ್ಲಾ ಗಲಭೆಗಳಿಗೆ ಚಿಕಿತ್ಸೆ ಎಂಬುದು ಏನಾದರೂ ಇದ್ದರೆ, ಭಾರತದ ಆರ್ಥಿಕ ಹಾದಿಯ ದಿಕ್ಕನ್ನು ಬದಲಾಯಿಸುವ ಮೂಲಕ ಮಾತ್ರವೇ ಆಗಿದೆ . . .ಜನರು ಸರ್ಕಾರದ ವಿರುದ್ಧ ನಿರಂತರವಾಗಿ ಹೋರಾಡಬೇಕು ಮತ್ತು ಸರ್ಕಾರ ಬದಲಾವಣೆ ಆಗುವ ತನಕ ಅವರು ವಿಶ್ರಾಂತಿ ತೆಗೆದುಕೊಳ್ಳಬಾರದು" ಇದನ್ನೇ ಕಮ್ಯುನಿಸ್ಟ್ ಪಕ್ಷವು ಆಗ ಎತ್ತಿ ಹಿಡಿದಿತ್ತು. ಪಕ್ಷದ ಮೊದಲ ಮೂಲಾವಸ್ಥೆಯ ಕಾರ್ಯಕ್ರಮವಾದ, ಕಾರ್ಯಾಚರಣೆಯ ವೇದಿಕೆಯ ಕರಡು ಹೇಳಿಕೆಯಲ್ಲಿ ಹೀಗೆ ಹೇಳಲಾಗಿದೆ: "ವಿವಿಧ ರಾಷ್ಟ್ರೀಯತೆಗಳ ಹಾಗೂ ಧಾರ್ಮಿಕ ನಂಬಿಕೆಯುಳ್ಳ ಜನರನ್ನು ಪರಸ್ಪರ ಕಾದಾಡುವಂತೆ ಮಾಡಿ ಅವರವರಲ್ಲೇ ತಿಕ್ಕಾಟಗಳನ್ನು ಉಂಟುಮಾಡುವ, ಬ್ರಿಟಿಷ್ ಸರ್ಕಾರ ಹಾಗೂ ದೇಶೀಯ ಶೋಷಕರ ವಂಚನೆಯ ಪ್ರಚೋದನಕಾರಿ ವಿಧಾನಗಳಿಂದ ಮೋಸ ಹೋಗಬಾರದೆಂದು ಭಾರತ ಕಮ್ಯುನಿಸ್ಟ್ ಪಕ್ಷವು ಭಾರತದ ಕಾರ್ಮಿಕರು ಮತ್ತು ರೈತರಿಗೆ ಕರೆ ನೀಡುತ್ತದೆ." ಅಸ್ಪೃಶ್ಯರನ್ನೂ ಒಳಗೊಂಡಂತೆ ಎಲ್ಲಾ ದುಡಿಮೆಗಾರರಿಗೂ ಕರೆ ನೀಡಿ ಅಂತಹ ಅವ್ಯವಸ್ಥೆಗೆ ಅವಕಾಶ ನೀಡಬಾರದು ಮತ್ತು 'ಸ್ಥಳೀಯ ಹಾಗೂ ಬ್ರಿಟಿಷ್ ಶೋಷಕರ' ವಿರುದ್ಧದ ಹೋರಾಟದೊಂದಿಗೆ ಸೇರಿಕೊಳ್ಳಿ ಎಂದು ಹೇಳಿದೆ. ಈ ವೇದಿಕೆಯು 'ಲಿಂಗ, ಧರ್ಮ ಮತ್ತು ಜನಾಂಗ ಯಾವುದೇ ಇರಲಿ ಎಲ್ಲಾ ಪ್ರಜೆಗಳಿಗೂ ಪೂರ್ಣ ಸಮಾನತೆಯನ್ನು' ಮತ್ತು 'ಪ್ರಭುತ್ವದಿಂದ ಧರ್ಮವನ್ನು ಸಂಪೂರ್ಣವಾಗಿ ಪ್ರತ್ಯೇಕಿಸುವುದನ್ನು' ದೃಢೀಕರಿಸಿತು.

ಎ.ಐ.ಟಿ.ಯು.ಸಿ, ಎ.ಐ.ಕೆ.ಎಸ್, ಎ.ಐ.ಎಸ್.ಎಫ್ ಹಾಗೂ ಪಿ.ಡಬ್ಲ್ಯು.ಎ ಅಂತಹ ಹಲವಾರು ವರ್ಗ ಹಾಗೂ ಸಾಮೂಹಿಕ ಸಂಘಟನೆಗಳನ್ನು ರಚಿಸುವಲ್ಲಿ ಮತ್ತು ಬಲಪಡಿಸುವಲ್ಲಿ ಮತ್ತು ಈ ವೇದಿಕೆಗಳ ಮೂಲಕ ಜನರನ್ನು ಅಣಿನೆರೆಸುವಲ್ಲಿ ಕಮ್ಯುನಿಸ್ಟ್ ಪಕ್ಷವು ಸಕ್ರಿಯ ಪಾತ್ರ ವಹಿಸಿದೆ. ಸಮಾಜದ ಈ ವಿವಿಧ ವಿಭಾಗಗಳ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಸಮರಶೀಲ ಹೋರಾಟಗಳನ್ನು ನಡೆಸಿದೆ. ವಸಾಹತು ಆಳ್ವಿಕೆಯನ್ನು ಕೊನೆಗಾಣಿಸಬೇಕು ಎಂದು ಒತ್ತಾಯಿಸುವುದರ ಜತೆಯಲ್ಲೇ ಪ್ರಜಾಸತ್ತಾತ್ಮಕ ಹಕ್ಕುಗಳು, ಸಂಘಟಿಸುವ ಹಾಗೂ ಪ್ರತಿಭಟಿಸುವ ಹಕ್ಕುಗಳನ್ನು ವಿಸ್ತರಿಸುವುದರ ಮೂಲಕ ನೈಜ ಪ್ರಜಾಪ್ರಭುತ್ವಕ್ಕಾಗಿ ಕಮ್ಯುನಿಸ್ಟರು ಒತ್ತಾಯಿಸಿದರು. ಎಂಟು ಗಂಟೆ ಕೆಲಸದ ದಿನ, ಮಹಿಳೆಯರು ಮತ್ತು ಪುರುಷರಿಗೆ ಸಮಾನ ಹಕ್ಕುಗಳು, ಸಮಾನ ವೇತನ, ಉಚಿತ ಶಿಕ್ಷಣ, ಅಸ್ಪೃಶ್ಯತೆಯನ್ನು, ಭೂಮಾಲಕತ್ವವನ್ನು, ಪಾಳೇಗಾರಿ ಸೌಲಭ್ಯ, ಸವಲತ್ತುಗಳನ್ನು ಹಾಗೂ ಶೋಷಣೆಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಲಾಗಿದೆ. ಈ ಬೇಡಿಕೆಗಳನ್ನು ಎತ್ತುವುದು ಮತ್ತು ಈ ಬೇಡಿಕೆಗಳ ಆಧಾರದಲ್ಲಿ ಜನರನ್ನು ಅಣಿನೆರೆಸುವುದರ ಮೂಲಕ ಜನಸಮುದಾಯದ ಆಸೆ ಆಕಾಂಕ್ಷೆಗಳು ಹಾಗೂ ಹಂಬಲಗಳಿಗೆ ಕಮ್ಯುನಿಸ್ಟ್ ಪಕ್ಷ ಸ್ಪಷ್ಟ ರೂಪ ನೀಡಿತು. ಜನರನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿತು ಕೂಡ.

ವಸಾಹತುಶಾಹಿ-ವಿರೋಧಿ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರವು ಪಕ್ಷದ ಮೊದಲ ಮಹಾಧಿವೇಶನದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಸಂಯೋಜನೆಯಲ್ಲಿ ಪ್ರತಿಫಲನವಾಗಿದೆ. ಪ್ರತಿನಿಧಿಗಳ ಶೇಕಡಾ 70 ರಷ್ಟು ಜನರು ಜೈಲಿನಲ್ಲಿ ಒಂದು ಅಥವಾ ಹೆಚ್ಚು ಬಾರಿ ಕಳೆದಿದ್ದಾರೆ ಮತ್ತು ಅವರೆಲ್ಲರೂ ಜೈಲಿನಲ್ಲಿ ಕಳೆದ ಸರಾಸರಿ ಕಾಲ 411 ವರ್ಷಗಳಿದ್ದವು. ಅವರ ಜೀವಿತಾವಧಿಯ ಅರ್ಧದಷ್ಟು ಕಾಲ ಅವರು ಜೈಲಿನಲ್ಲೇ ಕಳೆದಿದ್ದಾರೆ. ಶೇಕಡಾ 53 ರಷ್ಟು ಪ್ರತಿನಿಧಿಗಳು ಭೂಗತರಾಗಿದ್ದ ಅನುಭವ ಹೊಂದಿದ್ದಾರೆ ಮತ್ತು ಅವರೆಲ್ಲರೂ ಸರಾಸರಿಯಾಗಿ 54 ವರ್ಷಗಳ ಭೂಗತ ಜೀವನ ಅನುಭವಿಸಿದ್ದಾರೆ.

ಭಾರತವು ಹಿಂದು ಮತ್ತು ಮುಸ್ಲಿಂ ಎಂಬ ಜನರ ಧಾರ್ಮಿಕ ನಂಬಿಕೆಗಳ ಆಧಾರದಲ್ಲಿ ವಿಭಜನೆಯಾಗಿ ಎರಡು ದೇಶಗಳನ್ನು ಒಳಗೊಂಡಿದೆ ಎಂದು ಹಿಂದು ಮತ್ತು ಮುಸ್ಲಿಂ ಕೋಮುವಾದಿಗಳು ಭಾವಿಸುತ್ತಾರೆ. ಈ ಕಾರಣಕ್ಕಾಗಿಯೇ ಸಾವರ್ಕರ್ ಮತ್ತು ಜಿನ್ನಾ ಇಬ್ಬರೂ ಪರಸ್ಪರ ಸಮರ್ಥಿಸುವ ದ್ವಿರಾಷ್ಟ್ರ (ಎರಡು-ದೇಶ) ಸಿದ್ಧಾಂತದ ಬಗ್ಗೆ ಅವರಿಗೆ ಯಾವುದೇ ಸಮಸ್ಯೆ ಕಾಣುವುದಿಲ್ಲ ಮತ್ತು ಹಿಂದೂ ಮಹಾಸಭಾದ ಮುಖಂಡರು ಮುಸ್ಲಿಂ ಲೀಗ್ ಸರ್ಕಾರಗಳಲ್ಲಿ ಭಾಗವಹಿಸಿದರು. ಕಮ್ಯುನಿಸ್ಟ್ ಪಕ್ಷವು ಈ ಎರಡೂ ಕೋಮುವಾದಿ ಶಕ್ತಿಗಳನ್ನು ತೀಕ್ಷ್ಣವಾಗಿ ವಿರೋಧಿಸಿತು ಮತ್ತು ಜನರನ್ನು ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಹೋರಾಟಕ್ಕೆ ಅಣಿನೆರೆಸುವ ಮೂಲಕ ಜನರ ಐಕ್ಯತೆಗೆ ಕೆಲಸ ಮಾಡಿತು. ಹಲವಾರು ರಾಷ್ಟ್ರೀಯತೆಗಳ, ಜನಾಂಗೀಯತೆಗಳ, ಧಾರ್ಮಿಕ ಗುಂಪುಗಳ, ಜಾತಿಗಳ ಅಸ್ತಿತ್ವವನ್ನು ಕಮ್ಯುನಿಸ್ಟ್ ಪಕ್ಷ ಗುರುತಿಸಿತು ಮತ್ತು ಈ ಎಲ್ಲಾ ವಿಭಾಗಗಳ ನಡುವೆ ಸಾಮರಸ್ಯದ ಸಂಬಂಧಗಳ ಪರವಾಗಿದೆ.

ಭಾರತವು ಬಹುರಾಷ್ಟ್ರೀಯತೆಗಳ ದೇಶವಾಗಿದೆ ಮತ್ತು ಎಲ್ಲಾ ರಾಷ್ಟ್ರೀಯತೆಗಳ ಮುಕ್ತ ಬೆಳವಣಿಗೆಯ ಪರಿಸ್ಥಿತಿಯ ಅಡಿಯಲ್ಲಿ ಮಾತ್ರವೇ ಭಾರತದ ಐಕ್ಯತೆಯನ್ನು ಪಾಲಿಸಿಕೊಂಡು ಬರಲು ಸಾಧ್ಯ ಎಂದು ಜನರ ನಡುವೆ ಪ್ರಚಾರ ಮಾಡುವ ಮೂಲಕ ಕಮ್ಯುನಿಸ್ಟ್ ಪಕ್ಷವು ಭಾರತದ ರಾಜಕೀಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದೆ. ಸಾಮ್ರಾಜ್ಯವಾದ ಹಾಗೂ ಪಾಳೇಗಾರಿ ಪದ್ಧತಿಯ ವಿರುದ್ಧ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಡುವ ಭಾಗವಾಗಿ ಕಮ್ಯುನಿಸ್ಟರು ಭಾರತದಲ್ಲಿನ ರಾಷ್ಟ್ರೀಯತೆಗಳ ಸಮಸ್ಯೆಗಳನ್ನು ಪರಾಮರ್ಶಿಸಿದೆ. ದುಡಿಯುವ ಜನರ ಹಿತಾಸಕ್ತಿಯನ್ನು ಕಾಪಾಡುವ, ನೈಜ ಪ್ರಜಾಪ್ರಭುತ್ವದ ಪತಾಕೆಯನ್ನು ಮೇಲಕ್ಕೆ ಎತ್ತಿಹಿಡಿಯುವ ಮತ್ತು ಎಲ್ಲಾ ಸಾಮೂಹಿಕ ಹೋರಾಟಗಳಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಮೂಲಕ ಅದು ಸದಾ ಜನರ ಬಳಿ ಸಾಗಿದೆ.

ಕಮ್ಯುನಿಸ್ಟ್ ಪಕ್ಷವು ರೈತರು ಮತ್ತು ಕಾರ್ಮಿಕರ ಹೋರಾಟಗಳಲ್ಲಿ, ಹಿಂದು-ಮುಸ್ಲಿಂ ಐಕ್ಯತೆಯನ್ನು ಬೆಸೆಯುವಲ್ಲಿ, ಮತ್ತು ದುಡಿಯುವ ಜನರ ನಡುವೆ ವಿವಿಧ ಜಾತಿಗಳ ಐಕ್ಯಮತವನ್ನು ಸಾಧಿಸುವಲ್ಲಿ ತೀವ್ರವಾಗಿ ತೊಡಗಿಕೊಂಡಿದ್ದಾಗ, ಕೋಮುವಾದಿ ಶಕ್ತಿಗಳು ಸಾಮ್ರಾಜ್ಯವಾದಿಗಳ ಜತೆ ರಾಜಿಯ ಮತ್ತು ಜನರ ಹೋರಾಟಗಳನ್ನು ನಾಶಮಾಡುವ ಹಾದಿ ಹಿಡಿದಿದ್ದರು, ಮತ್ತು ಆ ದಾರಿಯು ಕೋಮು ಹತ್ಯಾಕಾಂಡ ಹಾಗೂ ದೇಶದ ವಿಭಜನೆಗೆ ಕಾರಣವಾಯಿತು. ಪಂಜಾಬ್ ಮತ್ತು ಬಂಗಾಳದಲ್ಲಿ ವಿಭಜನೆಯ ನಂತರದ ಗಲಭೆಗಳ ನಡುವೆ, ಕಮ್ಯುನಿಸ್ಟ್ ಪಕ್ಷದ ಸದಸ್ಯರು ಕೊಲೆಗಡುಕ ಗಲಭೆಕೋರರಿಂದ ಜನರನ್ನು ರಕ್ಷಿಸುವ ಪ್ರಯತ್ನಗಳಲ್ಲಿ ಅಸಾಧಾರಣ ಕಲಿತನವನ್ನು ಮೆರೆದರು. ಗಲಭೆಕೋರರನ್ನು ಹಿಮ್ಮೆಟ್ಟಿಸಲು ಅವರು ವೀರೋಚಿತ ಮತಪ್ರದರ್ಶನಗಳನ್ನು ನಡೆಸಿದರು.

ಕೋಮುವಾದಿ ಶಕ್ತಿಗಳು ದೇಶ ಒಡೆಯುವ ಕೆಲಸದಲ್ಲಿ ನಿರತರಾಗಿದ್ದರೆ, ಕಮ್ಯುನಿಸ್ಟರು ದೇಶದ ಏಕತೆಗಾಗಿ ದುಡಿದರು. ಕೋಮು ಶಕ್ತಿಗಳು ರಾಷ್ಟ್ರಧ್ವಜವನ್ನು, ಸಂವಿಧಾನವನ್ನು ಅವಮಾನಿಸುತ್ತಿರುವಾಗ ಮತ್ತು ಮನುಸ್ಮೃತಿಯನ್ನು ಭಾರತದ ಕಾನೂನು ಸಂಹಿತೆಯನ್ನಾಗಿ ಜಾರಿಮಾಡಬೇಕೆಂದು ಒತ್ತಾಯಿಸುತ್ತಿರುವಾಗ, ಕಮ್ಯುನಿಸ್ಟರು ಪಾಳೇಗಾರಿ ಪದ್ಧತಿಯ ಮೂಲೋತ್ಪಾಟನೆಗಾಗಿ, ಪುರುಷರು ಮತ್ತು ಮಹಿಳೆಯರ ನಡುವಿನ ಸಮಾನತೆಯ ಸ್ಥಾಪನೆಗಾಗಿ, ಜಾತಿ ತಾರತಮ್ಯದ ರದ್ದತಿಗಾಗಿ, ಧರ್ಮ, ಮತ, ಜನಾಂಗೀಯತೆ ಹಾಗೂ ರಾಷ್ಟ್ರೀಯತೆಯನ್ನು ಮೀರಿ ಎಲ್ಲರ ಸಮಾನತೆಗಾಗಿ ಹೋರಾಡುತ್ತಿದ್ದರು. ಕೋಮು ಶಕ್ತಿಗಳು ಹಿಟ್ಲರ್ ಮತ್ತು ಮುಸೊಲಿನಿಯಂತಹ ಸರ್ವಾಧಿಕಾರಿಗಳನ್ನು ಹಾಡಿ ಹೊಗಳುತ್ತಿರುವಾಗ, ಪ್ರಜಾಸತ್ತಾತ್ಮಕ ಹಕ್ಕುಗಳ ವಿಸ್ತರಣೆ ಮತ್ತು ಕಾರ್ಮಿಕರು, ರೈತರು ಹಾಗೂ ಇತರ ಶ್ರಮಜೀವಿಗಳಿಗೆ ಇನ್ನೂ ಹೆಚ್ಚಿನ ಹಕ್ಕುಗಳನ್ನು ಸೇರಿಸುವ ಮೂಲಕ ಸಂವಿಧಾನವನ್ನು ಬಲಪಡಿಸುವತ್ತ ಕಮ್ಯುನಿಸ್ಟರು ಕೆಲಸ ಮಾಡುತ್ತಿದ್ದರು.

ಒಂದೇ ಶಬ್ದದಲ್ಲಿ ಹೇಳಬೇಕೆಂದರೆ, ಕಮ್ಯುನಿಸ್ಟರು ದೇಶದ ಯೋಗಕ್ಷೇಮ ಮತ್ತು ಅದರ ಐಕ್ಯತೆಗಾಗಿ ತಮ್ಮ ತ್ಯಾಗ ಬಲಿದಾನಗಳನ್ನು ಮಾಡಿ ನಿಜವಾದ ದೇಶಪ್ರೇಮಿಗಳಾಗಿದ್ದಾರೆ, ಕೋಮು ಶಕ್ತಿಗಳು ದೇಶವನ್ನು ವಿಭಜಿಸುವ ಹಾಗೂ ದೇಶವನ್ನು ಬಹುಸಂಖ್ಯಾತರ, ಸರ್ವಾಧಿಕಾರಿಗಳ, ನಿರಂಕುಶ ಪ್ರಭುತ್ವವನ್ನಾಗಿ ಪರಿವರ್ತಿಸುವ ಮೂಲಕ ದೇಶದ್ರೋಹಿಗಳಾಗಿದ್ದಾರೆ.

ನಮ್ಮ ದೇಶವು ನಿಜವಾಗಿಯೂ ಪ್ರಗತಿ ಸಾಧಿಸಬೇಕಾದರೆ, ಕಮ್ಯುನಿಸ್ಟರ ಕಣ್ಣೋಟ ಸರಿಯಾದ ದಿಕ್ಕನ್ನು ತೋರಿಸುತ್ತದೆಯೇ ವಿನಃ, ಪ್ರತಿಗಾಮಿ, ಕೋಮುವಾದಿ, ಹಿಂದುತ್ವ ಶಕ್ತಿಗಳು ಖಂಡಿತಾ ಅಲ್ಲ.

ಉಳ್ಳವರಿಗೆ ಮಣೆ ಹಾಕುವ ನೂತನ ಶಿಕ್ಷಣ ನೀತಿ...........

ಪುಟ 10 ರಿಂದ

ಅದರಲ್ಲಿ ಮೊದಲ ಸಾಲಿನಲ್ಲಿ ಹೆಣ್ಣು ಮಕ್ಕಳಿರುತ್ತಾರೆ. ಯಾಕೆಂದರೆ ನಗರಗಳಲ್ಲಿಯೇ ಇಂದಿಗೂ ಸಮರ್ಪಕ ವಿದ್ಯುತ್ ಪೂರೈಕೆ ಮತ್ತು ಮೊಬೈಲ್ ನೆಟ್ವರ್ಕಗಳು ಸಿಗದ ಪರಿಸ್ಥಿತಿ ಇರುವಾಗ ಇನ್ನು ಗ್ರಾಮೀಣ ಪ್ರದೇಶದಲ್ಲಿ ಎಲ್ಲಿ ಸಿಕ್ಕೀತು. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಕೊವಿಡ್ ಕಾರಣದಿಂದ ಪ್ರಾರಂಭವಾದ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ವಿದ್ಯಾರ್ಥಿಗಳು ಯಾವುದೋ ಬೆಟ್ಟ ಗುಡ್ಡಗಳ ಮೇಲೆ ಹೋಗಿ ಕುಳಿತುಕೊಂಡು ನೆಟ್ವರ್ಕಗಾಗಿ ಪರದಾಡುವ ಸ್ಥಿತಿ ಇದೆ. ಇನ್ನು ಕೊವಿಡ್ ಲಾಕ್ ಡೌನ್ ತಂದಿತ್ತ ಆರ್ಥಿಕ ದಾರುಣತೆಯಿಂದಾಗಿ ಆದಾಯ ಕಳೆದುಕೊಂಡ ಜನರಿಗೆ ಮಕ್ಕಳಿಗೆ ಬೇಕಾದ ಆಂಡ್ರಾಯ್ಡ್ ಫೋನ್ ಗಳನ್ನು ಎಲ್ಲಿಂದ ಒದಗಿಸಿಯಾರು. ಇಲ್ಲಿ ಕೂಡಾ ಮನೆಯಲ್ಲಿ ಮಗ ಮತ್ತು ಮಗಳು ಇದ್ದರೆ ಒಪ್ಪಿತ ಮೌಲ್ಯವೇ ಆಗಿ ಮಗನಿಗೆ ಪ್ರಾಶಸ್ತ್ಯ ಸಿಗುತ್ತದೆ. ಇಂಥಹ ಒಂದು ಕಾರಣವೇ ಸಾಕು ಸಾವಿರಾರು ಹೆಣ್ಣು ಮಕ್ಕಳು ಶಿಕ್ಷಣದ ಕಕ್ಷೆಯಿಂದ ಹೊರದಬ್ಬಲ್ಪಡುತ್ತಾರೆ. ಈಗಾಗಲೇ ಗ್ರಾಮೀಣ ಕ್ಷೇತ್ರದಲ್ಲಿ ಮಕ್ಕಳ ಆನ್‌ಲೈನ್ ತರಗತಿಗಳಿಗೆ ಅನುಕೂಲ ಕಲ್ಪಿಸಲು ತಾಳಿ ಮಾರಿ ಮೊಬೈಲ್ ಕೊಡಿಸಿದ ಸಂಗತಿಗಳು ನಮ್ಮ ರಾಜ್ಯದಲ್ಲಿಯೇ ನಡೆದ ಬೆಳಕಿಗೆ ಬಾರದ ಕಟು ಸತ್ಯವಾಗಿದೆ.

ಭಾರತದಂಥಹ ದೇಶದ ಕಟು ವಾಸ್ತವ ಸಂಗತಿಗಳನ್ನು ಪಕ್ಕಕ್ಕೆ ಸರಿಸಲಾಗಿದೆ. ಆಳವಾಗಿ ಬೇರೂರಿರುವ ಜಾತಿ ವ್ಯವಸ್ಥೆಯ ಮತ್ತು ಅಸಮಾನ ಸಾಮಾಜಿಕ ಸ್ಥಿತಿಯನ್ನು ಕಡೆಗಣಿಸಿ ಪ್ರತಿ ಪದದಲ್ಲಿಯೂ ಅರ್ಹತೆ, ಯೋಗ್ಯತೆ ಎಂಬ ಪದ ಗುಚ್ಛಗಳೇ ಕಾಣಿಸಿಕೊಳ್ಳುತ್ತವೆ. ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆಯೂ **ಭಾಗ ಎರಡು ಉನ್ನತ ಶಿಕ್ಷಣದ 9.3 ಇ ಯಲ್ಲಿ "ಬೋಧನೆ, ಸಂಶೋಧನೆ ಮತ್ತು ಸೇವೆಗಳ ಆಧಾರದಲ್ಲಿ ಅರ್ಹತಾನುಸಾರ ನೇಮಕಾತಿಗಳು ಮತ್ತು ಉದ್ಯೋಗ ಪ್ರಗತಿಯ ಮೂಲಕ ಬೋಧನೆ ಮತ್ತು ಸಾಂಸ್ಥಿಕ ನಾಯಕತ್ವದ ಸ್ಥಾನಗಳ ಸಮಗ್ರತೆಯನ್ನು ಮರುದೃಢೀಕರಿಸುವುದು."** ಎನ್ನುತ್ತದೆ. ಎಂದರೆ ಸಂವಿಧಾನ ನಿಗದಿ ಪಡಿಸಿದ ಮೀಸಲಾತಿಯಂಥಹ ಪರಿಕಲ್ಪನೆಗಳು ಮೌನವಾಗಿ ನೇಪಥ್ಯಕ್ಕೆ ತಳ್ಳಲ್ಪಡುತ್ತವೆ.

ಹಾಗೆಯೇ **10.8 ರಲ್ಲಿ ಖಾಸಗೀ ಮತ್ತು ಸರಕಾರೀ ಎರಡೂ ಕ್ಷೇತ್ರಗಳಲ್ಲಿ ಉನ್ನತ ಗುಣಮಟ್ಟದ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಬೇಕು** ಎನ್ನುತ್ತದೆ. ಹಾಗೆಯೇ **10.9 ರಲ್ಲಿ ಬೃಹತ್ ಸಂಖ್ಯೆಯಲ್ಲಿ ಶ್ರೇಷ್ಠವಾದ ಸಾರ್ವಜನಿಕ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವ ಬಲವಾದ ಆಕಾಂಕ್ಷೆಯೊಂದಿಗೆ ಸಾರ್ವಜನಿಕ ಹಾಗೂ ಖಾಸಗಿ ಸಂಸ್ಥೆಗಳೆರಡರಲ್ಲಿಯೂ ಪ್ರಗತಿ ಕಾಣುವಂತಾಗಬೇಕು. 10.10 ರಲ್ಲಿ ಮುಕ್ತ ದೂರ ಶಿಕ್ಷಣ ಮತ್ತು ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸಲು ಸಂಸ್ಥೆಗಳಿಗೆ ಆಯ್ಕೆ ಇರುತ್ತದೆ.** ಎನ್ನುವ ಮೂಲಕ ಮುಂದಿನ ದಿನಗಳಲ್ಲಿ ಶಿಕ್ಷಣ ಏನಾಗಬಹುದೆಂದು ಮುನ್ಸೂಚನೆ ನೀಡಲಾಗಿದೆ.

ರಾಜ್ಯದ ಉನ್ನತ ಶಿಕ್ಷಣ ಸಚಿವರೇ ರಾಜ್ಯಾದ್ಯಂತ ಇರುವ ವಿಶ್ವ ವಿದ್ಯಾಲಯಗಳಲ್ಲಿ ಈ ನೀತಿಯ ಪ್ರಚಾರ ಕಾರ್ಯ ನಡೆಸಿ ಅಲ್ಲಿ ತಮಗೆ ಬೇಕಾದವರಿಂದ ಈ ನೀತಿಯ ಪರವಾಗಿ ಮಾತುಗಳನ್ನಾಡಿಸುತ್ತಿದ್ದಾರೆ. ಪಟ್ಟ ಪದವಿ ಸ್ಥಾನ ಭದ್ರತೆಗಳ ಮೇಲೆ ಕಣ್ಣಿಟ್ಟವರು ಮುಕ್ತ ಕಂಠದಿಂದ ಈ ನೀತಿಯನ್ನು ಹಾಡಿ ಹೊಗಳುತ್ತಿದ್ದಾರೆ. ಇದು ನಿಜವಾಗಿಯೂ ಉತ್ತಮ ನೀತಿಯೇ ಆಗಿದ್ದರೆ ಇಂಥಹ ಮುಚ್ಚು ಮರೆಯ ಕಣ್ಣುಮುಚ್ಚಾಲೆಯಾಟದ ಅಗತ್ಯವಿತ್ತೇ? ಸರಕಾರ ನಿರ್ಭಿಡೆಯಿಂದ ವಿಧಾನ ಸಭೆಯಲ್ಲಿ ಮಂಡಿಸಿ ಚರ್ಚೆಗೆ ಬಿಟ್ಟು, ರಾಜ್ಯದ ಶಿಕ್ಷಣ ತಜ್ಞರ ಜೊತೆ ಸಮಾಲೋಚನೆ ಮಾಡಿ ಪ್ರಾಥಮಿಕ ಹಂತದಿಂದ ಪ್ರಾರಂಭಿಸಿ ಹಂತ ಹಂತವಾಗಿ ಶುರುಮಾಡ ಬಹುದಿತ್ತಲ್ಲ. ಅದಿಲ್ಲದೇ ಈಗಿನ ಕಾರ್ಯವೈಖರಿ ನೋಡಿದರೆ. . . ಅಲ್ಲೊಂದು ಸಂಚು ಕಾಣಿಸುತ್ತದೆ.

ಹೀಗೆ ಪಟ್ಟಿ ಮಾಡುತ್ತ ಹೋದರೆ ತರಾತುರಿಯಲ್ಲಿ ಈ ಮಾದರಿಯನ್ನು ಅನ್ವಯಿಸುವ ಮೂಲಕ 34 ವರ್ಷಗಳ ನಂತರ ತಂದ ಶಿಕ್ಷಣ ನೀತಿ ದೇಶದ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುವ ಬದಲು ಸಂಪೂರ್ಣವಾಗಿ ಹದಗೆಡಿಸಲಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

JANASHAKTHI KANNADA VARA PATRIKE September 6-12, 2021 Price: Rs. 10/- Date of Publication: 3 September 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯನ್ನು ವಿರೋಧಿಸಿ ರಾಜ್ಯದಾದ್ಯಂತ ಸಿಪಿಐಎಂ ನಿಂದ ಪ್ರತಿಭಟನೆ















ದಮನ ತಂತ್ರಕ್ಕೆ ರೈತರು ಮಣಿಯುವುದಿಲ್ಲ: ಹನ್ನನ್ ಮೊಲ್ಲಾ ದಿಲ್ಲಿ ಹೋರಾಟದ ನಾಯಕರಿಗೆ ರೈತ ಸನ್ಮಾನ



ಈಗಾಗಲೇ 600 ರೈತರು ಹುತಾತ್ಮರಾಗಿದ್ದು, ಹೋರಾಟ ನಿರತ ರೈತರು ದಮನ ತಂತ್ರಕ್ಕೆ ಮಣಿಯುವುದಿಲ್ಲ ಎಂದು ದಿಲ್ಲಿ ಹೋರಾಟದ ನಾಯಕ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನನ್ ಮೊಲ್ಲಾ ಹೇಳಿದ್ದಾರೆ.

ಮಂಡ್ಯ ನಗರದಲ್ಲಿ ನಡೆದ ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಕೇಂದ್ರ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ರವಿವಾರ ರೈತ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸರಕಾರ ಸಾರಾಸಗಟು ಈ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯದ ಹೊರತು ಹೋರಾಟದಿಂದ ಹಿಂದೆ ಸರಿಯುವುದಿಲ್ಲವೆಂಬ ನಿರ್ಣಯ ಕೈಗೊಳ್ಳಲಾಗಿದೆ ಎಂದರು. ರೈತರಿಗೆ ಮರಣ ಶಾಸನವಾಗಿರುವ ಕೇಂದ್ರ ಸರಕಾರದ ಮೂರು ಕೃಷಿ ಕಾಯ್ದೆಗಳನ್ನು ಸರಕಾರ ಹಿಂಪಡೆಯಲೇಬೇಕು. ಸರಕಾರ ಎಷ್ಟೇ ದಮನಕಾರಿ ತಂತ್ರ ಬಳಸಿದರೂ ಒಂಬತ್ತು ತಿಂಗಳಿಂದ ನಡೆಯುತ್ತಿರುವ ಹೋರಾಟವನ್ನು ತಡೆಯಲು ಸಾಧ್ಯವಾಗುವುದಿಲ್ಲ ಎಂದು ಅವರು ಗುಡುಗಿದರು.



ಚಳವಳಿಯನ್ನು ತೀವ್ರಗೊಳಿಸುವ ಉದ್ದೇಶದಿಂದ ಸೆ.5 ರಂದು ಮುಝಪ್ಫರ್ ನಗರದಲ್ಲಿ ಬೃಹತ್ ರೈತ ಸಮಾವೇಶ ನಡೆಯಲಿದ್ದು, ಮುಸ್ಲಿ ಝಾಟ್ ರೈತರು ಸೇರಿದಂತೆ 5 ಲಕ್ಷ ರೈತರು ಸೇರಲಿದ್ದಾರೆ. ಹಾಗೆಯೇ ಸೆ.25 ರಂದು ಭಾರತ ಬಂದ್‌ಗೆ ಕರೆಕೊಡಲಾಗಿದೆ. ದಿಲ್ಲಿ ಸೇರಿದಂತೆ ಎಲ್ಲ ರಾಜ್ಯಗಳ ರಾಜಧಾನಿಯನ್ನು ಸಂಪರ್ಕಿಸುವ ಹೆದ್ದಾರಿಗಳನ್ನು ತಡೆಯಲಾಗುವುದು ಎಂದು ಅವರು ಹೇಳಿದರು.

ಮೋದಿ ಮಹಾನ್ ಸುಳ್ಳುಗಾರ, ರೈತ, ಜನವಿರೋಧಿ ಪ್ರಧಾನಿಯನ್ನು ಈ ದೇಶ ಕಂಡಿಲ್ಲ. ಚುನಾವಣೆಗೆ ಮುನ್ನ ಸ್ವಾಮಿನಾಥನ್ ವರದಿ ಜಾರಿಗೆ ತರುತ್ತೇನೆಂದು ಹೋದಲೆಲ್ಲಾ ಭರವಸೆ ನೀಡಿದ್ದ ಮೋದಿ, ಜಾರಿಗೊಳಿಸಲಾಗುವುದಿಲ್ಲವೆಂದು ಸುಪ್ರೀಂಕೋರ್ಟ್‌ಗೆ ವಿವರಣೆ ನೀಡಿದ್ದಾರೆ. ಹಾಗಾದರೆ ಭರವಸೆ ಏಕೆ ಕೊಡಬೇಕಿತ್ತು? ಮೋದಿ ಮಹಾನ್ ಸುಳ್ಳುಗಾರ ಎಂಬುದಕ್ಕೆ ಇದಕ್ಕಿಂತ ಸಾಕ್ಷಿಬೇಕೇ?

ಮೂರು ಕೃಷಿ ಕಾಯ್ದೆಗಳ ಬಗ್ಗೆ ಎಳೆಎಳೆಯಾಗಿ ವಿವರಿಸಿದ ಮೊಲ್ಲಾ ಅವರು, ಇವುಗಳು ಜಾರಿಯಾದರೆ ದೇಶದ ಇಡೀ ರೈತ, ಕೃಷಿಕೂಲಿಕಾರರು ಸಂಪೂರ್ಣ ನಾಶವಾಗಲಿದ್ದಾರೆ. ಅಂಬಾನಿ, ಅದಾನಿಯಂತಹ ಕಾರ್ಪೊರೇಟ್ ಗಳಿಗೆ ರತ್ನಗಂಬಳಿಯಾಗಲಿವೆ ಎಂದು ಎಚ್ಚರಿಸಿದರು.

ಕೃಷಿ ನಷ್ಟದ ಕಸುಬ: ಶೇ.99ರಷ್ಟು ರೈತರು ಬೆಳೆದ ಉತ್ಪನ್ನಗಳನ್ನು ನಷ್ಟದ ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಪೆಟ್ರೋಲ್, ಡೀಸೆಲ್, ರಾಸಾಯನಿಕ ಗೊಬ್ಬರಗಳ ದುಬ್ಬಟ್ಟು ದರ ಏರಿಕೆಯಿಂದ ಕೃಷಿ ಇಂದು ನಷ್ಟದ ಕಸುಬಾಗಿದೆ. ಲಕ್ಷಾಂತರ ಜನರು ಕೃಷಿಯನ್ನು ತೊರೆಯುತ್ತಿದ್ದಾರೆ. ಇದೇ ಮುಂದುವರಿದರೆ ದೇಶದಲ್ಲಿ ಆಹಾರ ಬಿಕ್ಕಟ್ಟು ಉಂಟಾಗಲಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಹನ್ನನ್ ಮೊಲ್ಲಾರವರಿಗೆ ಶಾಲು ಹೊದಿಸಿ ಹೂಮಾಲೆ ಹಾಕಿ ಸನ್ಮಾನಿಸಿದರು. ಪ್ರಾಂತ ಕೃಷಿ ಕೂಲಿಕಾರರ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿ, ಜಿಲ್ಲಾಧ್ಯಕ್ಷ ಎಂ.ಪುಟ್ಟಮಾದು, ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ದೇವಿ, ವೆಂಕಟಾಚಲಯ್ಯ, ತುಮಕೂರಿನ ನಿವೃತ್ತ ಶಿಕ್ಷಕ ಅಜ್ಜಪ್ಪ, ಟಿ.ಎಲ್.ಕೃಷ್ಣಗೌಡ, ಟಿ.ಯಶವಂತೆ, ಎನ್.ಎಲ್.ಭರತ್‌ರಾಜ್ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**